ಸಂಪುಟ: 04 ಸಂಚಿಕೆ: 355 ಪುಟಗಳು: 08 ಶನಿವಾರ 08 ಮಾರ್ಚ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

9448225696 +91 8035841833 ₹5

**ಮುಂಜಾನೆ ಮಾತು**

ಅಹಂಕಾರದಿಂದ
ಹೊರ ಬಂದು
ಫಲದಾಸೆ ಇಲ್ಲದೆ
ಕರ್ಮ ಮಾಡು.



# ಉದಯ ವಾಹಿನಿ

ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ






# ಬಜೆಟ್ ಭರ್ಜರಿ ಸದನ ಗಾಬರಿ




## ಬಜೆಟ್ ಅನ್ನು ಇಸ್ಲಾಮೀಕರಣಗೊಳಿಸಿದ ಸಿಎಂ; ಇದು ಹಲಾಲ್ ಬಜೆಟ್ ಬಿಜೆಪಿ ಟೀಕೆ

ದೇಶದಲ್ಲೇ ರಫ್ತಿನಲ್ಲಿ ಕರ್ನಾಟಕ ನಂಬರ್ 1




■ ಇದು ಮುಸ್ಲಿಮರ ಬಜೆಟ್, ಅಭಿವೃದ್ಧಿಯ ಯೋಜನೆಗಳೇ ಇಲ್ಲದ ಜನವಿರೋಧಿ ಬಜೆಟ್ ■ ಬಿಜೆಪಿ ನಾಯಕರ ಕಿಡಿ 16ನೇ ಬಾರಿಗೆ ಬಜೆಟ್ ಮಂಡಿಸಿ ದಾಖಲೆ ನಿರ್ಮಿಸಿದ ಸಿಎಂ ■ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸರ್ಕಾರದಿಂದ ಹಲವು ನೆರವು ■ ಪ್ರತಿಭಾನ್ವಿತ 60 ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನ

### ಅಬಕಾರಿ ಇಲಾಖೆಗೆ 40000 ಕೋಟಿ ರಾಜಸ್ವ ಸಂಗ್ರಹ ಗುರಿ

ಪ್ರಸಕ್ತ 2025-26ನೇ ಸಾಲಿನಲ್ಲಿ 40,000 ಕೋಟಿ ರೂ.ಗಳ ರಾಜಸ್ವ ಸಂಗ್ರಹಣಾ ಗುರಿಯನ್ನು ಅಬಕಾರಿ ಇಲಾಖೆಗೆ ನೀಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ. 2024-25ರ ಪರಿಷ್ಕೃತ ಅಂದಾಜಿನಲ್ಲಿ ಅಬಕಾರಿ ತೆರಿಗೆಯಿಂದ ಒಟ್ಟು 36,500 ಕೋಟಿ ರೂ.ಗಳ ರಾಜಸ್ವನಿರೀಕ್ಷಿಸಲಾಗಿದೆ. ಅದರಂತೆ 2025-26ನೇ ಸಾಲಿಗೆ 40,000 ಕೋಟಿ ರೂ.ಗಳ ಸಂಗ್ರಹಣಾ ಗುರಿಯನ್ನು ಅಬಕಾರಿ ಇಲಾಖೆಗೆ ನೀಡಲಾಗಿದೆ ಎಂದು ಹೇಳಿದರು.ಪ್ರೀಮಿಯಂ ಮದ್ಯದ ಬೆಲೆಗಳನ್ನು ನೆರೆಯ ರಾಜ್ಯಗಳಲ್ಲಿ ವಿಧಿಸುತ್ತಿರುವ ಬೆಲೆಗಳಿಗೆ ಅನುಸಾರವಾಗಿ ಪರಿಷ್ಕರಿಸುವುದರೊಂದಿಗೆ ಸರ್ಕಾರವು ಅಬಕಾರಿ ಸ್ಲ್ಯಾಬ್‌ಗಳನ್ನು ತರ್ಕಬದ್ದಗೊಳಿಸಿದೆ. 2025-26ರಲ್ಲೂ ಅಬಕಾರಿ ಸ್ಲ್ಯಾಬ್‌ಗಳನ್ನು ತರ್ಕಬದ್ದಗೊಳಿಸುವ ಪ್ರಕ್ರಿಯೆಯನ್ನು ಮುಂದುವರಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

### ಮೀನುಗಾರರಿಗೆ ಭರ್ಜರಿ ಗಿಫ್ಟ್!

ಮೀನುಗಾರಿಕೆಗೆ ಸಂಬಂಧಿಸಿದ ರಸ್ತೆಗಳ ಅಭಿವೃದ್ಧಿಗೆ 30 ಕೋಟಿ ಮೀಸಲಿಡಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀನುಗಾರರು 4 ಚಕ್ರದ ವಾಹನ ಖರೀದಿಸಲು 3 ಲಕ್ಷ ರೂ. ನೆರವು ನೀಡಲಾಗುವುದು. ದೋಣಿಗಳಿಗೆ ಹೊಸ ಮೋಟರ್ ಖರೀದಿಸಲು ಶೇ.50ರಷ್ಟು ಸಬ್ಸಿಡಿ ನೀಡಲಾಗುವುದು. ಮೈಸೂರಿನಲ್ಲಿ ಹೈಟೆಕ್ ಮತ್ಸ್ಯ ದರ್ಶಿನಿ ಪ್ರಾರಂಭಿಸಲಾಗುವುದು. ಮಲ್ಪೆಯಲ್ಲಿ ಪಾರ್ಕಿಂಗ್ ಸಮಸ್ಯೆ ನಿವಾರಣೆಗೆ ಕ್ರಮ ಕೈಗೊಳ್ಳಲಾಗಿದೆ. ಆಳ ಸಮುದ್ರ ಮೀನುಗಾರಿಕೆ ಬೋಟ್‌ಗಳ ಉದ್ದದ ಮಿತಿಯನ್ನು ಸಡಿಲಿಸಲಾಗಿದೆ.



ಕಾಂಗ್ರೆಸ್ ಸರ್ಕಾರ ಜನ ವಿರೋಧಿ ಹಾಗೂ ಮುಸ್ಲಿಮರ ಬಜೆಟ್ ಮಂಡಿಸಿದೆ. ಜೊತೆಗೆ ಕರ್ನಾಟಕದ ಇತಿಹಾಸದಲ್ಲೇ ಮೊದಲ ಬಾರಿಗೆ ದಾಖಲೆಯಂತೆ 1.16 ಲಕ್ಷ ಕೋಟಿ ರೂ. ಸಾಲ ಮಾಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕೊನೆಯ ಬಜೆಟ್ ಮಂಡಿಸಿದ್ದಾರೆ. ಈ ಬಜೆಟ್‌ನಲ್ಲಿ ಯಾವುದೇ ಹೊಸ ಘೋಷಣೆ ಇಲ್ಲ. ಆದರೆ, ತಿಪ್ಪೆ ಸಾರಿಸುವಂತೆ ಹಿಂದಿನ ಕಾರ್ಯಕ್ರಮಗಳನ್ನು ಮುಂದುವರಿಸಲಾಗಿದೆ. ಹಳೆ ಮೈಸೂರು ಅಥವಾ ಉತ್ತರ ಕರ್ನಾಟಕಕ್ಕೆ ನೀರಾವರಿ ಯೋಜನೆಗಳನ್ನು ಕೇಂದ್ರ ಸರ್ಕಾರದ ಅನುಮತಿ ಬಳಿಕ ಮುಂದುವರಿಸುತ್ತೇವೆ.

**-ಆರ್.ಅಶೋಕ, ಪ್ರತಿಪಕ್ಷ ನಾಯಕ**

**• ಉದಯವಾಹಿನಿ, ಬೆಂಗಳೂರು**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ವಿಧಾನಸಭೆಯಲ್ಲಿ 4 ಲಕ್ಷ ಕೋಟಿ ರೂ.ಗೂ ಹೆಚ್ಚು ಗಾತ್ರದ 2025-26ನೇ ಸಾಲಿನ ಬಜೆಟ್ ಮಂಡಿಸಿದರು. ಈ ಮೂಲಕ 16ನೇ ಬಾರಿಗೆ ಆಯವ್ಯಯ ಮಂಡಿಸಿದ ದಾಖಲೆಗೆ ಭಾಜನರಾಗಿದ್ದಾರೆ.

ಸದನ ಬೆಳಗ್ಗೆ 10.15ಕ್ಕೆ ಆರಂಭವಾದ ತಕ್ಷಣ ಮೊಣಕಾಲಿನ ನೋವಿನ ನಡುವೆಯೂ ಆರಂಭದಲ್ಲಿ ನಿಂತು ಸಿಎಂ ಬಜೆಟ್ ಭಾಷಣ ಆರಂಭಿಸಿದರು. ಬಳಿಕ ಸಭಾಧ್ಯಕ್ಷರ ಅನುಮತಿ ಮೇರೆಗೆ ಕುಳಿತುಕೊಂಡು ಸುಮಾರು 3 ಗಂಟೆ 30 ನಿಮಿಷಗಳ ಕಾಲ ಬಜೆಟ್ ಪ್ರತಿಯನ್ನು ಓದಿದರು.

ಒಳ ಮೀಸಲಾತಿಗೆ ಒತ್ತಾಯಿಸಿ ಗ್ಯಾಲರಿಯಲ್ಲಿ ಕೂಗಿದ ವ್ಯಕ್ತಿ: ಸಿಎಂ ಸಿದ್ದರಾಮಯ್ಯ ಬಜೆಟ್ ಪ್ರತಿ ಓದುತ್ತಿದ್ದ ವೇಳೆಯಲ್ಲೇ ಗ್ಯಾಲರಿಯಲ್ಲಿ ಕುಳಿತಿದ್ದ ವ್ಯಕ್ತಿಯೊಬ್ಬ ಏಕಾಏಕಿ ಒಳಮೀಸಲಾತಿ ನೀಡಿ ಎಂದು ಜೋರಾಗಿ ಕೂಗಿದ್ದಾನೆ. ಇದರಿಂದಾಗಿ ಒಂದು ಕ್ಷಣ ಇಡೀ ಸದನ ಗಾಬರಿಗೊಳಗಾಯಿತು.

ಸ್ಪೀಕರ್ ಯು.ಟಿ.ಖಾದರ್ ಸೂಚನೆ ಹಿನ್ನೆಲೆಯಲ್ಲಿ ವ್ಯಕ್ತಿಯನ್ನು ವಶಕ್ಕೆ ಪಡೆದು ಮಾರ್ಷಲ್‌ಗಳು ಕರೆದೊಯ್ದರು. ಆತ, ಯಾರು..., ಯಾರಿಂದ ಪಾಸ್ ಪಡೆದು ಒಳಗೆ ಪ್ರವೇಶ ಮಾಡಿದ್ದಾನೆ ಎಂಬುದು ಸದ್ಯಕ್ಕೆ ತಿಳಿದು ಬಂದಿಲ್ಲ. ಕವಿಗಳು, ದಾರ್ಶನಿಕರು, ಚಿಂತಕರ ಹೇಳಿಕೆಗಳ ಉಲ್ಲೇಖ: ಬಜೆಟ್ ಮಂಡನೆ ವೇಳೆ ಹಲವಾರು ಕವಿಗಳು, ದಾರ್ಶನಿಕರು, ಚಿಂತಕರ ಹೇಳಿಕೆಗಳನ್ನು ಉಲ್ಲೇಖಿಸಲಾಗಿದೆ. ಪ್ರಮುಖವಾಗಿ ರಾಷ್ಟ್ರಕವಿ ಕುವೆಂಪು, ಗೋಪಾಲಕೃಷ್ಣ ಅಡಿಗ, ಕೆ.ಎಸ್.ನಿಸ್ಸಾರ್ ಅಹಮ್ಮದ್, ಕುಮಾರವ್ಯಾಸ, ಬಸವಣ್ಣ, ವಚನಕಾರ ನುಲಿಯ ಚಂದಯ್ಯ, ಸಾವಿತ್ರಿ ಬಾಯಿಪುಲೆ, ಡಾ.ಬಿ.ಆರ್.ಅಂಬೇಡ್ಕರ್, ಡಾ.ಮನೋಹರ ಲೋಹಿಯಾ, ವಿಲ್ಸನ್ ಕಟೀಲ್ ಸೇರಿದಂತೆ ಹಲವು ಮಹನೀಯರ ಹೆಸರುಗಳನ್ನು ಸಿಎಂ ಉಲ್ಲೇಖಿಸಿದ್ದಾರೆ. ಆರಂಭದಲ್ಲಿ ಕನ್ನಡಕ್ಕೆ ಪ್ರಥಮ ಜ್ಞಾನಪೀಠ ಪ್ರಶಸ್ತಿ ದೊರಕಿಸಿಕೊಟ್ಟ ಕುವೆಂಪು ಅವರ 'ನಮ್ಮ ಕೈ ಬುಟ್ಟಿಯಲ್ಲಿ ಸಿಡಿಲ ಗೂಡಿಹಿದು ಹುಡುಕಿ ನೋಡಿದರಲ್ಲಿ ಸುಮದ ಬೀಡಿಹುದು' ಎಂದು ಬರೆಯಲಾಗಿದೆ. ಅದೇ ರೀತಿ ಗೋಪಾಲಕೃಷ್ಣ ಅಡಿಗ ಅವರ, 'ಇರುವುದೆಲ್ಲವನ್ನು ಎಲ್ಲಾ ಜನಕ್ಕೆ ತೆರವಾಗಿಸುವ, ಸಮಬಗೆಯ ಸಮಸುಖದ ಸಮದುಃಖದ, ಸಾಮರಸ್ಯದ ಸಾಮಗಾನ ಲಹರಿಯ ಮೇಲೆ, ತೇಲಿ ಬರಲಿದೆ ನೋಡು. ನಮ್ಮ ನಾಡು' ಎಂದು ಹೇಳಿದ್ದಾರೆ.

ಕೃಷಿ ಮೊದಲು ಸರ್ವಕ್ಕೆ ಕೃಷಿಯಿಂದ ಪಸರಿಸುವುದು ಆ ಕೃಷಿಯನುದ್ಯೋಗಿಸುವ ಜನವನು ಪಾಲಿಸುವುದು ಎಂಬ ಕುಮಾರವ್ಯಾಸರ ವಾಕ್ಯವನ್ನೂ ಉಲ್ಲೇಖಿಸಲಾಗಿದೆ. ಖ್ಯಾತ ಕವಿ ಕೆ.ಎಸ್.ನಿಸಾರ್ ಅಹಮದ್ ಅವರ ನಿತ್ಯೋತ್ಸವ ಹಾಡಿನ 'ಹಲವೆನ್ನದ ಹಿರಿಮೆಯೆ, ಕುಲವೆನ್ನದ ಗರಿಮೆಯೆ, ಸದ್ವಿಕಾಸಶೀಲ ನುಡಿಯ ಲೋಕಾವೃತ ಸೀಮೆಯೆ, ಈವತ್ಸರ ನಿರ್ಮತ್ಸರ ಮನದುದಾ ಮಹಿಮೆಯೆ' ಅನ್ನು ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದೆ. 'ವಿಲ್ಸನ್ ಕಟೀಲ್ ಅವರ ಹಾ! ಗಂಟಲು ಒಣಗಿದೆ. ತಕೋ ಈ ಬಂಗಾರದ ಸರಪಳಿ ಬದಲಾಗಿ ಒಂದು ಗುಟುಕು ನೀರು ಕೊಡು' ಎಂಬ ವಾಕ್ಯವನ್ನು ಪ್ರಸ್ತಾಪಿಸಿದ್ದಾರೆ. ಇದೇ ರೀತಿ ಖ್ಯಾತ ಶಿಕ್ಷಣ ತಜ್ಞೆ ಸಾವಿತ್ರಿಭಾಯಿ ಫುಲೆ ಅವರ ಶೋಷಿತರ, ಬಹಿಷ್ಕೃತರ ಕಣ್ಣೀರನ್ನು ತೊಡೆದು ಹಾಕಿ ಜಾತಿ ವ್ಯವಸ್ಥೆ ಸಂಕೋಲೆಯನ್ನು ಮುರಿದು ಶಿಕ್ಷಣ ಪಡೆದುಕೋ ಎಂಬ ಮಾತನ್ನು ಸಿಎಂ ಸ್ಮರಿಸಿದ್ದಾರೆ.

### ಹಂತಹಂತವಾಗಿ ಸಾರಿಗೆ ಇಲಾಖೆಯ ಎಲ್ಲಾ ದಾಖಲೆಗಳ ಡಿಜಿಟಲೀಕರಣ

ಸಾರಿಗೆ ಇಲಾಖೆಯ ಅಧೀನ ಕಚೇರಿಗಳಲ್ಲಿರುವ ಎಲ್ಲಾ ದಾಖಲೆಗಳನ್ನು ಹಂತಹಂತವಾಗಿ ಡಿಜಿಟಲೀಕರಣ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ. ಪ್ರಸಕ್ತ ಸಾಲಿನಲ್ಲಿ 5 ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿನ ದಾಖಲೆಗಳನ್ನು 25 ಕೋಟಿ ರೂ. ವೆಚ್ಚದಲ್ಲಿ ಡಿಜಿಟಲೀಕರಣಗೊಳಿಸುವುದಾಗಿ ತಿಳಿಸಿದ್ದಾರೆ. ವಾಹನ ಸಂಚಾರ ಮೇಲ್ವಿಚಾರಣೆ ಮತ್ತು ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ಪತ್ತೆ ಹಚ್ಚಲು ದಾವಣಗೆರೆ, ಧಾರವಾಡ, ಕಲಬುರಗಿ, ಬೆಳಗಾವಿ, ಚಿತ್ರದುರ್ಗ, ಹಾವೇರಿ, ಹೊಸಪೇಟೆ, ಬಳ್ಳಾರಿ, ವಿಜಯಪುರ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಒಟ್ಟು 60 ಸ್ಥಳಗಳಲ್ಲಿ 50 ಕೋಟಿ ರೂ. ವೆಚ್ಚ ಮಾಡಿ ಕೃತಕ ಬುದ್ಧಿಮತ್ತೆ ಆಧಾರಿತ ವಿದ್ಯುನ್ಮಾನ ಕ್ಯಾಮರಾಗಳನ್ನು ಖರೀದಿ ಮಾಡುವುದಾಗಿ ತಿಳಿಸಿದ್ದಾರೆ. ರಾಜ್ಯದಲ್ಲಿ ಪ್ರಗತಿಯಲ್ಲಿರುವ 42 ಸ್ವಯಂಚಾಲಿತ ಪರೀಕ್ಷಾ ಪಥಗಳ ನಿರ್ಮಾಣವನ್ನು ಪೂರ್ಣಗೊಳಿಸುವ ಜೊತೆಗೆ ಮುಂದಿನ ವರ್ಷ 20 ಕೋಟಿ ರೂ. ವೆಚ್ಚದಲ್ಲಿ ಹೊನ್ನಾವರ, ಚಾಮರಾಜನಗರ, ಚಿತ್ರದುರ್ಗದಲ್ಲಿ ಸ್ವಯಂಚಾಲಿತ ಪರೀಕ್ಷಾ ಪಥಗಳನ್ನು ನಿರ್ಮಿಸುವುದಾಗಿ ತಿಳಿಸಿದ್ದಾರೆ.


**ರಾಜಧಾನಿ ಅಭಿವೃದ್ಧಿಗೆ 7,000 ಕೋಟಿ ರೂ, ಬ್ರ್ಯಾಂಡ್ ಬೆಂಗಳೂರು ಹೆಸರಿನಲ್ಲಿ ಬಂಪರ್ ಕೊಡುಗೆ**

**2ವರ್ಷಗಳಲ್ಲಿ ಒಟ್ಟು 98.60 ಕಿ.ಮೀ ಹೆಚ್ಚುವರಿ ನಮ್ಮ ಮೆಟ್ರೋ ಜಾಲ ಅಭಿವೃದ್ಧಿ**

**ಬೆಂಗಳೂರು ಸುರಂಗ ರಸ್ತೆ ಯೋಜನೆಗೆ ಭಾರೀ ಅನುದಾನ ಘೋಷಣೆ**

**ಬೆಂಗಳೂರು ಮೆಜೆಸ್ಟಿಕ್‌ನಲ್ಲಿ ಸಾರಿಗೆ ಹಬ್ ನಿರ್ಮಾಣ**

**ಬಿಬಿಎಂಪಿ ವ್ಯಾಪ್ತಿಯಲ್ಲಿರುವ 460 ಕಿ.ಮೀ. ರಸ್ತೆ ಜಾಲವನ್ನು ₹660 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ**



ಸಿಎಂ ಸಿದ್ದರಾಮಯ್ಯನವರು ಮಂಡಿಸಿರುವ ಬಜೆಟ್ ರಾಜ್ಯದ ಜನತೆಯ ನಿರೀಕ್ಷೆಯನ್ನು ಹುಸಿ ಮಾಡಿದೆ. ನಿಖರ ಭರವಸೆ ನೀಡುವ ಯೋಜನೆ ಹಾಗೂ ಅದಕ್ಕೆ ಅನುದಾನ ಪ್ರಕಟಿಸದೆ ಆಕರ್ಷಕ ಕಾರ್ಯಕ್ರಮಗಳನ್ನು ಘೋಷಿಸಿ, ಜನರ ಮೂಗಿಗೆ ತುಪ್ಪ ಸವರಲು ಹೊರಟಿದ್ದಾರೆ. ಅಲ್ಪಸಂಖ್ಯಾತರ ಹೆಸರಿನಲ್ಲಿ ಮುಸ್ಲಿಂ ಸಮುದಾಯವನ್ನು ಓಲೈಸಲು ಒತ್ತು ನೀಡಿರುವ ಬಜೆಟ್. ಶಿಕ್ಷಣ ಕ್ಷೇತ್ರದ ಸಮಗ್ರ ಅಭಿವೃದ್ಧಿ ಬಗ್ಗೆ ಯಾವುದೇ ಕೊಡುಗೆ ನೀಡಿಲ್ಲ. ಉದ್ಯೋಗ ಸೃಷ್ಟಿಗೆ ಅವಕಾಶವಿರುವ ಕೈಗಾರಿಕೆಗಳಿಗೆ ಉತ್ತೇಜನವೇ ಇಲ್ಲ. ವಿಶೇಷವಾಗಿ ಕೃಷಿ ವಲಯಕ್ಕೆ ಆದ್ಯತೆ ನೀಡುವ ನಿಟ್ಟಿನಲ್ಲಿ ರೈತರ ನಿರೀಕ್ಷೆಗಳನ್ನು ಸಂಪೂರ್ಣವಾಗಿ ಹುಸಿಗೊಳಿಸಿದೆ.

**-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ**



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್ ಪಾಕಿಸ್ತಾನದ ಬಜೆಟಾ ಅಥವಾ ಕರ್ನಾಟಕದ ಬಜೆಟಾ.. ಹಣಕಾಸಿನ ಸಚಿವರೂ ಆಗಿರುವ ಸಿದ್ದರಾಮಯ್ಯ ಅತೀ ಹೆಚ್ಚು ಬಜೆಟ್ ಮಂಡಿಸಿದ್ದಾರೆ. ಇದು ಪಾಕಿಸ್ತಾನದ ಬಜೆಟ್ ಅಥವಾ ಕರ್ನಾಟಕದ ಬಜೆಟ್ ಎಂಬ ಸಂಶಯವಿದೆ. ಇದು ಸಿದ್ದರಾಮಯ್ಯ ಅವರ ಬಜೆಟ್ ಅಲ್ಲ, ಬದಲಾಗಿ ಜಮೀರ್ ಅಹ್ಮದ್ ಖಾನ್ ಅವರ ಬಜೆಟ್ ಆಗಿದೆ. ಕೋಮುಗಲಭೆ ಎಬ್ಬಿಸುವ ಬಜೆಟ್ ಇದಾಗಿದೆ.

**-ಬಸನಗೌಡ ಪಾಟೀಲ್ ಯತ್ನಾಳ್ ಬಿಜೆಪಿ ಹಿರಿಯ ಶಾಸಕ**

**110 ಹಳ್ಳಿಗಳಲ್ಲಿರುವ 50 ಲಕ್ಷ ನಿವಾಸಿಗಳಿಗೆ ಜೀವಜಲ**

### ಗ್ಯಾರಂಟಿ ಯೋಜನೆಗಳಿಗೆ 51,034 ಕೋಟಿ ಮೀಸಲು


ಪ್ರಸಕ್ತ ಹಣಕಾಸು ವರ್ಷದಲ್ಲಿ ಗ್ಯಾರಂಟಿ ಯೋಜನೆಗಳಿಗಾಗಿ 51,034 ಕೋಟಿ ರೂ. ಒದಗಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್‌ನಲ್ಲಿ ತಿಳಿಸಿದ್ದಾರೆ. ಕಳೆದ ಎರಡು ಆಯವ್ಯಯಗಳಲ್ಲಿ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನ ಮಾಡುವುದರ ಜೊತೆಗೆ ವಿತ್ತೀಯ ಕೊರತೆಯನ್ನು ಜಿಎಸ್‌ಡಿಪಿಯ ಶೇ.3ರ ಮಿತಿಯೊಳಗೆ ಮತ್ತು ಒಟ್ಟು ಹೊಣೆಗಾರಿಕೆಯನ್ನು ಜಿ.ಎಸ್.ಡಿ.ಪಿಯ ಶೇ.25ರ ಮಿತಿಯೊಳಗೆ ನಿಯಂತ್ರಿಸುವ ಮೂಲಕ ವಿತ್ತೀಯ ಶಿಸ್ತನ್ನು ಪಾಲಿಸಲಾಗಿದೆ ಎಂದು ತಿಳಿಸಿದರು. ರಾಜ್ಯದ ರಸ್ತೆ ಮತ್ತು ಮೂಲಸೌಕರ್ಯದ ಅಭಿವೃದ್ಧಿಗಾಗಿ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಎಂಬ ಹೊಸ ಯೋಜನೆಯನ್ನು ಜಾರಿಗೆ ತರಲಾಗುವುದು.

### ಕೆಐಎಡಿಬಿ ಭೂಮಿ ಹಂಚಿಕೆಯಲ್ಲೂ ಮುಸ್ಲಿಂರಿಗೆ ಶೇ.20 ರಷ್ಟು ಮೀಸಲಾತಿ

ಅಲ್ಪಸಂಖ್ಯಾತ ಮತ್ತು ಹಿಂದುಳಿದವರ ಓಲೈಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿಯೂ ಮನಸು ಮಾಡಿದ್ದಾರೆ. ಗುತ್ತಿಗೆ ಕಾಮಗಾರಿ ನೀಡಿಕೆಯಲ್ಲಿನ ಮೀಸಲಾತಿ ಜೋತೆಗೆ ಕೈಗಾರಿಕಾ ಪ್ರದೇಶ ಭೂಮಿ ಹಂಚಿಕೆಯಲ್ಲೂ ಮುಸ್ಲಿಂರಿಗೆ ಶೇ.20 ರಷ್ಟು ಮೀಸಲಾತಿ ನೀಡುವುದಾಗಿ ಸಿದ್ದರಾಮಯ್ಯ ಘೋಷಿಸಿದ್ದಾರೆ.ಗುತ್ತಿಗೆ ಕಾಮಗಾರಿ ನೀಡಿಕೆಯಲ್ಲಿ ಮುಸ್ಲಿಂ ಮತ್ತು ಹಿಂದುಳಿದವರಿಗೆ ಎರಡು ಕೋಟಿ ರೂ.ವರೆಗಿನ ಗುತ್ತಿಗೆಯಲ್ಲಿ ಮೀಸಲಾತಿ ನೀಡುವುದಾಗಿ ಅವರು ತಮ್ಮ ಬಜೆಟ್ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ.ಪ್ರವರ್ಗ 1, 2ಎ, 2ಬಿ (ಮುಸ್ಲಿಂ) ಸಮುದಾಯದವರಿಗೆ 2 ಕೋಟಿ ರೂ.ವರೆಗೆ ಕಾಮಗಾರಿ ಗುತ್ತಿಗೆಯಲ್ಲಿ ಮೀಸಲಾತಿ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್‌ನಲ್ಲಿ ಘೋಷಿಸಿದ್ದಾರೆ. ಕೈಗಾರಿಕ ಪ್ರದೇಶ ಭೂಮಿ ಹಂಚಿಕೆಯಲ್ಲೂ ಪ್ರವರ್ಗ 1 2ಎ ಜತೆ 2ಬಿ (ಮುಸ್ಲಿಂ) ಗೆ ಶೇಕಡಾ 20 ರಷ್ಟು ಮೀಸಲಾತಿ ನೀಡುವುದಾಗಿ ಅವರು ಪ್ರಕಟಿಸಿದ್ದಾರೆ.

### 53 ಲಕ್ಷ ಶಾಲಾ ಮಕ್ಕಳಿಗೆ ಮೊಟ್ಟೆ, ಬಾಳೆಹಣ್ಣು

ರಾಜ್ಯದಲ್ಲಿ ಶಾಲೆಗೆ ಹೋಗುವ 53 ಲಕ್ಷ ಮಕ್ಕಳಿಗೆ ಮೊಟ್ಟೆ ಮತ್ತು ಬಾಳೆಹಣ್ಣು ನೀಡುವ ಯೋಜನೆಯನ್ನು ಸರ್ಕಾರ ವಿಸ್ತರಿಸಿದೆ. ಈ ಹಿಂದೆ ವಾರದಲ್ಲಿ ಎರಡು ದಿನ ನೀಡಲಾಗುತ್ತಿದ್ದ ಈ ಸೌಲಭ್ಯವನ್ನು ಇದೀಗ 6 ದಿನಗಳಿಗೆ ಹೆಚ್ಚಿಸಲಾಗಿದೆ. ಅಜೀಮ್ ಪ್ರೇಮ್ ಜೀ ಫೌಂಡೇಶನ್ ಸಹಯೋಗದೊಂದಿಗೆ ಈ ಯೋಜನೆಯನ್ನು ರೂಪಿಸಲಾಗಿದ್ದು, ಮಕ್ಕಳ ಪೌಷ್ಟಿಕ ಆಹಾರದ ಕೊರತೆಯನ್ನು ನೀಗಿಸುವುದು ಇದರ ಉದ್ದೇಶವಾಗಿದೆ.




ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 25-26ರ ಬಜೆಟ್‌ನಲ್ಲಿ ಆರ್ಥಿಕ ಸುಧಾರಣೆ, ಆರ್ಥಿಕ ಸಬಲೀಕರಣದತ್ತ ರಾಜ್ಯವನ್ನು ತೆಗೆದುಕೊಂಡು ಹೋಗುವ ಯಾವುದೇ ಕ್ರಮ ಇಲ್ಲ. ಇದೊಂದು ಮತ್ತೊಂದು ಜನರ ಮೇಲೆ ಆರ್ಥಿಕ ಹೊರೆಯನ್ನು ಹೇರಿರುವ ಜನ ವಿರೋಧಿ ನಿರಾಶಾದಾಯಕ ಬಜೆಟ್ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ. ಕಳೆದ ವರ್ಷ ಬಜೆಟ್ ನಲ್ಲಿ ಹೇಳಿರುವುದಕ್ಕೂ ಮಾಡಿರುವುದಕ್ಕೂ ಬಹಳ ವ್ಯತ್ಯಾಸ ಇದೆ.

**- ಬಸವರಾಜ ಬೊಮ್ಮಾಯಿ ಮಾಜಿ ಸಿಎಂ**



ಹಣಕಾಸು ಸಚಿವರೂ, ಮುಖ್ಯಮಂತ್ರಿಗಳೂ ಆಗಿರುವ ಸಿದ್ದರಾಮಯ್ಯ ಅವರು ಮಂಡಿಸಿದ ದಾಖಲೆಯ 16ನೇ ಬಜೆಟ್ ನಿಜಕ್ಕೂ ಸ್ವಿಟ್ 16 ಆಗಿದೆ. ಈ ಬಜೆಟ್ ಆಶಾದಾಯಕ ಮಾತ್ರವಲ್ಲ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿದೆ. ಆರ್ಥಿಕ ತಜ್ಞರಾಗಿರುವ ಮುಖ್ಯಮಂತ್ರಿಗಳು ಸರ್ವಸ್ಪರ್ಶಿ ಬಜೆಟ್ ಮಂಡಿಸಿದ್ದಾರೆ. ಇದು ಅವರ ಅನುಭವ ಮತ್ತು ಸರ್ವರ ಏಳಿಗೆಗೆ ಅವರು ಹೊಂದಿರುವ ಮನಸ್ಥಿತಿಗೆ ಸಾಕ್ಷಿಯಾಗಿದೆ. ನಮ್ಮ ವೈದ್ಯಕೀಯ ಶಿಕ್ಷಣ ಇಲಾಖೆ, ಕೌಶಲ್ಯಾಭಿವೃದ್ಧಿ ಇಲಾಖೆಗೂ ಹೆಚ್ಚುವರಿ ಕೊಡುಗೆಗಳನ್ನು ನೀಡಿದ್ದಾರೆ.

**-ಡಾ.ಶರಣಪ್ರಕಾಶ್ ಪಾಟೀಲ್ ಸಚಿವ**



ಕಾಂಗ್ರೆಸ್ ಸರ್ಕಾರ ಕೊಟ್ಟ ಮಾತನ್ನುಉಳಿಸಿಕೊಂಡಿದೆ, ಉತ್ತಮವಾದ ಬಜೆಟ್ ನೀಡುತ್ತಿದ್ದಾರಲ್ಲ ಎನ್ನುವ ಹೊಟ್ಟೆಯುರಿ. ನೆನ್ನೆ ವಿರೋಧ ಪಕ್ಷಗಳ ಶಾಸಕರು ಕೇವಲ ಫೋಟೋಗಾಗಿ ಮಾತ್ರ ಬಂದಿದ್ದರು. ಏನನ್ನೂ ಕೇಳಲು ಬಂದಿರಲಿಲ್ಲ. ಮುಖ್ಯಮಂತ್ರಿಗಳು ಇಲಾಖೆಗೆ ಏನು ಕೊಡಬೇಕು ಎಂದು ಸಚಿವರ ಬಳಿ ಚರ್ಚೆ ಮಾಡುತ್ತಾರೆ ಕಳೆದ ಎರಡು ದಿನಗಳಿಂದ ನೀಲಿ ಶಾಲು ಹಾಕಿಕೊಂಡು ಪ್ರತಿಪಕ್ಷಗಳು ಪ್ರತಿಭಟನೆ ಮಾಡುತ್ತಿರುವ ಕುರಿತು ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ಏನು ಬೇಕಾದರೂ ಮಾಡಲಿ. ಪ್ರತಿದಿನ ಬೇಕಾದರೂ ಪ್ರತಿಭಟನೆ ಮಾಡಲಿ, ಕೂಗಲಿ, ಕಿರುಚಲಿ. ನಾವು ರಾಜ್ಯದ ಜನತೆಗೆ ಏನು ಒಳ್ಳೆಯದು ಮಾಡಬೇಕೋ ಅದನ್ನು ಮಾಡುತ್ತೇವೆ.

**-ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ**

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹8,716/Gram24ct ₹7,990/Gram22ct | ಬೆಳ್ಳಿ: ₹99.10/Gram



## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಶಾಸ್ತ್ರೇಸ್ಮಿನ್ನುಕ್ತವಾನ್ಮನುಃ

ಮನುಸ್ಮೃತಿಯ ಪ್ರಥಮಾಧ್ಯಾಯದ ಶ್ಲೋಕಭಾಗ. ಮನುವು ಈ ಮನುಸ್ಮೃತಿಯಲ್ಲಿ ಜಗದ ಸೃಷ್ಟಿ, ಹದಿನಾರು ಸಂಸ್ಕಾರ, ಅನುಸರಿಸಬೇಕಾದ ವ್ರತ, ವಿವಾಹದ ಮೂಲಕವೇ ಗಂಡು ಹೆಣ್ಣು ಸಂಬಂಧ ಹೊಂದಬೇಕೆನ್ನುವುದು, ಯಜ್ಞ, ಜೀವನ ವೃತ್ತಿ, ಶಿಕ್ಷಿತನ ವ್ರತ, ತಿನ್ನಬಾರದ್ದು ತಿನ್ನಬೇಕಾದದ್ದು, ಸ್ವಚ್ಛತೆ ಪದಾರ್ಥ ಶುದ್ಧಿ, ಸ್ತ್ರೀಧರ್ಮ, ತಪಸ್ಸು, ಸಂನ್ಯಾಸ, ಮೋಕ್ಷ, ರಾಜಧರ್ಮ, ಸಾಕ್ಷಿ ವಿಚಾರಣೆ, ದಾಂಪತ್ಯ ಧರ್ಮ, ವಿಭಾಗ ಧರ್ಮ, ಪಗಡೆ ಮುಂತಾದವುಗಳ ತ್ಯಾಗ, ವೈಶ್ಯ ಶೂದ್ರರ ಉಪಚಾರ, ಆಪದ್ಧರ್ಮ, ಪ್ರಾಯಶ್ಚಿತ್ತ ವಿಧಿ,ಸಂಚಿತ ಆಗಾಮಿ ಪ್ರಾರಬ್ಧ ಎಂಬ ಮೂರು ವಿಧ ಕರ್ಮಕ್ಕನುಗುಣವಾದ ಸಂಸಾರಧರ್ಮ, ಕರ್ತವ್ಯಗಳ ಗುಣದೋಷ ವಿಚಾರ, ದೇಶಧರ್ಮ ಕುಲಜಾತಿಧರ್ಮ ಭ್ರಷ್ಟಧರ್ಮ ಮುಂತಾದವುಗಳನ್ನು ಪ್ರತಿಪಾದಿಸಿದ್ದಾನೆ.

# ಸಿಎಂ ಪತ್ನಿಗೆ ಇ.ಡಿ ಜಾರಿ ಮಾಡಿದ್ದ ಸಮನ್ಸ್ ರದ್ದುಗೊಳಿಸಿದ ಹೈಕೋರ್ಟ್

## ಅಕ್ರಮವಾಗಿ ನಿವೇಶನಗಳನ್ನು ಪಡೆದ ಆರೋಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಜಾರಿ

• ಉದಯವಾಹಿನಿ, ಬೆಂಗಳೂರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) ಅಕ್ರಮವಾಗಿ ನಿವೇಶನಗಳನ್ನು ಪಡೆದ ಆರೋಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ನೀಡಿರುವ ಸಮನ್ಸ್ ಹೈಕೋರ್ಟ್ ರದ್ದುಪಡಿಸಿ ಆದೇಶಿಸಿದೆ.



ಸಮನ್ಸ್ ರದ್ದು ಕೋರಿ ಪಾರ್ವತಿ ಮತ್ತು ಸಚಿವ ಬೈರತಿ ಸುರೇಶ್ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿದ್ದರು. ಇವುಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯಪೀಠ, ಆದೇಶ ನೀಡಿದೆ. ಆದೇಶದ ವಿಸ್ತೃತ ಪ್ರತಿ ಇನ್ನಷ್ಟೇ ಲಭ್ಯವಾಗಬೇಕಾಗಿದೆ.

''ಭೂಸ್ವಾಧೀನ, ಭೂಪರಿವರ್ತನೆ ಇತ್ಯಾದಿಗಳ ಬಗ್ಗೆಯೂ ಜಾರಿ ನಿರ್ದೇಶನಾಲಯ ತನಿಖೆ ನಡೆಸಿದೆ. ಲೋಕಾಯುಕ್ತ ಪೊಲೀಸರ ತನಿಖಾ ವ್ಯಾಪ್ತಿಯಲ್ಲಿ ಇ.ಡಿ ಪ್ರವೇಶಿಸಿದೆ. ಈಗಾಗಲೇ ಲೋಕಾಯುಕ್ತ ಪೊಲೀಸರು ಬಿ – ರಿಪೋರ್ಟ್ ಸಲ್ಲಿಸಿದ್ದಾರೆ. ತನಿಖೆಯಲ್ಲಿ ಯಾವುದೇ ಅಕ್ರಮ ಕಂಡುಬಂದಿಲ್ಲ ಎಂಬುದು ವರದಿಯಲ್ಲಿದೆ. ಹಾಗಾಗಿ, ಅರ್ಜಿ ಮಾನ್ಯ ಮಾಡಿ, ಇ.ಡಿ ಸಮನ್ಸ್ ರದ್ದುಗೊಳಿಸಬೇಕು'' ಎಂದು ಕೋರಿದ್ದರು.




ಇ.ಡಿ ಪರ ವಾದಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅರವಿಂದ್ ಕಾಮತ್, ಭ್ರಷ್ಟಾಚಾರ ಮತ್ತು ಅಪರಾಧದ ಹಣ ಸಯಾಮಿ ಅವಳಿಗಳಂತೆ. ಭ್ರಷ್ಟಾಚಾರ ಆಗುತ್ತಿದ್ದಂತೆ ಅಪರಾಧದ ಹಣ ಸಂಪಾದನೆಯಾಗುತ್ತದೆ. ಖಾಸಗಿ ದೂರಿನಲ್ಲಿ 5 ಸಾವಿರ ಕೋಟಿಯಷ್ಟು ಮುಡಾ ಹಗರಣವಾಗಿದೆ ಎಂದು ಪ್ರಸ್ತಾಪಿಸಲಾಗಿದೆ. ಅದನ್ನು ಆಧರಿಸಿಯೇ ಲೋಕಾಯುಕ್ತ ಪೊಲೀಸರು ಎಫ್ಐಆರ್ ದಾಖಲಿಸಿದ್ದಾರೆ. ಇದು ಕೇವಲ 14 ನಿವೇಶನಗಳಿಗೆ ಸಂಬಂಧಿಸಿದ ದೂರು ಮಾತ್ರವಲ್ಲ. ಮುಡಾವು ಅಕ್ರಮಗಳ ತಾಣವಾಗಿದ್ದು, ಆ ಬಗ್ಗೆ ಇ.ಡಿ ತನಿಖೆ ನಡೆಸುತ್ತಿದೆ'' ಎಂದು ಪೀಠಕ್ಕೆ ತಿಳಿಸಿದ್ದರು.

### ಬೈರತಿ ಸುರೇಶ್‌ಗೆ ಜಾರಿ ಮಾಡಿದ್ದ ಸಮನ್ಸ್ ರದ್ದು

ನಗರಾಭಿವೃದ್ಧಿ ಇಲಾಖೆಯ ಸಚಿವ ಬೈರತಿ ಸುರೇಶ್ ವಿರುದ್ಧ ಇ.ಡಿ ಜಾರಿ ಮಾಡಿದ್ದ ಸಮನ್ಸ್ ಅನ್ನು ಕೂಡ ಹೈಕೋರ್ಟ್ ರದ್ದುಪಡಿಸಿ ಆದೇಶಿಸಿದೆ.

ವಿಚಾರಣೆ ವೇಳೆ ಸುರೇಶ್ ಪರ ವಕೀಲರು, ''ಪ್ರಕರಣ ಸಂಬಂಧ ಲೋಕಾಯುಕ್ತ ಪೊಲೀಸರು ಪ್ರಕರಣ ದಾಖಲಿಸಿ ವಿಚಾರಣೆ ನಡೆಸುತ್ತಿದ್ದಾರೆ. ಈ ಪ್ರಕರಣದಲ್ಲಿ ಯಾವುದೇ ಸಂಬಂಧವಿಲ್ಲದಿದ್ದರೂ, ತಮ್ಮ ವಿರುದ್ಧ ಪ್ರಕರಣ ದಾಖಲಿಸಿದ್ದು, ಸಮನ್ಸ್ ಜಾರಿ ಮಾಡಲಾಗಿದೆ. ಆದ್ದರಿಂದ ಸಮನ್ಸ್ ರದ್ದು ಮಾಡಬೇಕು ಎಂದು ಮನವಿ ಮಾಡಿದ್ದರು.

''ಮುಖ್ಯಮಂತ್ರಿಗಳ ಪತ್ನಿ 14 ನಿವೇಶನಗಳನ್ನು ಮುಡಾಗೆ ಹಿಂತಿರುಗಿಸಿದ್ದಾರೆ. ಜೆಟ್ ವಿಮಾನದ ವೇಗದಲ್ಲಿ ಆ ಸೈಟ್ ಗಳನ್ನು ವಾಪಸ್ ಪಡೆಯಲಾಗಿದೆ. ಸಾಮಾನ್ಯ ಜನ ಹೋದರೆ ತಿಂಗಳಾದರೂ ಕೆಲಸ ಆಗುವುದಿಲ್ಲ. ಸಿಎಂ ಪತ್ನಿ ಮನವಿ ಕೊಟ್ಟರೆ ಆ ಕ್ಷಣವೇ ಕೆಲಸವಾಗಿದೆ. ಪ್ರಕರಣ ದಾಖಲಿಸಿದಾಗ 14 ನಿವೇಶನ ಮುಖ್ಯಮಂತ್ರಿಗಳ ಪತ್ನಿ ವಶದಲ್ಲಿತ್ತು. ಅದು ಅಪರಾಧದ ಸಂಪತ್ತಾಗಿರುವುದರಿಂದ ತನಿಖೆ ನಡೆಯಬೇಕಾದ ಅಗತ್ಯವಿದೆ. ಇ.ಡಿ ಸಮನ್ಸ್‌ನಲ್ಲಿ ಯಾವುದೇ ಆರೋಪಗಳನ್ನು ಮಾಡಿಲ್ಲ, ಮಾಹಿತಿಗಾಗಿ ಜಾರಿಗೊಳಿಸಿದೆ. ಲೋಕಾಯುಕ್ತ ಪೊಲೀಸರು ಬಿ–ರಿಪೋರ್ಟ್ ಸಲ್ಲಿಸಿರಬಹುದು. ಆದರೆ ಕೋರ್ಟ್ ಇನ್ನೂ ಬಿ–ರಿಪೋರ್ಟ್ ಅಂಗೀಕರಿಸಿಲ್ಲ. ವರದಿ ಪ್ರಶ್ನಿಸಲು ಇ.ಡಿಗೂ ಅಧಿಕಾರವಿದೆ'' ಎಂದು ಕಾಮತ್ ಪೀಠಕ್ಕೆ ವಿವರಿಸಿದ್ದರು. ಸುದೀರ್ಘ ವಾದ ಆಲಿಸಿದ ನ್ಯಾಯಪೀಠ, ಆದೇಶವನ್ನು ಕಾಯ್ದಿರಿಸಿತ್ತು.

### ವಕೀಲರ ವಾದದ ವಿವರ

ಈ ಹಿಂದೆ ನಡೆದ ವಿಚಾರಣೆ ವೇಳೆ, ಸಿಎಂ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಪರ ವಾದ ಮಂಡಿಸಿದ ಹಿರಿಯ ವಕೀಲ ಸಂದೇಶ್ ಚೌಟ, ''ಮುಡಾದ 14 ನಿವೇಶನಗಳನ್ನು 2024ರ ಅಕ್ಟೋಬರ್ 1ರಂದು ನನ್ನ ಕಕ್ಷಿದಾರರು ಹಿಂತಿರುಗಿಸಿದ್ದಾರೆ. ಅವರು ನಿವೇಶನಗಳನ್ನು ಅನುಭವಿಸುತ್ತಿಲ್ಲ. ಹೀಗಾಗಿ, ಅಪರಾಧದ ಸಂಪತ್ತು ಅವರ ಬಳಿ ಇಲ್ಲ. ಇದು ಜಾರಿ ನಿರ್ದೇಶನಾಲಯದ ತನಿಖಾ ವ್ಯಾಪ್ತಿಗೆ ಬರುವುದಿಲ್ಲ. ಅಪರಾಧದಿಂದ ಗಳಿಸಿದ ಸಂಪತ್ತಿದ್ದರೆ ಮಾತ್ರ ಇಡಿ ತನಿಖೆ ನಡೆಸಬಹುದು. ನಿವೇಶನಗಳನ್ನು ಮರಳಿಸಿದ ನಂತರ ಇ.ಡಿ ತನಿಖೆ ಆರಂಭಿಸಿದೆ'' ಎಂದು ಕೋರ್ಟ್ ಗಮನಕ್ಕೆ ತಂದಿದ್ದರು.

## ಐತಿಹಾಸಿಕ ಬಜೆಟ್: ಸಿ ಎಂ ಧನಂಜಯ

ಉಮೇಶ್ ಬಾಣಾವರ

• ಉದಯವಾಹಿನಿ ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್ ಮಂಡಿಸಿರುವುದು ಐತಿಹಾಸಿಕ ಆಯವ್ಯಯವನ್ನು ಮಂಡಿಸಿ ದೇಶದಲ್ಲಿಯೇ ವಿಶಿಷ್ಟ ದಾಖಲೆ ಮಾಡಿದ್ದಾರೆ



ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಮಾನವ ಹಕ್ಕು ವಿಭಾಗದ ರಾಜ್ಯಾಧ್ಯಕ್ಷರಾದ ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ವಕ್ತಾರರು ಆಗಿರುವ ಸಿ ಎಂ ಧನಂಜಯ ರವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ ಹಿಂದುಳಿದ ವರ್ಗಗಳ ಹಾಗೂ ಸಮಾಜದ ಶೋಷಿತ ವರ್ಗಗಳ ಆಶಾಕಿರಣ ಆಗಿರುವ ಮುಖ್ಯಮಂತ್ರಿ, ಸಿದ್ದರಾಮಯ್ಯ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಹಲವು ರೀತಿಯ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ನೀಡಿದ್ದಾರೆ ಇದರಿಂದ ಡಾಕ್ಟರ್ ಬಾಬಾ ಸಾಹೇಬ್ ಬಿ ಆರ್ ಅಂಬೇಡ್ಕರ್ ಅವರ ಕನಸು ನನಸು ಮಾಡಲು. ಈ ಬಜೆಟ್ ಉದಾಹರಣೆಯಾಗಿದೆ.

ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಛಲವಾದಿ ನಾರಾಯಣಸ್ವಾಮಿ ರವರು ಈ ಬಜೆಟ್ಟನ್ನು ಗಮನಿಸಿ ಮುಖ್ಯಮಂತ್ರಿಗಳ ಬಗ್ಗೆ ನೀಡಿರುವ ಅವಹೇಳನಕಾರಿ ಹೇಳಿಕೆಯನ್ನು ಹಿಂದಕ್ಕೆ ಪಡೆದು ಕ್ಷಮೆಯಾಚಿಸಬೇಕೆಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯ ವಕ್ತಾರರು ಹಾಗೂ ಮಾನವ ಹಕ್ಕು ವಿಭಾಗದ ರಾಜ್ಯಾಧ್ಯಕ್ಷರಾದ ಸಿಎಂ ಧನಂಜಯ ತಮ್ಮ ಪತ್ರಿಕಾ ಪ್ರಕಟಣೆಯಲ್ಲಿ ಉದಯವಾಹಿನಿಗೆ ತಿಳಿಸಿದ್ದಾರೆ

## ಜನವರಿ, ಫೆಬ್ರವರಿ ತಿಂಗಳ ಗೃಹಲಕ್ಷ್ಮೀ ಹಣ ಸದ್ಯದಲ್ಲೇ ಕ್ಲಿಯರ್

• ಉದಯವಾಹಿನಿ, ಬೆಂಗಳೂರು

ಗೃಹಲಕ್ಷ್ಮಿ ಯೋಜನೆಯನ್ನು ಯಾವುದೇ ಕಾರಣಕ್ಕೂ ಪರಿಷ್ಕರಣೆ ಮಾಡುವುದಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ತಿಳಿಸಿದ್ದಾರೆ. ವಿಧಾನಸೌಧದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಸಚಿವರು, ಗೃಹಲಕ್ಷ್ಮಿ ಯೋಜನೆಯು ಸದ್ಯ ಈಗ ಯಾವ ರೀತಿ ನಡೆದುಕೊಂಡು ಹೋಗುತ್ತಿದೆಯೋ, ಹಾಗೆಯೇ ಮುಂದುವರೆದುಕೊಂಡು ಹೋಗಲಿದೆ. ಅದರಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

**ಅನುದಾನ ಸರಿಯಾಗಿ ಸದ್ಬಳಕೆ :** ಕೆಲವೊಂದು ಇಲಾಖೆಗಳಲ್ಲಿ ಕಳೆದ ಬಜೆಟ್‌ನಲ್ಲಿ ನೀಡಿದ ಹಣವೇ ಖರ್ಚಾಗುತ್ತಿಲ್ಲವೆಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ನನ್ನ ಇಲಾಖೆ ಇಷ್ಟು ವರ್ಷ ಬೇರೆ ರೀತಿಯಲ್ಲಿ ಇತ್ತು. ಆದರೆ, ಈಗ ಬಹುದೊಡ್ಡ ಗಾತ್ರದ ಬಜೆಟ್‌ನ್ನು ಒಳಗೊಂಡಂತಹ ಇಲಾಖೆಯಾಗಿದೆ. ಅದರಲ್ಲೂ ಗೃಹಲಕ್ಷ್ಮಿ ಯೋಜನೆ ಬಂದಿರುವುದರಿಂದ ಒಂದು ವರ್ಷಕ್ಕೆ ಸುಮಾರು 32 ಸಾವಿರ ಕೋಟಿ ರೂಪಾಯಿಯಷ್ಟು ಹಣವನ್ನು ಗೃಹಲಕ್ಷ್ಮಿಯವರಿಗೆ ನೀಡಲಾಗುತ್ತಿದೆ. ನಮ್ಮ ಇಲಾಖೆಗೆ ನೀಡಿದ ಅನುದಾನ ಪೈಕಿ ಯಾವುದೇ ಅನುದಾನ ಉಳಿದಿಲ್ಲ. ಎಲ್ಲವೂ ಸರಿಯಾದ ರೀತಿಯಲ್ಲಿ ಖರ್ಚಾಗಿದೆ. ಶೇಕಡ 10 ರಷ್ಟು ಮಾತ್ರ ಅನುದಾನ ಮಿಕ್ಕಿರಬಹುದು. ಅದು ಕೂಡ ಮಾರ್ಚ್ 31ರೊಳಗೆ ಖರ್ಚಾಗಲಿದೆ ಎಂದು ಹೇಳಿದರು.

### ಸಿಎಂ ಅವರಿಗೆ ಅಭಿನಂದನೆ

ಸಿಎಂ ಸಿದ್ದರಾಮಯ್ಯ ಅವರದ್ದು ಇದು ಕೊನೆಯ ಬಜೆಟ್ ಎಂದೆಲ್ಲ ಬಿಜೆಪಿಯವರು ಹೇಳುತ್ತಿದ್ದಾರೆಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ನಾನಂತೂ ಭವಿಷ್ಯದ ಬಗ್ಗೆ ಮಾತನಾಡುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಅಭಿನಂದನೆ ಸಲ್ಲಿಸುತ್ತೇನೆ. 16ನೇ ದಾಖಲೆ ಬಜೆಟ್ ಮಂಡಿಸಿದ್ದಾರೆಕರ್ನಾಟಕದಲ್ಲಿ ಎಲ್ಲರನ್ನೂ ಒಳಗೊಂಡ ಸಮಗ್ರವಾದ ಬಜೆಟ್ ಮಂಡಿಸಿರುವುದು ವಿಶೇಷ ಎಂದು ತಿಳಿಸಿದರು.



ಗೃಹಲಕ್ಷ್ಮಿ ಯೋಜನೆ ಪರಿಷ್ಕರಣೆ ಇಲ್ಲ

ಸದ್ಯದಲ್ಲೇ ಜನವರಿ, ಫೆಬ್ರವರಿ ಹಣ ಕ್ಲಿಯರ್ : ಗೃಹಲಕ್ಷ್ಮಿ ಹಣ ಎರಡ್ಮೂರು ತಿಂಗಳಿಗೊಮ್ಮೆ ಬರುತ್ತದೆ ಎನ್ನುವುದು ತಪ್ಪು. ಸರ್ಕಾರ ಬಹುದೊಡ್ಡ ಯೋಜನೆ ಮಾಡಿದೆ. ನವೆಂಬರ್, ಡಿಸೆಂಬರ್ ತಿಂಗಳ ಹಣ ಕ್ಲಿಯರ್ ಆಗಿದೆ. ಜನವರಿ, ಫೆಬ್ರವರಿ ಸದ್ಯದಲ್ಲೇ ಕ್ಲಿಯರ್ ಆಗಲಿದೆ. ಹತ್ತು – ಹದಿನೈದು ದಿನ ಹೆಚ್ಚು ಕಡಿಮೆ ಆಗಬಹುದೇನೋ ವಿನಃ ಯಾವುದೇ ಕಾರಣಕ್ಕೂ ಕ್ಲಿಯರ್ ಆಗದೇ ಉಳಿಯುವುದಿಲ್ಲ ಎಂದರು.

**ಮಹಾರಾಷ್ಟ್ರದಲ್ಲಿ ಯೋಜನೆ ಸ್ತಬ್ಧ :** ನಮ್ಮ ನೆರೆಯ ಮಹಾರಾಷ್ಟ್ರ ರಾಜ್ಯವನ್ನು ನೋಡಿ, ಅಲ್ಲಿ ಚುನಾವಣೆಗೆ ಮುನ್ನ ಎರಡು ತಿಂಗಳ ದುಡ್ಡನ್ನು ಹಾಕಿದರು. ಅಲ್ಲಿನ ಮಾಝಿ ಲಡಕಿ ಬಹಿನ್ ಯೋಜನೆಗೆ ಹಣನೇ ಇಲ್ಲ. ಇಲ್ಲಿ ನಮ್ಮನ್ನು ಮಾತ್ರ ಬಿಜೆಪಿಯವರು ದೊಡ್ಡದಾಗಿ ಪ್ರಶ್ನೆ ಮಾಡುತ್ತಾರೆಂದು ಖಾರವಾಗಿ ಹೇಳಿದ ಸಚಿವರು, ನಮ್ಮ ಕರ್ನಾಟಕದಲ್ಲೇ ಗೃಹಲಕ್ಷ್ಮಿ ಹಣ ಸರಿಯಾಗಿ ತಲುಪಿಸುತ್ತಿರುವುದು. ಅದೇ ಮಹಾರಾಷ್ಟ್ರದಲ್ಲಿ ಚುನಾವಣೆಗಿಂತ ಮುಂಚೆ ಅಷ್ಟೇ ಹಾಕಿದ್ದರು. ಆದರೆ, ಚುನಾವಣೆ ನಂತರ ಯೋಜನೆ ಜಾರಿಗೊಳ್ಳದೆ ನಿಂತಿದೆ ಎಂದು ಹೇಳಿದರು.

## ಶಾಸಕ ಮುನಿರತ್ನ ವಿರುದ್ಧದ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಿರಾಕರಣೆ

• ಉದಯವಾಹಿನಿ, ಬೆಂಗಳೂರು

ಬಿಬಿಎಂಪಿ ತ್ಯಾಜ್ಯ ವಿಲೇವಾರಿ ಗುತ್ತಿಗೆದಾರ ಚೆಲುವರಾಜು ಎಂಬವರಿಂದ ಹಣ ಪಡೆದು ವಂಚಿಸಿದ ಮತ್ತು ಅವರ ವಿರುದ್ಧ ಅವಾಚ್ಯ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆ ಹಾಕಿದ ಆರೋಪದಲ್ಲಿ ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ರಾಜರಾಜೇಶ್ವರಿ ನಗರ ಶಾಸಕ ಮುನಿರತ್ನ ವಿರುದ್ಧ ದಾಖಲಾದ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.



ಜೀವ ಬೆದರಿಕೆ ಹಾಕಿದ ಆರೋಪ

ತಮ್ಮ ವಿರುದ್ಧದ ಪ್ರಕರಣ ರದ್ದು ಕೋರಿ ಮುನಿರತ್ನ ಸಲ್ಲಿಸಿರುವ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ, ಅರ್ಜಿ ವಜಾಗೊಳಿಸಿ ಆದೇಶಿಸಿದೆ. ಆದೇಶದ ಪ್ರತಿ ಇನ್ನಷ್ಟೇ ಲಭ್ಯವಾಗಬೇಕಾಗಿದೆ.

ಅಲ್ಲದೇ, ಪ್ರಕರಣದ ವಿಚಾರಣೆಗೆ ವಿಶೇಷ ತನಿಖಾ ದಳ(ಎಸ್‌ಐಟಿ) ರಚನೆ ಮಾಡಿರುವ ಸರ್ಕಾರದ ಕ್ರಮಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಪೀಠ, ಸರ್ಕಾರ ಆದೇಶಗಳನ್ನು ಮಾಡುವ ಸಂದರ್ಭದಲ್ಲಿ ನಿಯಮಬದ್ಧವಾಗಿ ಮಾಡಬೇಕು ಎಂದು ಮೌಖಿಕವಾಗಿ ಸಲಹೆ ನೀಡಿತು.

ಈ ಹಿಂದೆ ಅರ್ಜಿಯ ವಿಚಾರಣೆ ವೇಳೆ, ಮುನಿರತ್ನ ಪರ ವಕೀಲರು ವಾದ ಮಂಡಿಸಿ, ''ದೂರುದಾರರು 2019 ರಿಂದ 2024ರವರೆಗೆ ನಡೆದಿರುವ ಕೃತ್ಯಗಳ ಬಗ್ಗೆ 2024ರ ಸೆ.13ರಂದು ವೈಯಾಲಿಕಾವಲ್ ಠಾಣೆಗೆ ದೂರು ನೀಡಿದ್ದಾರೆ. ಅಂದರೆ ದೂರು ನೀಡುವಲ್ಲಿಯೇ ವಿಳಂಬ ಮಾಡಿದ್ದಾರೆ. ಇದು ಕಾನೂನಿನಡಿ ಒಪ್ಪಿತವಲ್ಲ. ದೂರು ದಾಖಲಿಸಿದ ನಂತರ ಕೂಡಲೇ ಪ್ರಕರಣದ ತನಿಖೆಯನ್ನು ಸಿಐಡಿಯ ಎಸ್‌ಐಟಿಗೆ ವರ್ಗಾಯಿಸಲಾಗಿದೆ'' ಎಂದು ತಿಳಿಸಿದ್ದರು. ಆದರೆ, ಸಿಐಡಿಯ ಎಸ್‌ಐಟಿಗೆ ಪೊಲೀಸ್ ಠಾಣೆ ಮಾನ್ಯತೆ ಇಲ್ಲ. ಇಂತಹ ಸಂದರ್ಭದಲ್ಲಿ ತನಿಖೆ ನಡೆಸಿ ವರದಿ ಸಲ್ಲಿಸುವ ಅಧಿಕಾರವೂ ಎಸ್‌ಐಟಿಗೆ ಇಲ್ಲ. ಇನ್ನೂ ಮುನಿರತ್ನ ಶಾಸಕರಾಗಿದ್ದು, ಅವರ ವಿರುದ್ಧ ತನಿಖೆ ನಡೆಸಲು ಸಕ್ಷಮ ಪ್ರಾಧಿಕಾರದಿಮದ ಪೂರ್ವಾನುಮತಿ ಪಡೆದಿಲ್ಲ. ಹಾಗಾಗಿ, ಪ್ರಕರಣ ಕುರಿತ ಎಫ್ಐಆರ್ ಮತ್ತು ವಿಚಾರಣಾ ನ್ಯಾಯಾಲಯದ ಆದೇಶ ರದ್ದುಪಡಿಸಬೇಕು'' ಎಂದು ಕೋರಿದ್ದರು.

## ಬೆಂಗಳೂರಿನಲ್ಲಿ 27 ಚೀಲ ಕೂದಲು ಕಳ್ಳತನ!

• ಉದಯವಾಹಿನಿ, ಬೆಂಗಳೂರು

ಸೋಲದೇವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಲಕ್ಷ್ಮೀಪುರ ಕ್ರಾಸ್‌ನ ಗೋದಾಮಿನಲ್ಲಿ ಇಡಲಾಗಿದ್ದ 90 ಲಕ್ಷ ಮೌಲ್ಯದ 27 ಚೀಲ ತಲೆ ಕೂದಲು ಕಳ್ಳತನವಾಗಿದೆ. ವೆಂಕಟರಮಣ ಅವರ ಗೋದಾಮಿನ ಬೀಗ ಒಡೆದು ದುಷ್ಕರ್ಮಿಗಳು ಕಳ್ಳತನ ಮಾಡಿದ್ದಾರೆ. ಮಾಲೀಕರ ದೂರು ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

'ವಿದೇಶದ ವಿಗ್ ತಯಾರಿಕಾ ಕಂಪನಿಗಳಿಗೆ ರಫ್ತು ಮಾಡಲು ತಲೆ ಕೂದಲು ಸಂಗ್ರಹಿಸಲಾಗಿತ್ತು. ಚೀನಾ, ಬರ್ಮಾ ಹಾಗೂ ಹಾಂಕಾಂಗ್‌ಗೆ ರಫ್ತು ಮಾಡಲು 27 ಚೀಲಗಳಲ್ಲಿ ಕೂದಲು ದಾಸ್ತಾನು ಮಾಡಲಾಗಿತ್ತು. ಕಳೆದ ವಾರ ಕೂದಲು ಖರೀದಿ ಸಂಬಂಧ ಚೀನಾದ ವ್ಯಾಪಾರಿಗಳ ಜತೆ ಮಾತುಕತೆ ನಡೆದಿತ್ತು' ಎಂದು ಪೊಲೀಸರು ತಿಳಿಸಿದರು.

## ಮದುವೆ ಹಿಂದಿನ ದಿನ ವರ ಪರಾರಿ 50 ಲಕ್ಷ, ಚಿನ್ನ, ಬೆಂಜ್ ಕಾರಿಗೆ ಬೇಡಿಕೆ

• ಉದಯವಾಹಿನಿ, ಬೆಂಗಳೂರು

ವರದಕ್ಷಿಣೆ ನೀಡದ ಕಾರಣ ವರ ಮತ್ತು ಆತನ ಕಡೆಯುವರು ಮದುವೆಯ ಹಿಂದಿನ ರಾತ್ರಿ ಪರಾರಿಯಾಗಿದ್ದಾರೆ ಎಂದು ಆರೋಪಿಸಿ ಯುವತಿಯ ತಂದೆ ಉಪ್ಪಾರಪೇಟೆ ಠಾಣೆಯಲ್ಲಿ ದೂರು ನೀಡಿದ್ದು, ಎಫ್ಐಆರ್ ದಾಖಲಾಗಿದೆ. 'ವರ ಪ್ರೇಮ್‌ಚಂದ್ ಮತ್ತು ವಧು, ಫ್ರಾನ್ಸ್‌ನ ಖಾಸಗಿ ಕಂಪನಿಯಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದರು. 2024ರ ಜುಲೈ 13ರಂದು ಬೆಂಗಳೂರಿನಲ್ಲಿ ಹಿಂದೂ ಸಂಪ್ರದಾಯದಂತೆ ನಿಶ್ಚಿತಾರ್ಥವಾಗಿತ್ತು. ಅಲ್ಲದೇ, ಮಾರ್ಚ್ 2ಕ್ಕೆ ಮದುವೆಗೆ ದಿನಾಂಕ ನಿಗದಿಪಡಿಸಲಾಗಿತ್ತು. ನಂತರ ಪ್ರೇಮ್‌ಚಂದ್ ಮತ್ತು ಯುವತಿಯು ಫ್ರಾನ್ಸ್‌ಗೆ ತೆರಳಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

## ಕುಸ್ತಿ ಪಂದ್ಯಾವಳಿ, ಲಿಂಬಾವಳಿ ಚಾಲನೆ

• ಉದಯವಾಹಿನಿ, ಕೆ.ಆರ್.ಪುರ

ಮಾಧವ ಗೆಳೆಯರ ಬಳಗ ಮತ್ತು ವಿಶ್ವಹಿಂದು ಪರಿಷದ್ ಅವರ ಆಶ್ರಯದಲ್ಲಿ ಮಹದೇವಪುರ ಕ್ಷೇತ್ರದ ಇಮ್ಮಡಹಳ್ಳಿಯಲ್ಲಿ ಏರ್ಪಡಿಸಿದ್ದ ರಾಜ್ಯ ಮಟ್ಟದ ಕುಸ್ತಿ ಪಂದ್ಯಗಳಿಗೆ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರು ಚಾಲನೆ ನೀಡಿದರು. ಚಾಲನೆ ನೀಡಿ ಮಾತನಾಡಿದ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರು ದೇಶಿ ಕ್ರೀಡೆಗಳಲ್ಲಿ ಕುಸ್ತಿಗೆ ಅತಿಹೆಚ್ಚು ಪ್ರಾಮುಖ್ಯತೆಯಿದ್ದು,ಕುಸ್ತಿ ಪಂದ್ಯಾವಳಿಗಳಿಗೆ ಪ್ರೋತ್ಸಾಹ ನೀಡುವ ಕಾರ್ಯ ಮಾಡಬೇಕಿದೆ ಎಂದು ನುಡಿದರು.

ಕ್ಷೇತ್ರದ ಇಮ್ಮಡಿಹಳ್ಳಿ ಗ್ರಾಮದಲ್ಲಿ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿ ಬ್ರಹ್ಮ ರಥೋತ್ಸವದ ಅಂಗವಾಗಿ ಮಟ್ಟದ ಕುಸ್ತಿ ಪಂದ್ಯಾವಳಿ ನಡೆಸಲಾಗುತ್ತಿದ್ದು, ಪ್ರತಿಯೊಂದು ಜಾತ್ರ ಮಹೋತ್ಸವದಲ್ಲೂ ಕುಸ್ತಿ ಪಂದ್ಯಾವಳಿಯ ಆಯೋಜನೆ ಅಗತ್ಯವಿದೆ ಎಂದು ಹೇಳಿದರು. ಈಗಿನ ಮಕ್ಕಳು ಮೊಬೈಲ್ ಫೋನ್ ಗೀಳಿಗೆ ಬಿದಿದ್ದು,ಇದರಿಂದ ದೇಹದಂಡನೆ ಮಾಡುವ ವ್ಯಾಯಾಮಗಳಿಂದಲೂ ದೂರಾಗಿದ್ದಾರೆ ಅಂತಹ ಮಕ್ಕಳಿಗೆ ದೇಶಿಯ ಕ್ರೀಡೆಗಳ ಅರಿವು ಮೂಡಿಸಬೇಕಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮಾಜಿ ಬಿಬಿಎಂಪಿ ಸದಸ್ಯ ಶ್ರೀನಿವಾಸ್,ಮಂಡಲ ಅದ್ಯಕ್ಷರಾದ ಶ್ರೀಧರ ರಡ್ಡಿ, ಪಿಳ್ಳಪ್ಪ,ರಾಜ್ಯ ಪರಿಷತ್ ಸದಸ್ಯ ಎಲ್. ರಾಜೇಶ್, ಮುಖಂಡರಾದ ರಾಜರೆಡ್ಡಿ,ಮಹೇಂದ್ರ ಮೋದಿ,ವರ್ತೂರು ಶ್ರೀಧರ್, ಮಧು, ಶ್ರೀನಿವಾಸ, ರವಿ, ಯೊಗೇಶ್ ಆರಾಧ್ಯ ಗೆಳೆಯರ ಬಳಗ ಮತ್ತು ಪರಿಷದ್‌ನ ಪದಾಧಿಕಾರಿಗಳು ಗ್ರಾಮಸ್ಥರು ಉಪಸ್ಥಿತರಿದ್ದರು.

## ಪ್ರಧಾನಿಯಿಂದ ಮೆಚ್ಚುಗೆ ಪಡೆದಿದ್ದ ಗಾಯಕಿ, ತೇಜಸ್ವಿ ಸೂರ್ಯ ಪತ್ನಿ

• ಉದಯವಾಹಿನಿ, ಬೆಂಗಳೂರು

ಬಿಜೆಪಿ ಲೋಕಸಭಾ ಸದಸ್ಯ ತೇಜಸ್ವಿ ಸೂರ್ಯ ಅವರು ಮಾರ್ಚ್ 6ರ ಬೆಳಗ್ಗೆ ಖ್ಯಾತ ಸಂಗೀತಗಾರ ಕುಟುಂಬಕ್ಕೆ ಸೇರಿರುವ ಶಿವಶ್ರೀ ಸ್ಕಂದಪ್ರಸಾದ್ ಅವರೊಂದಿಗೆ ಹಸೆಮಣೆ ಏರಿದರು. ಕುಟುಂಬಸ್ಥರು, ಆಪ್ತರು ಮತ್ತು ಕೆಲ ನಾಯಕರ ಸಮ್ಮುಖದಲ್ಲಿ ವಿವಾಹ ಸಮಾರಂಭ ಬಹಳ ಶಾಸ್ತ್ರೋಕ್ತವಾಗಿ ನೆರವೇರಿತು. ಮದುವೆ ನಂತರ ಶಿವಶ್ರೀ ಸ್ಕಂದಪ್ರಸಾದ್ ಸಖತ್ ಸುದ್ದಿಯಲ್ಲಿದ್ದಾರೆ. ಅವರ ಸೌಂದರ್ಯ ಯಾವ ನಟಿಗೂ ಕಡಿಮೆ ಇಲ್ಲ ಅಂತಿದ್ದಾರೆ ಸಾಮಾಜಿಕ ಜಾಲತಾಣ ಬಳಕೆದಾರರು. ಅವರ ಬಗ್ಗೆ ತಿಳಿದುಕೊಳ್ಳಲು ಹೆಚ್ಚಿನವರು ಇಂಟರ್ನೆಟ್ ಸಹಾಯ ಪಡೆಯುತ್ತಿದ್ದಾರೆ.

**ಸಂಗೀತ ಹಿನ್ನೆಲೆಯುಳ್ಳ ಮನೆತನದವರು:** ಶಿವಶ್ರೀ ಸ್ಕಂದಪ್ರಸಾದ್ ಚೆನ್ನೈನವರು. 1996ರ ಆಗಸ್ಟ್ 1ರಂದು ಚೆನ್ನೈನ ಪ್ರಸಿದ್ಧ ಸಂಗೀತಗಾರರ ಕುಟುಂಬದಲ್ಲಿ ಜನಿಸಿದರು. ಮೃದಂಗ ವಾದಕ ಸೀರ್ಕಾಜಿ ಜೆ ಸ್ಕಂದಪ್ರಸಾದ್ ಅವರ ಮಗಳು. ಅಜ್ಜ




### ಪ್ರಧಾನಿಯ ಗುಣಗಾನ

ಶಿವಶ್ರೀ ಸ್ಕಂದಪ್ರಸಾದ್ ಅವರ ಪೂಜಿಸಲೆಂದೇ ಹೂಗಳ ತಂದೆ ಹಾಡಿಗೆ ಪಿಎಂ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದರು. ''ಶಿವಶ್ರೀ ಸ್ಕಂದಪ್ರಸಾದ್ ಅವರ ಈ ಕನ್ನಡ ಹಾಡು ಪ್ರಭು ಶ್ರೀರಾಮನ ಮೇಲಿನ ಭಕ್ತಿಯನ್ನು ಬಹಳ ಸುಂದರವಾಗಿ ಎತ್ತಿ ತೋರಿಸುತ್ತದೆ. ಇಂತಹ ಪ್ರಯತ್ನಗಳು ನಮ್ಮ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ'' ಎಂದು ಪಿಎಂ ತಿಳಿಸಿದ್ದರು.

ದಿ.ಸೀರ್ಕಾಜಿ ಆರ್.ಜಯರಾಮನ್ ಪ್ರಸಿದ್ಧ ಸಂಗೀತಗಾರರಾಗಿದ್ದರು. ಕರ್ನಾಟಕ ಸಂಗೀತ, ಭರತನಾಟ್ಯ ಮತ್ತು ವಿಶುವಲ್ ಆರ್ಟ್ಸ್‌ಗೆ ಶಿವಶ್ರೀ ಸ್ಕಂದಪ್ರಸಾದ್ ಹೆಸರುವಾಸಿಯಾಗಿದ್ದಾರೆ.

ಶಿಕ್ಷಣ: ಕಲೈಮಾಮಣಿ ಕೃಷ್ಣ ಕುಮಾರಿ ನರೇಂದ್ರನ್ ಮತ್ತು ಆಚಾರ್ಯ ಚೂಡಾಮಣಿ ಗುರು ರೋಜಾ ಕಣ್ಣನ್ ಅವರಿಂದ ಭರತನಾಟ್ಯ ಕಲಿತರು. ತಮ್ಮ ಎಕ್ಸ್ ಅಕೌಂಟ್‌ನ (ಟ್ವಿಟರ್) ಬಯೋದಲ್ಲಿ, ತಮ್ಮನ್ನು ಇಂಡಿಯನ್, ಗಾಯಕಿ, ನರ್ತಕಿ ಮತ್ತು ಭಾರತೀಯ ಕಲಾ ಪ್ರಕಾರಗಳನ್ನು ಪುನರುಜ್ಜೀವನಗೊಳಿಸುವ ವೇದಿಕೆಯಾದ 'ಆಹುತಿ'ಯ ಸಂಸ್ಥಾಪಕಿ ಎಂದು ಪರಿಚಯಿಸಿಕೊಂಡೆ. ಎ.ಆರ್ ರೆಹಮಾನ್, ಐಶ್ವರ್ಯಾ ರೈ **ಚಿತ್ರದ ಜತೆ ಸಂಪರ್ಕ:** ಖ್ಯಾತ ಸಂಗೀತ ಸಂಯೋಜಕ ಎ.ಆರ್ ರೆಹಮಾನ್ ಮತ್ತು ಮಾಜಿ ವಿಶ್ವಸುಂದರಿ ಐಶ್ವರ್ಯಾ ರೈ ಬಚ್ಚನ್ ಅವರ ಸಿನಿಮಾದೊಂದಿಗೆ ಶಿವಶ್ರೀ ಸ್ಕಂದಪ್ರಸಾದ್ ಸಂಪರ್ಕ ಹೊಂದಿದ್ದಾರೆ. ಮಣಿರತ್ನಂ ಅವರ 'ಪೊನ್ನಿಯಿನ್ ಸೆಲ್ವನ್ 1' ಚಿತ್ರಕ್ಕಾಗಿ ಹಾಡೊಂದನ್ನು ಹಾಡಿದ್ದರು.

# ಬಂಧನವಾದ ನಾಲ್ಕೇ ದಿನಕ್ಕೆ ಮಂಕಾದ ನಟಿ ರನ್ಯಾ ರಾವ್!

## ಫೋಟೋಗಳಿಗೂ ಈಗ ಇರುವ ಸ್ಥಿತಿಗೂ ಗುರುತೇ ಹಿಡಿಯಲಾಗಷ್ಟು ಅಜಗಜಾಂತರ ವ್ಯತ್ಯಾಸ

• ಉದಯವಾಹಿನಿ, ಬೆಂಗಳೂರು

ಹೈಪ್ರೊಫೈಲ್ ನಟಿ ಅಪರಾಧ ನಡೆಸಿ ಪೊಲೀಸರ ಕೈಗೆ ಸಿಕ್ಕಿಬಿದ್ದು ಈಗ ಮುಖ ಚಹರೆಯೇ ಬದಲಾಗಿರುವ ತಾಜಾ ಉದಾಹರಣೆ ಇದು. ಮಾಣಿಕ್ಯ ಸಿನಿಮಾ ನಟಿ ರನ್ಯಾ ರಾವ್ ಚಿನ್ನ ಕಳ್ಳಸಾಗಾಣಿಕೆ ಆರೋಪದಲ್ಲಿ ಮಾರ್ಚ್ 3 ರ ತಡರಾತ್ರಿ ಬೆಂಗಳೂರು ಏರ್ಪೋರ್ಟ್‌ನಲ್ಲಿ ಕಂದಾಯ ಗುಪ್ತಚರ ದಳದ (ಡಿಆರ್‌ಐ) ಅಧಿಕಾರಿಗಳು ವಶಕ್ಕೆ ಪಡೆದಿದ್ದರು. ಕೇವಲ ನಾಲ್ಕೇ ದಿನದಲ್ಲಿ ರನ್ಯಾ ರಾವ್ ಮುಖ ಕಳೆಗುಂದಿದೆ. ಅವರ ಮೊದಲಿನ ಫೋಟೋಗಳಿಗೂ ಈಗ ಇರುವ ಸ್ಥಿತಿಗೂ ಗುರುತೇ ಹಿಡಿಯಲಾಗಷ್ಟು ಅಜಗಜಾಂತರ ವ್ಯತ್ಯಾಸ ಆಗಿದೆ.

ಹೌದು ಕನ್ನಡ ನಟಿ ರಾಣ್ಯಾ ರಾವ್ ಅವರನ್ನು ದುಬೈನಿಂದ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 12 ಕೋಟಿ ರೂಪಾಯಿ ಮೌಲ್ಯದ 14.8 ಕೆಜಿ ಚಿನ್ನದ ಕಳ್ಳಸಾಗಣೆ ಆರೋಪದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ. ಅಧಿಕಾರಿಗಳ ಅವರನ್ನು



### 15 ದಿನಕ್ಕೆ 4 ಟ್ರಿಪ್

ನಟಿ ರನ್ಯಾ ರಾವ್ ಕಳೆದ ಹದಿನೈದು ದಿನಗಳಲ್ಲಿ ದುಬೈಗೆ ನಾಲ್ಕು ಬಾರಿ ಹೋಗಿ ಬಂದಿದ್ದರು. ವಾಪಸ್ ಬರುವ ವೇಳೆ ಹೆಚ್ಚಿನ ಪ್ರಮಾಣದ ಚಿನ್ನ ತರುತ್ತಿದ್ದ ಮಾಹಿತಿ ಡಿಆರ್‌ಐಗೆ ಸಿಕ್ಕಿತ್ತು. ಈ ನಿಟ್ಟಿನಲ್ಲಿ ವಿಶೇಷ ತಂಡವೊಂದು ರನ್ಯಾ ದುಬೈ ಪ್ರವಾಸದ ಮಾಹಿತಿಯನ್ನು ಕೆದಕಿ ಅಕ್ರಮವಾಗಿ ಚಿನ್ನ ತರುತ್ತಿದ್ದ ಮಾಹಿತಿ ಸಂಗ್ರಹಿಸಿತ್ತು

ವಿಚಾರಣೆ ನಡೆಸುತ್ತಿದ್ದಾರೆ. ಇದರಿಂದ ನೆಮ್ಮದಿ ಕಳೆದುಕೊಂಡಿರುವ ಚಿತ್ರನಟಿ, ಸರಿಯಾಗಿ ಊಟ ,ನಿದ್ದೆ ಇಲ್ಲದೆ ಮುಖ ಬಾಡಿದೆ, ಕಣ್ಣುಗಳು ಊದಿಕೊಂಡಿವೆ, ಮುಖದ ಕಾಂತಿಯೂ ಕುಂದಿದೆ.

ರನ್ಯಾ ರಾವ್ ಈ ಫೋಟೋ ಸಾಮಾಜಿಕ ಜಾಲತಾಣದಲ್ಲಿ ಭಾರೀ ವೈರಲ್ ಆಗುತ್ತಿದೆ. ರನ್ಯಾ ರಾವ್ ಜಾಮೀನಿಗಾಗಿ ಅರ್ಜಿ ಸಲ್ಲಿಸಿದ್ದಾರೆ. ನ್ಯಾಯಾಲಯವು ಶುಕ್ರವಾರ ತೀರ್ಪು ನೀಡಲಿದೆ. ರಾವ್ ಈ ವರ್ಷ 27 ಬಾರಿ ದುಬೈಗೆ ಪ್ರಯಾಣಿಸಿದ್ದಾರೆ ಎಂದು ಡಿಆರ್‌ಐ ಆರೋಪಿಸಿದೆ. ರಾವ್ ಅವರನ್ನು ಈಗಾಗಲೇ ವಿಚಾರಣೆ ಮಾಡಲಾಗಿದೆ ಮತ್ತು ಹೆಚ್ಚಿನ ವಿಚಾರಣೆಯ ಅಗತ್ಯವಿಲ್ಲ ಎಂದು ರಕ್ಷಣಾ ಪಕ್ಷ ವಾದಿಸಿದೆ. ಜಾಮೀನು ಕೋರಿದ ನಂತರ ಮತ್ತೆ ರಾವ್ ಅವರನ್ನು ಕಸ್ಟಡಿಗೆ ಕೇಳುತ್ತಿರುವುದು ಪ್ರಶ್ನಾರ್ಹ ಎಂದು ವಕೀಲರು ಟೀಕಿಸಿದ್ದಾರೆ. ರಾವ್ ಅವರ ಲ್ಯಾಪ್‌ಟಾಪ್ ಅನ್ನು ಈಗಾಗಲೇ ವಶಪಡಿಸಿಕೊಳ್ಳಲಾಗಿದೆ, ತನಿಖಾಧಿಕಾರಿಗಳು ಪ್ರಮುಖ ಡಿಜಿಟಲ್ ಸಾಕ್ಷ್ಯಗಳನ್ನು ಹೊಂದಿದ್ದಾರೆ.

''ಹೆಚ್ಚಿನ ವಿಚಾರಣೆ ಅಗತ್ಯ'' ಎಂದು ಡಿಆರ್‌ಐ ವಕೀಲರು ವಾದಿಸಿದ್ದಾರೆ. ರಾವ್ ನಿಯಮಗಳನ್ನು ಹೇಗೆ ಉಲ್ಲಂಘಿಸಿದರು ಕಳ್ಳಸಾಗಣೆ ಕಾರ್ಯಾಚರಣೆಯನ್ನು ಹೇಗೆ ನಡೆಸಲಾಯಿತು ಎಂದು ತನಿಖೆ ಮಾಡಬೇಕು. ನಟಿ ಜತೆಗಿನ ನಂಟು ಹೊಂದಿರುವ ಸ್ಮಗ್ಲಿಂಗ್ ದಂಧೆಯ ಸಹ ಆರೋಪಿಗಳ ಕುರಿತು ಹೆಚ್ಚಿನ ತನಿಖೆ ಮುಂದುವರಿದಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ದುಬೈಗೆ ನಿರಂತರವಾಗಿ ಪ್ರವಾಸ ಮಾಡುತ್ತಿದ್ದ ರನ್ಯಾ ರಾವ್, ವಾಪಸ್ ಬರುವಾಗ ಭಾರಿ ಪ್ರಮಾಣದ ಚಿನ್ನಾಭರಣ ಧರಿಸಿಕೊಂಡು ಅಕ್ರಮವಾಗಿ ತರುತ್ತಿದ್ದರು. ಕಸ್ಟಮ್ಸ್ ಹಾಗೂ ಭದ್ರತಾ ಸಿಬ್ಬಂದಿ ಪರಿಶೀಲನೆ ನಡೆಸದಂತೆ ತನ್ನ ಮಲತಂದೆ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದರು.

## ಆನಂದ್ ಸಿಂಗ್ ಸೇರಿ ಗೋವಾ ಮಾಜಿ ಸಚಿವ ಖುಲಾಸೆ

• ಉದಯವಾಹಿನಿ, ಬೆಂಗಳೂರು

ಬಳ್ಳಾರಿಯ ವ್ಯಾಸನಕೆರೆ ಗಣಿಯಿಂದ ಅಕ್ರಮವಾಗಿ ಕಬ್ಬಿಣದ ಅದಿರಿನ ಸಾಗಾಣೆ ಪ್ರಕರಣದ ಆರೋಪಿಗಳಾದ ಮಾಜಿ ಸಚಿವ ಆನಂದ್ ಸಿಂಗ್ ಅವರನ್ನು ನ್ಯಾಯಾಲಯವು ಖುಲಾಸೆಗೊಳಿಸಿದೆ.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು (ಮಾರ್ಚ್ 07) ಆರೋಪಿಗಳಾದ ಆನಂದ್ ಸಿಂಗ್ ಹಾಗೂ ಗೋವಾ ಮಾಜಿ ಸಚಿವ ರೋಹನ್ ಕೌಂಟೆ ಸೇರಿದಂತೆ 16 ಆರೋಪಿಗಳನ್ನು ಖುಲಾಸೆಗೊಳಿಸಿ ಆದೇಶ ಹೊರಡಿಸಿದ್ದಾರೆ.

### ಅಕ್ರಮ ಅದಿರು ಸಾಗಣೆ ಕೇಸ್

ಬಳ್ಳಾರಿಯ ವ್ಯಾಸನಕೆರೆ ಗಣಿಯಿಂದ ಅಕ್ರಮ ಅದಿರು ಸಾಗಣೆ ಪ್ರಕರಣದಲ್ಲಿ ಆನಂದ್ ಸಿಂಗ್, ಗೋವಾ ಸಚಿವ ರೋಹನ್ ಕೌಂಟೆ ಆರೋಪಿಯಾಗಿದ್ದರು. ಈ ಪ್ರಕರಣ ವಾದ ಪ್ರತಿವಾದ ಆಲಿಸಿದ್ದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಇಂದಿಗೆ ತೀರ್ಪು ಕಾಯ್ದಿರಿಸಿತ್ತು. ಅದರಂತೆ ಇಂದು ಜನಪ್ರತಿನಿಧಿಗಳ ಕೋರ್ಟ್, ತೀರ್ಪು ಪ್ರಕಟಿಸಿದ್ದು, ಆನಂದ್ ಸಿಂಗ್ ಕೇಸ್‌ನಿಂದ ಖುಲಾಸೆಗೊಂಡಿದ್ದಾರೆ.

ಕೋರ್ಟ್ ತೀರ್ಪು ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಆನಂದ್ ಸಿಂಗ್ ಪರ ವಕೀಲ ಗಂಗಾಧರ್, ನ್ಯಾಯಾ ಲಯದಲ್ಲಿ ತನಿಖೆಯ ತೀರ್ಪು ಇತ್ತು.16 ಜನ ಆರೋಪಿಗಳನ್ನು ಖುಲಾಸೆಗೊಳಿಸಿದೆ. ಪೂರಕವಾದ ಸಾಕ್ಷ್ಯಗಳನ್ನ ಸಲ್ಲಿಸುವಲ್ಲಿ ವಿಫಲವಾಗಿದೆ. ಆನಂದ್ ಸಿಂಗ್, ಗೋವಾ ಮಾಜಿ ಸಚಿವರು ಸಮೇತ ಖುಲಾಸೆಯಾಗಿದ್ದಾರೆ. ಸುಪ್ರೀಂ ಬಳ್ಳಾರಿ ಅಕ್ರಮ ಗಣಿಗಾರಿಕೆ ಸಂಬಂಧ ತನಿಖೆಗೆ ಮಾಡಲು ಹೇಳಿತ್ತು. ಸಿಬಿಐನವರು ಮಾಡಿದ ತನಿಖೆಯನ್ನ ಎಸ್ ಐಟಿ ಕೂಡ ಮಾಡಿತ್ತು. 50 ಸಾವಿರ ಮೆ.ಟನ್ ಅಕ್ರಮ ರಫ್ತು ಎಂದು ಆರೋಪಿಸಿದ್ದರು. ಆದರೆ ಸಾಕ್ಷಿಗಳು ಇಲ್ಲದ ಕಾರಣ. ಕೇಸ್ ಖುಲಾಸೆಯಾಗಿದೆ ಎಂದು ಸ್ಪಷ್ಟಪಡಿಸಿದರು.



ಮಾಜಿ ಸಚಿವ ಆನಂದ್ ಸಿಂಗ್ ವಿರುದ್ಧ ಅಕ್ರಮ ಗಣಿಗಾರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿವಿಸಿ ವರದಿ ಆಧರಿಸಿ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ಆದೇಶಿಸಿತ್ತು. ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆ ಕರ್ನಾಟಕ ಲೋಕಾಯುಕ್ತ ತನಿಖೆ ನಡೆಸಿತ್ತು.

16,976 ಮೆಟ್ರಿಕ್ ಟನ್ ಅದಿರು ಅಕ್ರಮ ಗಣಿಗಾರಿಕೆ ಆರೋಪ, ಜೈಸಿಂಗ್‌ಪುರದ ಬಳಿ ಎಸ್‌ವಿಕೆ ಫ್ಲಾಟ್‌ನಲ್ಲಿ ಅಕ್ರಮ ಗಣಿಗಾರಿಕೆ ಆರೋಪದ ಮೇಲೆ 2015ರಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ಡಿವೈಎಸ್ಪಿ ವೇಣುಗೋಪಾಲ್ ನೇತೃತ್ವದ ತಂಡ ತನಿಖೆ ನಡೆಸಿ ಚಾರ್ಜ್ ಶೀಟ್ ಸಲ್ಲಿಸಿತ್ತು. ಪ್ರಕರಣದ ವಿಚಾರಣೆ ನಡೆಸಿದ್ದ ಕೋರ್ಟ್ ಇಂದಿಗೆ ಚಿಚಾರಣೆ ಕಾಯ್ದಿರಿಸಿತ್ತು.

ಕೆಡಿಪಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆ

# ರಸ್ತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಬೋಸ್ ಸೂಚನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ಚಾಮರಾಜನಗರ

ಜಿಲ್ಲಾವ್ಯಾಪ್ತಿಯಲ್ಲಿ ಅಭಿವೃದ್ಧಿಪಡಿಸಲಾಗಿರುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ರಯಾಣಿಕರಿಗೆ ಅನುಕೂಲವಾಗುವಂತೆ ರಸ್ತೆ ಸಂಚಾರ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಂತೆ ಲೋಕಸಭಾ ಸದಸ್ಯ ಸುನಿಲ್ ಬೋಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ನೂತನ ಕೆ.ಡಿ.ಪಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಸಾರ್ವಜನಿಕ ಸಂಚಾರಕ್ಕಾಗಿ ಜಿಲ್ಲೆಯಲ್ಲಿ ಇತ್ತೀಚೆಗೆ ಅಭಿವೃದ್ಧಿಪಡಿಸಲಾಗಿರುವ ರಸ್ತೆಗಳಲ್ಲಿ ಸಂಚಾರಿ ಸುರಕ್ಷತಾ ಕ್ರಮಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಮಾಡಬೇಕು. ಅಪಘಾತ ಸಂಭವಿಸುವ ಸ್ಥಳಗಳನ್ನು ಗುರುತಿಸಿ ಸೂಚನಾ ಫಲಕಗಳನ್ನು ಅಳವಡಿಸಬೇಕು. ರಸ್ತೆಗಳ ಗುಣಮಟ್ಟ ಕಾಪಾಡಬೇಕು. ಅಗತ್ಯವಿರುವೆಡೆ ವೃತ್ತಗಳನ್ನು ನಿರ್ಮಿಸಬೇಕು.

ಈ ಸಂಬಂಧ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಜನರಿಗೆ ಅನುಕೂಲ ಕಲ್ಪಿಸಬೇಕು ಎಂದು ಸೂಚಿಸಿದರು. ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ಜಿಲ್ಲೆಯ ಕಾಡಂಚಿನ ಪ್ರದೇಶಗಳು ಹಾಗೂ ಹಾಡಿಗಳಿಗೆ ಸಮರ್ಪಕ ರಸ್ತೆ, ವಿದ್ಯುದ್ದೀಕರಣ, ಕುಡಿಯುವ ನೀರು ಸೇರಿದಂತೆ ಇತರೆ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಕಾಮಗಾರಿ ಆರಂಭಿಸುವಂತೆ ಮುಖ್ಯಮಂತ್ರಿಗಳು ಸೂಚನೆ ನೀಡಿದ್ದಾರೆ. ವಿದ್ಯುದ್ದೀಕರಣ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಉಳಿದ ಕಾಮಗಾರಿಗಳನ್ನು ಶೀಘ್ರದಲ್ಲಿಯೇ ಪೂರ್ಣಗೊಳಿಸಲಾಗುವುದು ಎಂದರು. ಲೋಕಸಭಾ ಸದಸ್ಯ ಸುನಿಲ್ ಬೋಸ್ ಅವರು ಮಾತನಾಡಿ ಜಿಲ್ಲೆಯಲ್ಲಿ ಬ್ಯಾಂಕುಗಳು ಜನರಿಗೆ ಸಕಾಲದಲ್ಲಿ ಸಾಲ ನೀಡಬೇಕು. ಜನರನ್ನು ಪದೆಪದೇ ಅಲೆದಾಡಿಸಬಾರದು. ಬಡವರಿಗೆ ಅನುಕೂಲವಾಗುವ ಯೋಜನೆಗಳನ್ನು ಕೇಂದ್ರಸರ್ಕಾರ ಅನುಷ್ಟಾನ ಮಾಡುತ್ತಿದೆ. ಯೋಜನೆಗಳು ಫಲಪ್ರದವಾಗಬೇಕು. ಸಾರ್ವಜನಿಕರಿಗೆ ಹೆಚ್ಚಿನ ಪ್ರಯೋಜನವಾಗಬೇಕು ಎಂದರು.

> ಬಳಿಕ ಮಾತನಾಡಿದ ಲೋಕಸಭಾ ಸದಸ್ಯ ಸುನಿಲ್ ಬೋಸ್, ಜಿಲ್ಲೆಯಲ್ಲಿ ಬಡತನ ಹಾಗೂ ಅರಿವಿನ ಕೊರತೆಯಿಂದ ಬಾಲ್ಯವಿವಾಹಗಳು ಹೆಚ್ಚಾಗುತ್ತಿರುವುದು ಕಂಡುಬಂದಿದೆ. ಯಾವುದೇ ಭಾಗದಲ್ಲಿ ಬಾಲ್ಯವಿವಾಹ ನಡೆಯುವ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಜನರಿಗೆ ತಿಳಿವಳಿಕೆ ಹೇಳಬೇಕು. ಜಿಲ್ಲೆಯಾದ್ಯಂತ ಜಾಗೃತಿ ಕಾರ್ಯಕ್ರಮಗಳು ನಡೆಯಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಸೂಕ್ತ ಕ್ರಮ ವಹಿಸಬೇಕು -ಸುನಿಲ್ ಬೋಸ್


ಉದಯವಾಹಿನಿ ಚಿತ್ರ

## ಕಾಮಗಾರಿಗೆ ಅರಣ್ಯ ಇಲಾಖೆ ಅಡ್ಡಿಪಡಿಸದೇ ಸಹಕರಿಸಬೇಕು

**ಕುಡಿಯುವ ನೀರಿಗೆ ಸಂಬಂಧಿಸಿದಂತೆ ಅಮೃತ್ 2.0 ಯೋಜನೆ ಜಿಲ್ಲೆಯಲ್ಲಿ ಕೇಂದ್ರಸರ್ಕಾರದ ಯಾವುದೇ ಯೋಜನೆ, ಕಾರ್ಯಕ್ರಮಗಳನ್ನು ನಿಯಾಮಾನುಸಾರ ಅಧಿಕಾರಿಗಳು ನನ್ನನ್ನು ಸೇರಿದಂತೆ ಜನಪ್ರತಿನಿಧಿಗಳ ಗಮನಕ್ಕೆ ತಂದು ಅನುಷ್ಟಾನಗೊಳಿಸಬೇಕು. ಬೇಸಿಗೆ ಆರಂಭವಾಗುತ್ತಿರುವುದರಿಂದ ಜನರಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು. ಅಲ್ಲದೆ ಜಲಜೀವನ್ ಯೋಜನೆಯಡಿ ಕಾಡಂಚಿನ ಗ್ರಾಮಗಳಲ್ಲಿ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಗೆ ಅರಣ್ಯ ಇಲಾಖೆ ಅಡ್ಡಿಪಡಿಸದೇ ಸಹಕರಿಸಬೇಕು ಎಂದರು.**

> ಈ ಸಂಬಂಧ ಮಾತನಾಡಿದ ಜಿಲ್ಲಾಧಿಕಾರಿಯವರು ಬಾಲ್ಯವಿವಾಹಗಳನ್ನು ತಡೆಯಲು ವ್ಯಾಪಕ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಜಿಲ್ಲೆಯ ಎಲ್ಲಾ ಪಂಚಾಯಿತಿಗಳಲ್ಲಿ ಪರಿಣಾಮಕಾರಿ ಜಾಗೃತಿ ಮೂಡಿಸಿ ಹೆಚ್ಚಿನ ಪ್ರಗತಿ ಸಾಧಿಸುವ ಪಂಚಾಯಿತಿಗೆ ಬಾಲ್ಯವಿವಾಹ ಮುಕ್ತ ಗ್ರಾಮ ಪಂಚಾಯಿತಿ ಎಂದು ಘೋಷಿಸಿ ಪ್ರಶಸ್ತಿ ನೀಡುವ ಯೋಜನೆ ಮಾಡಲಾಗಿದೆ ಎಂದು ತಿಳಿಸಿದರು.

## ವೈದ್ಯರಿಲ್ಲದೆ ರೋಗಿಗಳಿಗೆ ಸಂಕಷ್ಟ

(ಮಿನಿ ನ್ಯೂಸ್)

• ಉದಯವಾಹಿನಿ ಶಿರಾ

ತಾಲ್ಲೂಕಿನ ನೇರಳಗುಡ್ಡ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಳೆದ ಒಂದೂವರೆ ತಿಂಗಳಿಂದ ವೈದ್ಯರು ಇಲ್ಲದ ಕಾರಣ ರೋಗಿಗಳು ಸಂಕಷ್ಟ ಪಡುವಂತಾಗಿದೆ. ನೇರಳಗುಡ್ಡ ಸುತ್ತಮುತ್ತ ಅತಿ ಹೆಚ್ಚು ಸಣ್ಣ ಪುಟ್ಟ ಗ್ರಾಮಗಳಿವೆ. ಇಲ್ಲಿ ವೈದ್ಯರು ಇಲ್ಲದ ಕಾರಣ ಈ ಭಾಗದ ಜನತೆ ಚಿಕಿತ್ಸೆಗಾಗಿ ಬುಕ್ಕಾಪಟ್ಟಣ, ತಾವರೆಕೆರೆ, ಶಿರಾಕ್ಕೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ನೇರಳಗುಡ್ಡ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವೈದ್ಯರು ಇಲ್ಲಿಂದ ಒಂದು ವರ್ಷದ ಗ್ರಾಮೀಣ ಸೇವೆ ಮುಗಿಸಿ ಬೇರೆಡೆಗೆ ಹೋಗಿರುವುದರಿಂದ ಇಲ್ಲಿ ಒಂದೂವರೆ ತಿಂಗಳಿಂದ ವೈದ್ಯರು ಇಲ್ಲದಂತಾಗಿದೆ. ಅವರ ಬದಲು ಬೇರೆ ವೈದ್ಯರನ್ನು ವರ್ಗಾವಣೆ ಮಾಡದ ಕಾರಣ ಹೆಚ್ಚು ತೊಂದರೆಯಾಗುತ್ತಿದೆ. ಬುಕ್ಕಾಪಟ್ಟಣ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಮಾಲತಿ ಪ್ರಭಾರ ವೈದ್ಯರಾಗಿ ನೇಮಕಗೊಂಡಿದ್ದು, ಅವರು ಸಮೀಕ್ಷೆ, ವರದಿ, ಸಭೆ, ಫೋಕ್ಸೊ ಕಾಯ್ದೆ ವಿಚಾರಣೆ, ಪೊಲೀಸ್ ವಿಚಾರಣೆಯಂತಹ ಒತ್ತಡದಿಂದಾಗಿ ಬುಕ್ಕಾಪಟ್ಟಣ ಹಾಗೂ ನೇರಳಗುಡ್ಡ ಎರಡು ಕಡೆ ಕೆಲಸ ಮಾಡಲು ಕಷ್ಟವಾಗುತ್ತಿದೆ. ಬೇಸಿಗೆ ಪ್ರಾರಂಭವಾಗುತ್ತಿರುವುದರಿಂದ ಜನರು ಹೆಚ್ಚು ಕಾಯಿಲೆಗಳಿಗೆ ಸಿಲುಕುತ್ತಿದ್ದು ದೂರದ ಆಸ್ಪತ್ರೆಗಳಿಗೆ ಹೋಗುವುದು ಕಷ್ಟವಾಗುತ್ತಿದೆ.

## ವಿದ್ಯುತ್ ಪ್ರವಹಿಸಿ ಚೆಸ್ಕಾಂ ಸಿಬ್ಬಂದಿ ಸಾವು ಅಧಿಕಾರಿಗಳ ನಿರ್ಲಕ್ಷ್ಯ ಆರೋಪ

• ಉದಯವಾಹಿನಿ ಮಂಡ್ಯ

ವಿದ್ಯುತ್ ಲೈನ್ ಸರಿ ಪಡಿಸುತ್ತಿದ್ದಾಗ ವಿದ್ಯುತ್ ಪ್ರವಹಿಸಿ ಚೆಸ್ಕಾಂ ಸಿಬ್ಬಂದಿ ಸಾವನ್ನಪ್ಪಿರುವ ಘಟನೆ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ರೊಟ್ಟಿಕಟ್ಟೆ ಗ್ರಾಮದಲ್ಲಿ ನಡೆದಿದೆ.

ರೊಟ್ಟಿಕಟ್ಟೆ ಗ್ರಾಮದ ಮಳವಳ್ಳಿ-ಕೊಳ್ಳೆಗಾಲ ರಾಷ್ಟ್ರೀಯ ಹೆದ್ದಾರಿ ಬಳಿ ಘಟನೆ ನಡೆದಿದೆ. ಮಹಮ್ಮದ್ ಅರ್ಷದ್ ಅಲಿ(28) ಮೃತ ಲೈನ್‌ಮ್ಯಾನ್.

ವಿದ್ಯುತ್ ಕಂಬಕ್ಕೆ ಹತ್ತಿ ಕೆಲಸ ಮಾಡುತ್ತಿದ್ದಾಗ ವಿದ್ಯುತ್ ಶಾಕ್ ಹೊಡೆದಿದ್ದು, ಪರಿಣಾಮ ವಿದ್ಯುತ್ ಕಂಬದ ಮೇಲೆ ಪ್ರಾಣ ಬಿಟ್ಟಿದ್ದಾರೆ. 11ಕೆವಿ ಲೈನ್‌ನಲ್ಲಿ ಓವರ್ ಲೋಡ್‌ನಿಂದ ಪದೇ ಪದೇ ವಿದ್ಯುತ್ ಕಡಿತವಾಗುತ್ತಿತ್ತು. ಅಧಿಕಾರಿಗಳ ಸೂಚನೆಯಂತೆ ಮೂವರು ಲೈನ್‌ಮ್ಯಾನ್‌ಗಳು ಕೆಲಸ ಮಾಡುತ್ತಿದ್ದರು.

## ಮಾ.8ರಿಂದ ಶಿವಲಿಂಗೇಶ್ವರ ಜಾತ್ರೆ

• ಉದಯವಾಹಿನಿ ಕನಕಪುರ

ತಾಲ್ಲೂಕಿನ ಕಸಬಾ ಹೋಬಳಿ ಕೂನೂರು ಸಮೀಪದ ಸಮ್ಮಂದನಹಳ್ಳಿ ಸಿದ್ಧೇಶ್ವರ ಮತ್ತು ಶಿವಲಿಂಗೇಶ್ವರ ದೇವಾಲಯ

ಮಾರ್ಚ್ 8ರಂದು ಸಂಜೆ ಶಿವಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ ಹಾಗೂ ಹೋಮ, ವಿವಿಧ ಪೂಜಾ ಕಾರ್ಯಗಳು ನಡೆಯಲಿವೆ. 9ರಂದು ಗಂಗಾ ಪೂಜೆ, ವೀರಗಾಸೆ, ಪಟದ ಕುಣಿತ, ಪೂಜೆ ಕುಣಿತ, ತಮಟೆ ಉತ್ತವ. ನಂತರ ಮೆರವಣಿಗೆ ನಡೆಯಲಿದೆ. ಜತೆಗೆ ಶಿವಲಿಂಗೇಶ್ವರ ಸ್ವಾಮಿಗೆ ಕೈಲಾಸ ಪರ್ವತ ಅಲಂಕಾರ ಮಾಡಲಾಗುವುದು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಸಂಸದ ಡಿ.ಕೆ.ಸುರೇಶ್, ವಿಧಾನ ಪರಿಷತ್ ಸದಸ್ಯ ಎಸ್. ರವಿ, ಆದಿಚುಂಚನಗಿರಿ ಶಾಖಾ ಮಠದ ಅನ್ನದಾನೇಶ್ವರನಾಥ ಸ್ವಾಮೀಜಿ, ಮರಳೆ ಗವಿಮಠದ ಮುಮ್ಮಡಿ ಶಿವರುದ್ರ ಸ್ವಾಮೀಜಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಟ್ರಸ್ಟ್ ವತಿಯಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಾತ್ರೆಗೆ ಬರುವ ಭಕ್ತರಿಗೆ ಹುಲಿಬೆಲೆಯಿಂದ ಕೂನೂರು ಮಾರ್ಗವಾಗಿ ಸಮ್ಮಂದನಹಳ್ಳಿಗೆ ವಾಹನ ವ್ಯವಸ್ಥೆ ಮಾಡಲಾಗಿದೆ ಎಂದು ದೇವಾಲಯ ಸಮಿತಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂಚಾರ ನಿಯಮ ಉಲ್ಲಂಘನೆ 1.07 ಲಕ್ಷ ದಂಡ

• ಉದಯವಾಹಿನಿ ಕುಶಾಲನಗರ

ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ಪಟ್ಟಣದ ಸಂಚಾರ ಪೊಲೀಸ್ ಠಾಣೆ ವತಿಯಿಂದ ಕಾರ್ಯಾಚರಣೆ ತೀವ್ರಗೊಳಿಸಲಾಗಿದ್ದು, 1.07 ಲಕ್ಷ ದಂಡ ವಿಧಿಸಲಾಗಿದೆ.

ಶುಕ್ರವಾರ ಅಪ್ರಾಪ್ತರು ವಾಹನ ಚಾಲನೆ ಮಾಡಿದ ಪ್ರತ್ಯೇಕ ಮೂರು ಪ್ರಕರಣಗಳಲ್ಲಿ ಡಿ.ಎಂ.ವಿನೋದ್. ಪಿ.ಕೆ. ರಾಜೇಶ್ ಹಾಗೂ ಸುಭಾಷ್ ಚಂದ್ರ ಎಂಬ ಮೂವರಿಗೆ ದಂಡ ಹಾಕಲಾಗಿದೆ. ಎರಡು ದಿನಗಳಲ್ಲಿ ಪಾನಮತ್ತ ಹಾಗೂ ಕಾರಿನ ಸೈಲೆನ್ಸರ್ ಪರಿವರ್ತಿಸಿದ ಮೂರು ಪ್ರಕರಣಗಳಲ್ಲಿ ರಿಜ್ವಾನ್, ಅಜಿನಾಸ್, ಫಾಜಿಲ್ ಖಾನ್ ಎಂಬವರಿಗೆ ಒಟ್ಟು 31 ಸಾವಿರ ದಂಡ ವಿಧಿಸಲಾಗಿದೆ.

ವಾಹನ ಚಾಲನೆಗೆ ಪೋಷಕರು ಬಾಲಕ, ಬಾಲಕಿಯರಿಗೆ ಅವಕಾಶ ನೀಡಬಾರದು. ಜನರು ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸಂಚಾರ ಠಾಣಾಧಿಕಾರಿ ಗಣೇಶ್ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

# ನೀರು ಹರಿಸುವಂತೆ ಅಧಿವೇಶನದಲ್ಲಿ ಹೆಚ್.ಟಿ.ಮಂಜು ಆಗ್ರಹ

• ಉದಯವಾಹಿನಿ ಕೆ.ಆರ್.ಪೇಟೆ

ಬೆಳೆದು ನಿಂತಿರುವ ಬೆಳೆಗಳ ಸಂರಕ್ಷಣೆಗಾಗಿ ಹೇಮಾವತಿ ಜಲಾಶಯದಿಂದ ಹೇಮಾವತಿ ಎಡದಂಡೆ ಕಾಲುವೆಗೆ ನೀರು ಹರಿಸಿ ತಾಲ್ಲೂಕಿನ ಕೆರೆ-ಕಟ್ಟೆಗಳನ್ನು ತುಂಬಿಸುವಂತೆ ಶಾಸಕ ಹೆಚ್.ಟಿ. ಮಂಜು ರಾಜ್ಯ ವಿಧಾನ ಸಭೆಯ ಅಧಿವೇಶನದಲ್ಲಿ ಆಗ್ರಹಿಸಿದ್ದಾರೆ.

ಹೇಮಾವತಿ ನೀರಿನ ವಿಚಾರವಾಗಿ ಅಧಿವೇಶನದಲ್ಲಿ ಧ್ವನಿಯೆತ್ತಿದ ಶಾಸಕ ಹೆಚ್.ಟಿ.ಮಂಜು ತಾಲೂಕು ವ್ಯಾಪ್ತಿಯಲ್ಲಿ ಸುಮಾರು 10 ಸಾವಿರ ಎಕರೆ ಪ್ರದೇಶದಲ್ಲಿ ಕಬ್ಬು, ಸುಮಾರು 60 ಸಾವಿರ ಎಕರೆ ಪ್ರದೇಶದಲ್ಲಿ ಭತ್ತ ಮತ್ತು ತೆಂಗು ಮತ್ತಿತರ ತೋಟಗಾರಿಕಾ ಬೆಳೆಗಳು ನೀರಾಗಾಗಿ ಕಾಯುತ್ತಿವೆ. ಸಕಾಲದಲ್ಲಿ ಹೇಮೆಯ ನೀರು ಬಾರದಿದ್ದರೆ ಬೆಳೆದು ನಿಂತಿರುವ ಬೆಳೆಗಳು ಒಣಗಿ ರೈತರು ಸಂಕಷ್ಟಕ್ಕೀಡಾಗುತ್ತಾರೆ. ಪ್ರಸ್ತುತ ಹೇಮಾವತಿ ಜಲಾಶಯದಲ್ಲಿ ಸಾಕಷ್ಟು ನೀರಿದೆ. ಜಲಾಶಯದಲ್ಲಿ ಸಂಗ್ರಹವಾಗಿರುವ ನೀರನ್ನು ತಾಲ್ಲೂಕಿನ ನದಿ ಅಣೆಕಟ್ಟೆ ನಾಲೆಗಳಾದ ಮಂದಗೆರೆ ಎಡ ಮತ್ತು ಬಲದಂಡೆ ನಾಲೆ, ಹೇಮಗಿರಿ ನಾಲೆ ಮತ್ತು ಹೇಮಾವತಿ ಜಲಾಶಯದ ಹೇಮಾವತಿ ಎಡದಂಡೆ ನಾಲೆಗಳ ಮುಖಾಂತರ ನೀರು ಹರಿಸಿ ಬರಿದಾಗಿರುವ ಕೆರೆ-ಕಟ್ಟೆಗಳನ್ನು ತುಂಬಿಸಿ ರೈತರಿಗೆ ಅನುಕೂಲ ಮಾಡಿಕೊಡುವಂತೆ ಮನವಿ ಮಾಡಿದರು. ಶಾಸಕ ಹೆಚ್.ಟಿ.ಮಂಜು ಅವರ ಮನವಿಗೆ ರಾಜ್ಯದ ಉಪ ಮುಖ್ಯಂತ್ರಿಗಳು ಹಾಗೂ ಜಲ ಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಅವರ ಪರವಾಗಿ ಸದನದಲ್ಲಿ ಉತ್ತರಿಸಿದ ರಾಜ್ಯ ಪಂಚಾಯತ್ ಹಾಗೂ ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಹೆಚ್.ಕೆ.ಪಾಟೀಲ್ ಪ್ರಸ್ತುತ ಜಲಾಶಯದಲ್ಲಿ 20.66 ಟಿ.ಎಂ.ಸಿ ನೀರಿನ ಸಂಗ್ರಹವಿದ್ದು ಸದರಿ ನೀರನ್ನು ಹಾಸನ, ಮಂಡ್ಯ ಮತ್ತು ತುಮಕೂರು ಜಿಲ್ಲೆಗಳ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಕಾಯ್ದಿರಿಸಬೇಕಾಗಿರುವುದರಿಂದ ಮುಂದಿನ ಮೇ ತಿಂಗಳ ಅಂತ್ಯದವರೆಗೂ ಹೇಮಾವತಿ ಜಲಾಶಯದಿಂದ ಕಾಲುವೆಗಳಿಗೆ ನೀರು ಹರಿಸಲು ಸಾಧ್ಯವಿಲ್ಲ ಎಂದರು.

### ಬೆಳೆದು ನಿಂತಿರುವ ಬೆಳೆಗಳ ಸಂರಕ್ಷಣೆಯಾಗಬೇಕು



**ಸಚಿವರ ಉತ್ತರಕ್ಕೆ ತೃಪ್ತರಾಗದ ಶಾಸಕ ಹೆಚ್.ಟಿ.ಮಂಜು ತಾಲ್ಲೂಕಿನ ನದಿ ಅಣೆಕಟ್ಟೆ ನಾಲೆಗಳಾದ ಮಂದಗೆರೆ ಎಡ ಮತ್ತು ಬಲದಂಡೆ ನಾಲೆ, ಹೇಮಗಿರಿ ನಾಲೆಗಳು ಮೆಟ್ಟೂರು, ಕೆ.ಆರ್.ಎಸ್ ಅಣೆಕಟ್ಟೆಗಳ ನಿರ್ಮಾಣಕ್ಕೂ ಮುನ್ನವೇ ಶತಮಾನಗಳ ಹಿಂದೆ ರಾಜ ಮಹಾರಾಜರುಗಳಿಂದ ನಿರ್ಮಾಣಗೊಂಡಿವೆ. ನದಿ ಅಣೆಕಟ್ಟೆ ನಾಲೆಗಳ ರೈತರು ಯಾವಾಗಲೂ ಎರಡು ಬೆಳೆ ಭತ್ತ ಬೆಳೆಯುತ್ತಿದ್ದಾರೆ. ತಾಲ್ಲೂಕಿನ ನದಿ ಅಣೆಕಟ್ಟೆ ನಾಲೆಗಳ ವ್ಯಾಪ್ತಿಯಲ್ಲಿ 10 ರಿಂದ 15 ಸಾವಿರ ಎಕರೆ ಪ್ರದೇಶದಲ್ಲಿ ಕಬ್ಬಿನ ಬೆಳೆಯಿದೆ. ಜೊತೆಗೆ ತೆಂಗು ಮುಂತಾದ ತೋಟಗಾರಿಕಾ ಬೆಳೆಗಳಿವೆ. ಬೆಳೆದು ನಿಂತಿರುವ ಬೆಳೆಗಳ ಸಂರಕ್ಷಣೆಯಾಗಬೇಕು.**

# ರಾಜಕೀಯ ದ್ವೇಷದಿಂದ ಡಿಸಿಸಿ ಬ್ಯಾಂಕ್ ಚುನಾವಣೆ ವಿಳಂಬ

• ಉದಯವಾಹಿನಿ ಕೋಲಾರ

ರಾಜಕೀಯ ದ್ವೇಷದಿಂದ ಡಿಸಿಸಿ ಬ್ಯಾಂಕ್ ಚುನಾವಣೆ ವಿಳಂಭವಾಗುತ್ತಿದ್ದು, ಮಹಿಳೆಯರು, ರೈತರು ಬಡ್ಡಿರಹಿತ ಸಾಲದಿಂದ ವಂಚಿತರಾಗುತ್ತಿದ್ದಾರೆ, ಇದರ ಹಿಂದೆ ಕಾಣದ ಕೈಗಳು ಕೆಲಸ ಮಾಡುತ್ತಿದ್ದು ಮುಂದಿನ ದಿನಗಳಲ್ಲಿ ಜನರೇ ಇದಕ್ಕೆ ಉತ್ತರ ನೀಡಬೇಕು ಎಂದು ತಾಲ್ಲೂಕಿನ ಕಡಗಟ್ಟೂರು ವಿವಿಧೋದ್ದೇಶ ಪ್ರಾಥಮಿಕ ಕೃಷಿ ಗ್ರಾಮೀಣ ಸಂಘದ ಅಧ್ಯಕ್ಷ ಕೆ.ವಿ.ದಯಾನಂದ ಹೇಳಿದರು.

ತಾಲೂಕಿನ ಕಡಗಟ್ಟೂರು ವಿವಿದೋದ್ದೇಶ ಪ್ರಾಥಮಿಕ ಕೃಷಿ ಗ್ರಾಮೀಣ ಸಂಘದಿಂದ ಗುರುವಾರ ಹಮ್ಮಿಕೊಂಡಿದ್ದ 16 ಮಹಿಳಾ ಸ್ವಸಹಾಯ ಸಂಘಗಳಿಗೆ ತಲಾ 5 ಲಕ್ಷ ರೂ. ನವೀಕೃತ ಸಾಲದ ಚೆಕ್ ವಿತರಿಸಿ ಮಾತನಾಡಿದರು.

ಮಹಿಳಾ ಸದಸ್ಯರು ಪ್ರಾಮಾಣಿಕವಾಗಿ ಮರುಪಾವತಿ ಮಾಡಿರುವ ಹಿನ್ನಲೆಯಲ್ಲಿ ಸೋಸೈಟಿಯು ಸ್ವಂತ ಬಂಡವಾಳದಿಂದ 16 ಸಂಕ್ಕೆ 80 ಲಕ್ಷ ರೂ. ಸಾಲ ನೀಡಲಾಗುತ್ತಿದೆ ಎಂದರು.

ಕಡಗಟ್ಟೂರು ಸೊಸೈಟಿಯು ರೈತರಿಗೆ, ಮಹಿಳೆಯರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಮುಂಚೂಣಿಯಲ್ಲಿ ಕೆಲಸ ಮಾಡುತ್ತಿದೆ. ಇದರ ಗ್ಗೆ ನಂಬಿಕೆ ಉಳಿಸಿಕೊಂಡಿರುವವರು ಸ್ವಯಂ ಪ್ರೇರಿತರಾಗಿ ಠೇವಣಿ ಇಟ್ಟಿದ್ದಾರೆ. ಇದರಿಂದ ಸರ್ಕಾರ, ಯಾವುದೇ ಬ್ಯಾಂಕ್ ಮೇಲೆ ಅವಲಂಭನೆಯಾಗಿಲ್ಲ ಎಂದರು. ಮಹಿಳಾ ಸಂಘಗಳು ಎರಡೂ ಜಿಲ್ಲೆಯಲ್ಲಿ ಸೇರಿ 26,ಸಾವಿರ ಇದ್ದವು, ನೀಡಲಾಗಿರುವ ಸಾಲ ವಸೂಲಿಯಾಗುತ್ತಿಲ್ಲ, ಇದರಿಂದಾಗಿ ಹೊಸದಾಗಿ ಸಾಲ ನೀಡಲು ತೊಂದರೆಯಾಗುತ್ತಿದೆ. ಇದಕ್ಕೆಲ್ಲ ಬ್ಯಾಂಕಿನ ಕೆಲ ಅಧಿಕಾರಿಗಳು ಹಾಗೂ ಕೆಲ ಸೊಸೈಟಿ ಸಿಬ್ಬಂದಿ ನೇರ ಕಾರಣರಾಗಿದ್ದಾರೆ ಎಂದು ದೂರಿದರು.


ಉದಯವಾಹಿನಿ ಚಿತ್ರ

ಡಿಸಿಸಿ ಬ್ಯಾಂಕಿನ ಆಡಳಿತ ಮಂಡಳಿ ಅಧಿಕಾರದಲ್ಲಿ ಇದ್ದಾಗ ಶೇ.90ರಷ್ಟು ಸಾಲ ವಸೂಲಿ ಆಗುತ್ತಿತ್ತು, ಆದರೆ ಈಗ ವಸೂಲಿಯು ಹಳಿ ತಪ್ಪಿದೆ, ಇದಕ್ಕೆಲ್ಲ ಅಧಿಕಾರಿಗಳು ಕಾರಣರಾಗಿದ್ದಾರೆ. ಬ್ಯಾಂಕಿನ ಚುನಾವಣೆಯಲ್ಲಿ ಸಕಾಲಕ್ಕೆ ನಡೆಸಿದ್ದರೆ ಈ ಸಮಸ್ಯೆ ಉದ್ಭವಿಸುತ್ತಿರಲಿಲ್ಲ ಎಂದು ತಿಳಿಸಿದರು.

ಸೊಸೈಟಿಗಳಲ್ಲಿ ಭ್ರಷ್ಟಾಚಾರ ನಡೆಸಲು ಕಾರಣರಾಗಿರುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಕ್ರಮಕೈಗೊಂಡರೆ ವ್ಯವಸ್ಥೆಯನ್ನು ಸರಿಪಡಿಸಬಹುದು ಎಂದು ಕಿಡಿಕಾರಿದರು.


# ಮಾ.16 ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

• ಉದಯವಾಹಿನಿ ಮುಳಬಾಗಿಲು

ತಾಲ್ಲೂಕಿನ ಕಪ್ಪಲಮಡುಗು ರಾಷ್ಟ್ರೀಯ ಹೆದ್ದಾರಿಯ ಪಕ್ಕದ ಎಂ.ಜಿ 6 ಮಾರ್ಕೆಟ್ ಆವರಣದಲ್ಲಿ ಕಾಂಗ್ರೆಸ್ ಪಕ್ಷದಿಂದ ಮಾ.16ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಏರ್ಪಡಿಸಿರುವ ದೀರ್ಘ ಸುಮಂಗಲಿ ಭವ ಅಡಿಯಲ್ಲಿ ಹೆಣ್ಣು ಮಕ್ಕಳಿಗೆ ಮಡಿಲು ತುಂಬುವ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಕಾಂಗ್ರೆಸ್ ಪಕ್ಷವನ್ನು ಪ್ರೀತಿಯಿಂದ ವಿಶ್ವಾಸದಿಂದ ನೋಡುವ ಪಕ್ಷದ ಕೆಲಸದಲ್ಲಿ ತೊಡಗಿಸಿಕೊಳ್ಳುವ ಮಹಿಳೆಯರು ಸಕಾಲಕ್ಕೆ ಆಗಮಿಸಿ ಯಶಸ್ವಿಗೊಳಿಸಬೇಕೆಂದು ಕಾಂಗ್ರೆಸ್ ಮುಖಂಡ ವಿ.ಆದಿನಾರಾಯಣ ತಿಳಿಸಿದರು.

ಬೈರಕೂರು ಹೊರವಲಯದ ಶ್ರೀ ಸೋಮೇಶ್ವರ ಸ್ವಾಮಿ ದೇವಾಲಯದ ಆವರಣದಲ್ಲಿ ಮಾ.16ರಂದು ನಡೆಯಲಿರುವ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂಬಂಧ ಪೂರ್ವಭಾವಿ ಸಭೆ ಉದ್ಘಾಟಿಸಿ ಮಾತನಾಡಿದರು.

ಹೆಣ್ಣು ಮಕ್ಕಳಿಗೆ ಒಳ್ಳೆಯದಾಗಬೇಕೆಂಬ ಉದ್ದೇಶದಿಂದ ಕಾರ್ಯಕ್ರಮ ವಿಶೇಷ ರೀತಿಯಲ್ಲಿ ಹಮ್ಮಿಕೊಳ್ಳಲಾಗುತ್ತಿದ್ದು ಎಲ್ಲಾ ಮಹಿಳೆಯರಿಗೂ ಅರಿಶಿನ ಕುಂಕುಮ ಬಳೆ ಸೀರೆ ನೀಡುವ ಮೂಲಕ ಗೌರವಿಸಲಾಗುವುದು. ಮುಂದಿನ ವರ್ಷದಿಂದ ನನ್ನ ಧರ್ಮಪತ್ನಿಯೊಂದಿಗೆ ಮುಳಬಾಗಿಲು ತಾಲ್ಲೂಕಿನ ಪ್ರತಿ ಹಳ್ಳಿಯ ಮನೆ ಮನೆಗೂ ಭೇಟಿ ನೀಡಿ ಮನೆ ಬಾಗಿಲಿಗೆ ಅರಿಶಿನ ಕುಂಕುಮ ಬಳೆ ಸೀರೆ ಹೆಣ್ಣು ಮಕ್ಕಳಿಗೆ ನಿಮ್ಮ ಮನೆಯ ಮಗನಾಗಿ ತಂಗಿಯರಿಗೆ ಅಕ್ಕಂದಿರಿಗೆ ಮಡಿಲು ತುಂಬುವ ಕೆಲಸ ಮಾಡುತ್ತೇನೆ ಎಂದರು.


ಉದಯವಾಹಿನಿ ಚಿತ್ರ

> ಈ ವರ್ಷ ತಾಲ್ಲೂಕಿನ ಎಲ್ಲಾ ಮಹಿಳೆಯರಿಗೂ ಸರಿಸುಮಾರು 1 ಲಕ್ಷ ಮಹಿಳೆಯರಿಗೆ ಅರಿಸಿನ ಕುಂಕುಮ ಜೊತೆಗೆ ಸೀರೆ ಬಳೆಗಳನ್ನು ನೀಡಲಾಗುತ್ತಿದೆ. ಈ ಕಾರ್ಯಕ್ರಮ ನಡೆಸುವ ಉದ್ದೇಶದಿಂದ ನಮ್ಮ ಪಕ್ಷದ ಎಲ್ಲಾ ಮುಖದೊಂದಿಗೆ ಚರ್ಚಿಸಿ ತೀರ್ಮಾನಿಸಿದೆ -ವಿ.ಆದಿನಾರಾಯಣ, ಕಾಂಗ್ರೆಸ್ ಮುಖಂಡ

## ತಾಯಿ ಅಂತ್ಯಸಂಸ್ಕಾರ: 40 ಲಕ್ಷಕ್ಕೆ ಬೇಡಿಕೆ ಇಟ್ಟ ಮಕ್ಕಳು ಅನಾಥವಾಗಿ ಬಿದ್ದ ಶವ

• ಉದಯವಾಹಿನಿ ಗೌರಿಬಿದನೂರು

ದೊಡ್ಡ ಕುರುಗೋಡು ಗ್ರಾಮದ ತಮ್ಮ ಜಮೀನಿನಲ್ಲಿ ತಾಯಿ ಶವಸಂಸ್ಕಾರ ಮಾಡಲು ಆಕೆಯ ಗಂಡು ಮಕ್ಕಳೇ 40 ಲಕ್ಷ ಹಣಕ್ಕೆ ಬೇಡಿಕೆ ಇಟ್ಟ ಘಟನೆ ನಡೆದಿದೆ.

ಕೊನೆಗೆ ಮೃತಳ ನಾಲ್ವರು ಪುತ್ರಿಯರು ತಾಯಿಯ ಶವವನ್ನು ಗೌರಿಬಿದನೂರು ಗ್ರಾಮಾಂತರ ಪೊಲೀಸ್ ಠಾಣೆಗೆ ಕೊಂಡೊಯ್ದು, ಶವಸಂಸ್ಕಾರಕ್ಕೆ ಅಡ್ಡಿಪಡಿಸುತ್ತಿರುವ ಸಹೋದರರ ವಿರುದ್ಧ ಪ್ರಕರಣ ದಾಖಲಿಸುವಂತೆ ಒತ್ತಾಯಿಸಿದರು. ತಾಲ್ಲೂಕಿನ ಕಡಗತ್ತೂರಿನ ಪುತ್ರಿಯರ ಮನೆಯಲ್ಲಿ ತಂಗಿದ್ದ ದೊಡ್ಡ ಕುರುಗೋಡು ಗ್ರಾಮದ ಅನಂತಕ್ಕ ಬುಧವಾರ ವೃದ್ಧಾಪ್ಯದಿಂದ ಮೃತಪಟ್ಟರು.

ಸ್ವಂತ ಜಮೀನಿನಲ್ಲಿರುವ ತಂದೆಯ ಸಮಾಧಿ ಪಕ್ಕದಲ್ಲಿಯೇ ತಾಯಿ ಶವಸಂಸ್ಕಾರ ಮಾಡಲು ನಿರ್ಧರಿಸಿದ ಪುತ್ರಿಯರು ಶವವನ್ನು ಸ್ವಂತ ಗ್ರಾಮಕ್ಕೆ ತಂದು, ಹೊಲಕ್ಕೆ ಕೊಂಡೊಯ್ದಿದ್ದರು. ಆಗ ಅಲ್ಲಿಗೆ ಬಂದ ವೃದ್ಧೆಯ ಇಬ್ಬರು ಪುತ್ರರು 40 ಲಕ್ಷ ನೀಡಿದರೆ ಮಾತ್ರ ತಂದೆಯ ಸಮಾಧಿ ಪಕ್ಕದಲ್ಲಿ ತಾಯಿಯ ಶವ ಹೂಳಲು ಅವಕಾಶ ನೀಡುವುದಾಗಿ ಹೇಳಿದರು.


ಕಾಟಾಚಾರಕ್ಕೆ ಸಭೆ ಕರೆದು ಕೆಲವೇ ಮಂದಿ ಅಧಿಕಾರಿಗಳು ಸಭೆಯಲ್ಲಿ ಭಾಗಿ

# ಶಕ್ತಿ ದೇವತೆಗಳ ಜಾತ್ರಾ ಮಹೋತ್ಸವಕ್ಕೆ ನಿರ್ಲಕ್ಷ್ಯ: ಆಕ್ರೋಶ

• ಉದಯವಾಹಿನಿ ಪಿರಿಯಾಪಟ್ಟಣ

ಪಟ್ಟಣದ ಶಕ್ತಿ ದೇವತೆಗಳ ಜಾತ್ರಾ ಮಹೋತ್ಸವಕ್ಕೆ ಪುರಸಭಾ ಅಧ್ಯಕ್ಷರು ಹಾಗೂ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ತಾಲ್ಲೂಕು ಆಡಳಿತ ನಿರ್ಲಕ್ಷ್ಯ ಧೋರಣೆ ವಹಿಸುತ್ತದೆ ಎಂದು ಪುರಸಭಾ ಅಧ್ಯಕ್ಷ ಪ್ರಕಾಶ್ ಸಿಂಗ್ ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ಪುರಸಭೆಯ ತಮ್ಮ ಕಚೇರಿಯಲ್ಲಿ ಕರೆಯಲಾಗಿದ್ದ ಪತ್ರಿಗೋಷ್ಠಿಯಲ್ಲಿ ಮಾತನಾಡಿದ ಅವರು ಈ ಹಿಂದೆ ಪಟ್ಟಣದ ಶಕ್ತಿ ದೇವತೆಗಳ ಜಾತ್ರಾ ಮಹೋತ್ಸವದ ಪೂರ್ವ ಸಿದ್ಧತೆಗೆ ಸಂಬಂಧಿಸಿದಂತೆ ತಾಲ್ಲೂಕು ಆಡಳಿತದ ವತಿಯಿಂದ ಸಭೆಗಳನ್ನು ಕರೆಯುತ್ತಿದರು. ಆ ಸಭೆಗಳಲ್ಲಿ ಹಲವು ಇಲಾಖೆಗಳಿಗೆ ಅವರದೇ ಆದ ಕರ್ತವ್ಯಗಳನ್ನು ವಹಿಸುತ್ತಿದ್ದರು ಹಾಗೂ ಸಭೆಗೆ ಬರದೇ ಇದ್ದ ಇಲಾಖೆಗಳಿಗೆ ಮಾಹಿತಿ ನೀಡಿ ಮತ್ತೊಂದು ಸಭೆಗೆ ಭಾಗವಹಿಸುವಂತೆ ಪ್ರೇರೇಪಿಸುತ್ತಿದ್ದರು ಆದರೆ ಈ ವರ್ಷ ಕಾಟಾಚಾರಕ್ಕೆ ಸಭೆ ಕರೆದು ಕೆಲವೇ ಮಂದಿ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿ ಪುರಸಭಾ ಸದಸ್ಯರಿಗೂ ಮಾಹಿತಿಯನ್ನು ನೀಡದೆ ಕೇವಲ ಫೋನ್ ಕರೆಯ ಮೂಲಕ ನೆಪ ಮಾತ್ರಕ್ಕೆ ಆಹ್ವಾನಿಸಿದ್ದಾರೆ ಇದರಿಂದ ತಾಲೂಕಿನ ಪುರಸಭೆಯ ಸದಸ್ಯರುಗಳಿಗೆ ಬೇಸರವಾಗುತ್ತಿದೆ. ಇದನ್ನು ಪುರಸಭೆಯ ಅಧ್ಯಕ್ಷನಾಗಿ ಖಂಡಿಸುತ್ತೇನೆ ಅಧಿಕಾರಿಗಳ ಇಂತಹ ವರ್ತನೆಯನ್ನು ಶಾಸಕರು ಮಧ್ಯ ಪ್ರವೇಶಿಸಿ ತಾಲ್ಲೂಕು ಆಡಳಿತ ಅಧಿಕಾರಿಗಳಿಗೆ ತಿಳಿ ಹೇಳುವ ಮೂಲಕ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಪುರಸಭಾ ಸದಸ್ಯರ ವಿಶ್ವಾಸವನ್ನು ಪಡೆದು ಜಾತ್ರಾ ಮಹೋತ್ಸವವನ್ನು ಯಶಸ್ವಿಯಾಗಲು ಸಹಕರಿಸಬೇಕೆಂದು ತಿಳಿಸಿದರು.


ಉದಯವಾಹಿನಿ ಚಿತ್ರ

ಉಪಾಧ್ಯಕ್ಷೆ ಸುವರ್ಣ ರವಿ, ಸ್ಥಾಯಿ ಸಮಿತಿಯ ಅಧ್ಯಕ್ಷ ಹರ್ಷದ್ ,ಸದಸ್ಯರಾದ ನಿರಂಜನ್, ಪ್ರಕಾಶ್, ವಿನೋದ್, ಪುಷ್ಪಲತಾ ಸೇರಿದಂತೆ ಇತರರು ಹಾಜರಿದ್ದರು.

> ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ಅಧ್ಯಕ್ಷರಾದ ತಹಶೀಲ್ದಾರ್ ರವರಿಗೆ ಈ ಸಂಬಂಧ ಫೋನ್ ಮುಖಾಂತರ ಮಾಹಿತಿ ಕೇಳಿದರೆ ಹರಿಕೆಯ ಉತ್ತರ ನೀಡುತ್ತಾರೆ ಶಿಷ್ಟಾಚಾರದಲ್ಲಿ ಅವಕಾಶವಿದ್ದರೆ ಪುರಸಭಾ ಅಧ್ಯಕ್ಷರ ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಸೇರಿಸಲಾಗುವುದೆಂದು. ಪಟ್ಟಣವನ್ನ ಪಟ್ಟಣದ ಅಂದವನ್ನು ಹೆಚ್ಚಿಸುವ ಸಲುವಾಗಿ ವಿದ್ಯುತ್ ಅಲಂಕಾರ ಹಾಗೂ ಪ್ರಮುಖ ಬೀದಿಗಳಲ್ಲಿ ಸ್ವಚ್ಛತೆಯನ್ನು ಕಾಪಾಡುವ ಸಲುವಾಗಿ ಸಿಬ್ಬಂದಿಗಳೊಂದಿಗೆ ಸದಸ್ಯರು ಸಹ ಕೈಜೋಡಿಸಿ ಜಾತ್ರೆ ಯಶಸ್ವಿಗೆ ಹಗಲಿರುನ್ನದೆ ಕೆಲಸ ಮಾಡುತ್ತಾರೆ ಆದರೆ ಜಾತ್ರಾ ಪೂರ್ವ ಸಿದ್ಧತಾ ಸಭೆಗಳಲ್ಲಿ ಕನಿಷ್ಠ ಪುರಸಭೆ ಅಧ್ಯಕ್ಷರನ್ನು ಸಭೆಗೆ ಆಹ್ವಾನಿಸದೇ ಸಭೆ ಮಾಡುವುದು ಸರಿಯೇ -ಮಂಜುನಾಥ್ ಸಿಂಗ್ , ಮಾಜಿ ಅಧ್ಯಕ್ಷ

# ಕೇರಳ ಆಶಾ ಕಾರ್ಯಕರ್ತೆಯರ ಹೋರಾಟ ಬೆಂಬಲಿಸಿ ಪ್ರತಿಭಟನೆ

• ಉದಯವಾಹಿನಿ ಮೈಸೂರು:

ಕಳೆದ 25 ದಿನಗಳಿಂದ ಕೇರಳ ಆಶಾ ಕಾರ್ಯಕರ್ತೆಯರು, ತಿರುವನಂತಪುರಂನಲ್ಲಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಹೋರಾಟವನ್ನು ಬೆಂಬಲಿಸಿ ಎಐಯುಟಿಯುಸಿ ಮೈಸೂರು ಜಿಲ್ಲಾ ಸಮಿತಿಯ ವತಿಯಿಂದ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಎಐಯುಟಿಯುಸಿ ಮೈಸೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿಗಳಾದ ಕಾ. ಚಂದ್ರಶೇಖರ್ ಮೇಟಿಯವರು ಮಾತನಾಡಿ, ಕೇರಳದಲ್ಲಿ ಆಡಳಿತ ನಡೆಸುತ್ತಿರುವ ಸಿಪಿಐ(ಎಂ) ನೇತೃತ್ವದ ಎಡರಂಗದ ಸರ್ಕಾರ ಇತರ ಬಂಡವಾಳಶಾಹಿ ಪರ ಪಕ್ಷಗಳಿಗಿಂತ ಭಿನ್ನವಿಲ್ಲ. ಬಿಜೆಪಿ, ಕಾಂಗ್ರೆಸ್ ಪಕ್ಷಗಳು ಬಹಿರಂಗವಾಗಿ ಬಂಡವಾಳಶಾಹಿಗಳ ಪರ ಹೇಳಿಕೊಂಡರೇ, ಇವರು ಅದನ್ನು ಕೃತಿಯಲ್ಲಿ ಮಾಡಿ ತೋರಿಸುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ದೇಶಾದ್ಯಂತ ನೂತನ ಕಾರ್ಮಿಕ ಸಂಹಿತೆಗಳನ್ನು, ಗುತ್ತಿಗೆ ಪದ್ಧತಿಯನ್ನು ವಿರೋಧಿಸಿ ಇವರು ಇತರೆ ಕಾರ್ಮಿಕ ಸಂಘಟನೆಗಳೊಂದಿಗೆ ಹೋರಾಟವನ್ನು ಕಟ್ಟುವ ಇವರು ಕೇರಳದ ಸಾರಿಗೆ ಸಂಸ್ಥೆಯಲ್ಲಿ ಏಳೆಂಟು ವರ್ಷಗಳಿಂದ ಹಿಂದೆಯೇ ಹೊರಗುತ್ತಿಗೆಯ ಆಡಿಯಲ್ಲಿ ನೌಕರರನ್ನು ನೇಮಿಸಿಕೊಂಡಿದ್ದಾರೆ. ಅಲ್ಲದೇ ಕಾರ್ಮಿಕ ಸಂಹಿತೆಯನ್ನು ಜಾರಿ ಮಾಡಲು ಅವಶ್ಯಕ ತಯಾರಿ ಮಾಡಿಕೊಂಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.ಆದ್ದರಿಂದ ಕಳೆದ 25 ದಿನಗಳಿಂದ ಬಿಸಿಲು -ಮಳೆಯೆನ್ನದೆ ಕೇರಳ ಹೆಲ್ತ್ ವರ್ಕರ್ಸ್ ಎಸೋಸಿಯೇಷನ್ ನೇತೃತ್ವದಲ್ಲಿ ಹೋರಾಟ ನಡೆಸುತ್ತಿದ್ದಾರೆ. ದೇಶದ ಇತರೆಡೆ ಸ್ಕೀಮ್ ನೌಕರರಿಗೆ ಕನಿಷ್ಠ 24000 ನಿಗದಿ ಮಾಡಬೇಕೆಂದು ಒತ್ತಾಯಿಸುವ ಇವರು, 7000 ನೀಡಿ ಇಡೀ ದೇಶದಲ್ಲಿ ನಾವೇ ಹೆಚ್ಚು ಗೌರವಧನವನ್ನು ನೀಡುತ್ತಿದ್ದೇವೆ ಎನ್ನುತ್ತಿದ್ದಾರೆ. ಎಂದು ನುಡಿದರು.



ಉದಯವಾಹಿನಿ ಚಿತ್ರ

### ತಮಗೆ ನೀಡುವ 7000ರೂ ಸಾಲುವುದಿಲ್ಲ

**ಬೆಲೆ ಏರಿಕೆಯ ಪರಿಸ್ಥಿತಿಯಲ್ಲಿ ಬದುಕಲು ಕಷ್ಟ**

**ಕೇರಳ ಭೌಗೋಳಿಕವಾಗಿ ವಿಭಿನ್ನವಾಗಿದ್ದು, ಒಬ್ಬ ಆಶಾ ಕಾರ್ಯಕರ್ತೆ ಸುಮಾರು ಹತ್ತು ಕಿಲೋಮೀಟರ್ ನಷ್ಟು ಪ್ರದೇಶದಲ್ಲಿ ಕೆಲಸ ಮಾಡಬೇಕಿದೆ. ಆಗಾಗ್ಗೆ ಪ್ರಾಕೃತಿಕ ವಿಕೋಪಗಳಿಗೆ ತುತ್ತಾಗುವುದರಿಂದ, ಇವರುಗಳು ಸಾಮಾನ್ಯವಾಗಿ ನಮ್ಮ ರಾಜ್ಯದ ಆಶಾ ಕಾರ್ಯಕರ್ತೆಯರು ಮಾಡುವ ಎರಡರಷ್ಟು ಹೆಚ್ಚುವರಿ ಕೆಲಸವನ್ನು ಮಾಡಬೇಕಾಗುತ್ತದೆ. ಹಾಗಾಗಿ ತಮಗೆ ನೀಡುವ 7000ರೂ ಸಾಲುವುದಿಲ್ಲ. ಇಂದಿನ ಬೆಲೆ ಏರಿಕೆಯ ಪರಿಸ್ಥಿತಿಯಲ್ಲಿ ಬದುಕಲು ಕಷ್ಟವಾಗುತ್ತಿದೆ.**

# ಸಂವಿಧಾನ ಅಮೃತ ಮಹೋತ್ಸವ-75

## ಸಂವಿಧಾನದ ಕಾನೂನು ಕಾಯ್ದೆಗಳು ಅನುಷ್ಠಾನ ಸಫಲವಾಗಬೇಕು: ಎ.ಸಿ ಮಹೇಶ್

### ನಾವೆಲ್ಲರೂ ಒಂದೇ ಎನ್ನುವ ಮನೋಭಾವ

**ಚೆನ್ನಾಲಿಂಗನಹಳ್ಳಿ ಜೇತವನ ಬೋಧಿ ಮನೋರಕ್ಕಿ ಬಂತೇಜಿ ಮಾತನಾಡಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಎಲ್ಲಾ ವರ್ಗದ ಜನರ ಏಳಿಗೆಗಾಗಿ ಅಮೂಲ್ಯವಾದ ಸಂವಿಧಾನವನ್ನು ನೀಡಿದ್ದಾರೆ. ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದಂತಹ ಮಹಾಪುರುಷ ಅವರು ಬ್ರಾಹ್ಮಣರಿಂದ ದಲಿತರು ಎಲ್ಲರಿಗೂ ಸಮಾನಕ್ಕೂ ಎಲ್ಲರಿಗೂ ನ್ಯಾಯವನ್ನು ಕೊಟ್ಟಂತವರು ಎಲ್ಲಾ ಸಮುದಾಯದ ಜನರನ್ನ ನಾವು ಪ್ರೀತಿ ವಿಶ್ವಾಸದಿಂದ ನೋಡ ಬೇಕು ನಮ್ಮಲ್ಲಿ ಮೇಲು ಕೀಳು ಎಂಬ ಭಾವನೆಯನ್ನು ತೆಗೆದು ಹಾಕಬೇಕು ನಾವೆಲ್ಲರೂ ಒಂದೇ ಎನ್ನುವ ಮನೋಭಾವದಿಂದ ಇರಬೇಕು ಎಂದು ಸಲಹೆ ನೀಡಿದರು.**

• ಉದಯವಾಹಿನಿ ಹನೂರು

ಸಂವಿಧಾನದ ಕಾನೂನು ಕಾಯ್ದೆಗಳು ಅನುಷ್ಠಾನ ಸಫಲತೆಯಾಗಬೇಕು. ಈ ನಿಟ್ಟಿನಲ್ಲಿ ಗ್ರಾಮೀಣ ಮಟ್ಟಕ್ಕೂ ಕಾನೂನು ಕಾಯ್ದೆ, ಜಾಗೃತಿ ಮೂಡಿಸಬೇಕು. ಕಾನೂನು ಕಾಯ್ದೆಗಳ ಬಗ್ಗೆ ಪ್ರತಿಯೊಬ್ಬರು ತಿಳಿದುಕೊಂಡು ಜಾಗೃತರಾಗಬೇಕು ಎಂದು ಕೊಳ್ಳೇಗಾಲ ತಾಲ್ಲೂಕು ಉಪ ವಿಭಾಗಾಧಿಕಾರಿ ಮಹೇಶ್ ಅವರು ತಿಳಿಸಿದರು.

ಹನೂರು ಪಟ್ಟಣದ ಡಾ.ಬಿಆರ್ ಅಂಬೇಡ್ಕರ್ ಸಮುದಾಯ ಭವನದಲ್ಲಿ ಸಂವಿಧಾನ ಅಮೃತ ಮಹೋತ್ಸವ-75 ಅಂಗವಾಗಿ ಕರ್ನಾಟಕ ಸರ್ಕಾರ ಸಂವಿಧಾನ ಅಮೃತ ಮಹೋತ್ಸವ-75 ಅಂಗವಾಗಿ ತಾಲ್ಲೂಕು ಆಡಳಿತ. ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ವಿಚಾರ ಸಂಕಿರ್ಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಪೂರ್ವ ಹಾಗೂ ಬಳಿಕವು ಶೋಷಿತ ವರ್ಗಗಳ ಜನರ ಮೇಲೆ ದೌರ್ಜನ್ಯ, ನಿಂದನೆ ಪ್ರಕರಣಗಳು ಕಂಡು ಬರುತ್ತಿದ್ದು, ಕಾನೂನು ನಿಯಮ ಉಲ್ಲಂಘನೆಯಾಗಲಿದೆ. ರಾಜ್ಯದಲ್ಲಿ ಪರಿಶಿಷ್ಟ ಜಾತಿ 57ಸಾವಿರ, ಪರಿಶಿಷ್ಟ ಪಂಗಡದವರ ಮೇಲೆ 10 ಸಾವಿರ ದೌರ್ಜನ್ಯ ಪ್ರಕರಣಗಳು ಕಂಡು ಬಂದಿದ್ದು, ದೌರ್ಜನ್ಯ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ.

ಕಾನೂನು ರಕ್ಷಣೆ, ಪರಿಹಾರ, ವಿಶೇಷ ನ್ಯಾಯಾಲಯ ವ್ಯವಸ್ಥೆ, ಸಮಿತಿಗಳ ನೇಮಕವಾಗಿದೆ. ಸಾಮಾಜಿಕ, ವೈಯಕ್ತಿಕ, ನಿಂದನೆ. ಸಾರ್ವಜನಿಕ ವಲಯಕ್ಕೆ ನಿರ್ಬಂಧ, ನಾಗರೀಕ ಹಕ್ಕು ಕಸಿಯುವುದು, ಲೈಂಗಿಕ ಇನ್ನಿತರ ಪ್ರಕರಣಗಳು ಸಮಾಜಕ್ಕೆ ಮಾರಕವಾಗಿದೆ. ರಾಜ್ಯದಲ್ಲಿ 2014ರಲ್ಲಿ ನಡೆದ ದೀನದಲಿತರ ಮೇಲೆ ದೌರ್ಜನ್ಯ ಘಟನೆ ಪ್ರಕರಣದಲ್ಲಿ ಇದೀಗ ನೂರು ಮಂದಿಗೆ ಶಿಕ್ಷೆಯಾಗಿದೆ ಇದು ದೇಶದಲ್ಲೇ ಸಂವಿಧಾನದ ಅಡಿಯಲ್ಲಿ ಕಾನೂನು ನಿಯಮವನ್ನು ಎತ್ತಿ ಹಿಡಿದಿದೆ ಎಂದು ತಿಳಿಸಿದರು. ಸಂವಿಧಾನ ಅಮೃತ ಮಹೋತ್ಸವ-75 ಅಂಗವಾಗಿ ಕರ್ನಾಟಕ ಸರ್ಕಾರ ಹನೂರು ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ , ಸಮಾಜ ಕಲ್ಯಾಣ ಇಲಾಖೆ ಮತ್ತು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ತಾಲ್ಲೂಕು ಘಟಕ ಇವರ ಸಂಯುಕ್ತಾ ಆಶ್ರಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ 1989 ಮತ್ತು ತಿದ್ದುಪಡಿ ಅಧಿನಿಯಮಗಳು ಹಾಗೂ ನಾಗರೀಕ ಹಕ್ಕು ಸಂರಕ್ಷಣಾ ಅಧಿನಿಯಮ ಕುರಿತ ಅದ ವಿಚಾರ ಸಂಕೀರಣ ಮತ್ತು ಕಾರ್ಯಾಗಾರ ನಡೆಯಿತು.

ತಹಶೀಲ್ದಾರ್ ವೈ.ಕೆ. ಗುರುಪ್ರಸಾದ್, ತಾಲ್ಲೂಕು ಪಂ. ಇ.ಒ ರಾಧಾ, ಪಟ್ಟಣ ಪಂ. ಅಧ್ಯಕ್ಷೆ ಮುಮ್ತಾಜ್ ಬಾನು, ಪಟ್ಟಣ ಪಂ. ಸದಸ್ಯ ಸಂಪತ್ ಕುಮಾರ್, ಶಿಕ್ಷಕ ಮಹಾದೇವ ಕುಮಾರ್, ಮಾರ್ಟಳ್ಳಿ ರಾಮಲಿಂಗಂ, ಡಿ.ಎಸ್.ಎಸ್ ಮೈಸೂರ ವಿಭಾಗೀಯ ಸಂಚಾಲಕ ಸಿದ್ದರಾಜು, ಇನ್ನಿತರರು ಹಾಜರಿದ್ದರು.


ಉದಯವಾಹಿನಿ ಚಿತ್ರ

> ಸಂವಿಧಾನ ಹಕ್ಕು, ಅಧಿಕಾರ, ಕಾಯ್ದೆಗಳು, ಕಾನೂನು ಮಾಹಿತಿ ಒದಗಿಸಲಾಗುತ್ತಿದ್ದು ಜನರಿಗೆ ನೆರವು, ಅರಿವು ಉದ್ದೇಶ ಹೊಂದಿದೆ. ಹನೂರು ಭಾಗದಲ್ಲಿ ಎಸ್ಸಿ ,ಎಸ್.ಟಿ ಕಾಯ್ದೆಯಲ್ಲಿ ಈ ವರ್ಷ 13ಪ್ರಕರಣ ದಾಖಲಾಗಿದೆ. ಇಂತಹ ಪ್ರಕರಣ ಬೆಳಕಿಗೆ ಬಾರದೇ ಗ್ರಾಮ ಮಟ್ಟದಲ್ಲೇ ಮುಚ್ಚಿ ಹೋಗುವ ಕೆಲಸವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು -ಕೇಶವ ಮೂರ್ತಿ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ

ಅಂತರಾಳದಿಂದ..
EDITORIAL

# ಶಾಲೆಗಳಲ್ಲಿ ಸ್ಮಾರ್ಟ್ ಫೋನ್ ಬಳಕೆ ಜವಾಬ್ದಾರಿಯುತ ನಡೆಯಲ್ಲಿದೆ ಹಿತ

ಡಿಜಿಟಲ್ ಸಾಕ್ಷರತೆಯನ್ನು ಕೂಡ 'ಸಾಕ್ಷರತೆ'ಯ ಭಾಗವಾಗಿಯೇ ಕಾಣಲಾಗುತ್ತಿರುವ ಪ್ರಸಕ್ತ ಸಂದರ್ಭದಲ್ಲಿ, ಶಾಲೆಗಳಲ್ಲಿ ಮಕ್ಕಳು ಸ್ಮಾರ್ಟ್‌ಫೋನ್ ಬಳಸುವುದರ ಮೇಲೆ ಸಂಪೂರ್ಣ ನಿಷೇಧ ವಿಧಿಸಲು ದೆಹಲಿ ಹೈಕೋರ್ಟ್ ನಿರಾಕರಿಸಿದೆ. ಆದರೆ ಶಾಲೆಗಳಲ್ಲಿ ಮಕ್ಕಳು ಸ್ಮಾರ್ಟ್‌ಫೋನ್ ಬಳಸುವುದು ಜವಾಬ್ದಾರಿಯುತವಾಗಿರಬೇಕು ಎನ್ನುವ ಮೂಲಕ ಹೈಕೋರ್ಟ್, ಕಾಲದ ಅಗತ್ಯಕ್ಕೆ ಸ್ಪಂದಿಸುವ ಕೆಲಸ ಮಾಡಿದೆ. ಶಾಲೆಗಳಲ್ಲಿ ವಿದ್ಯಾರ್ಥಿಗಳು ಸ್ಮಾರ್ಟ್‌ಫೋನ್ ಬಳಸುವುದು ಯಾವ ಬಗೆಯಲ್ಲಿ ಇರಬೇಕು ಎಂಬ ವಿಚಾರವಾಗಿ ಹೈಕೋರ್ಟ್ ಒಂದಿಷ್ಟು ಮಾರ್ಗಸೂಚಿಗಳನ್ನು ಆದೇಶದಲ್ಲಿ ಹೇಳಿದೆ. ಈ ಮಾರ್ಗಸೂಚಿಗಳು ಸ್ಮಾರ್ಟ್‌ಫೋನ್‌ನ ಜವಾಬ್ದಾರಿಯುತ ಬಳಕೆಗೆ ಒತ್ತು ನೀಡಿವೆ. ಇವು ಸ್ವಾಗತಾರ್ಹ ವಾದ ಮಾರ್ಗಸೂಚಿಗಳು, ಸ್ಮಾರ್ಟ್‌ಫೋನ್‌ಗಳು ಇಂದು ನಿತ್ಯಜೀವನದ ಅವಿಭಾಜ್ಯ ಅಂಗ. ತಂದೆ–ತಾಯಿ ಅನುಕ್ಷಣವೂ ಬಳಕೆ ಮಾಡುವ ಸ್ಮಾರ್ಟ್‌ಫೋನ್‌ಗಳನ್ನು ಮಕ್ಕಳು ಶಾಲೆಗಳಲ್ಲಿ ಬಳಸಬಾರದು ಎಂದು ಬಯಸುವುದು ಸದ್ಯದ ಸ್ಥಿತಿಯಲ್ಲಿ ಅಪೇಕ್ಷಣೀಯ ಅಲ್ಲ. ಇಂಟರ್ನೆಟ್ ಮೂಲಕ ಲಭ್ಯವಾಗುವ ಅಗಾಧ ಮಾಹಿತಿ, ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನವನ್ನು ಹಿತಮಿತವಾಗಿ ಬಳಸಿಕೊಂಡು ಕಲಿಕೆಯ ಪ್ರಕ್ರಿಯೆಯನ್ನು ಇನ್ನಷ್ಟು ಚೇತೋಹಾರಿಯಾಗಿ ಮಾಡುವುದು, ಆನ್‌ಲೈನ್ ಕಲಿಕೆಯ ಸಾಧ್ಯತೆಗಳನ್ನು ಬಳಸಿ ಹಳ್ಳಿಯ ಮೂಲೆಯಲ್ಲಿ ಇರುವ ಮಕ್ಕಳಿಗೂ ಉತ್ಕೃಷ್ಟವಾದ ಕಲಿಕಾ ಸಾಮಗ್ರಿಗಳು ಸಿಗುವಂತೆ ಮಾಡುವುದು, ಸ್ಮಾರ್ಟ್‌ಫೋನ್‌ಗಳನ್ನು ಬಳಸಿ ಮಕ್ಕಳ ಸುರಕ್ಷತೆಯನ್ನು ಖಾತರಿಪಡಿಸಿ ಕೊಳ್ಳುವುದ ರತ್ತ ಶಿಕ್ಷಣ ತಜ್ಞರ



ಆಲೋಚನೆಗಳು ಹರಿಯುತ್ತಿರುವ ಈ ಹೊತ್ತಿನಲ್ಲಿ, ಶಾಲೆಗಳಲ್ಲಿ ಮಕ್ಕಳು ಸ್ಮಾರ್ಟ್ ಫೋನ್ ಬಳಸುವುದರ ಮೇಲೆ ಸಂಪೂರ್ಣ ನಿಷೇಧ ಹೇರುವುದು ಪ್ರತಿಗಾಮಿ ನಡೆಯೇ ಆಗುತ್ತದೆ. ಆದರೆ ಕೋರ್ಟ್‌ನ ಆದೇಶದಲ್ಲಿ ಉಲ್ಲೇಖವಾಗಿರುವಂತೆ ಸ್ಮಾರ್ಟ್‌ಫೋನ್‌ಗಳ ಬಳಕೆಯು ಬಹಳ ಜವಾಬ್ದಾರಿಯುತವಾಗಿರಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಮಕ್ಕಳು, ಹದಿಹರೆಯದವರು ಸ್ಮಾರ್ಟ್ ಫೋನ್‌ಗಳನ್ನು ಬಳಸುವುದರಲ್ಲಿ ಒಳಿತೂ ಇದೆ, ಕೆಡುಕೂ ಇದೆ ಎಂಬುದು ಸತ್ಯ.

ಹೀಗಿದ್ದರೂ ಕೆಡುಕು ಗಳನ್ನು ನಿವಾರಿಸುವ ಉದ್ದೇಶದಿಂದ ತಂತ್ರಜ್ಞಾನದ ಬಳಕೆಯ ಮೇಲೆ ಸಂಪೂರ್ಣವಾಗಿ ನಿಷೇಧ ಹೇರುವುದು, ಆ ತಂತ್ರಜ್ಞಾನದ ಒಳಿತುಗಳನ್ನು ಕೂಡ ನಿರಾಕರಿಸುವ ನಡೆಯಾಗುತ್ತದೆ. ಇದರಿಂದ ಲಾಭ ಇಲ್ಲ. ಶಾಲಾ ಆಡಳಿತ ವ್ಯವಸ್ಥೆಗಳು, ಶಾಲಾ ಶಿಕ್ಷಕರು ಈ ವಿಚಾರದಲ್ಲಿ ಹೊಸಕಾಲಕ್ಕೆ ಸ್ಪಂದಿಸುವ ಕೆಲಸ ಮಾಡಬೇಕು. ಸ್ಮಾರ್ಟ್ ಫೋನ್‌ಗಳನ್ನು ಜವಾಬ್ದಾರಿಯುತವಾಗಿ ಬಳಕೆ ಮಾಡುವುದು ಹೇಗೆ ಎಂಬ ಬಗ್ಗೆ ಶಿಕ್ಷಕರು ಮತ್ತು ಶಾಲೆಗಳ ಮುಖ್ಯಸ್ಥರು ಮಕ್ಕಳಿಗೆ ಪಾಠ ಹೇಳುವ ಕೆಲಸ ಮಾಡಬೇಕು. ಇದಕ್ಕಾಗಿ ರಾಜ್ಯ ಅಥವಾ ರಾಷ್ಟ್ರ ಮಟ್ಟದಲ್ಲಿ ಸ್ಪಷ್ಟವಾದ ಮಾರ್ಗಸೂಚಿಗಳನ್ನು ರೂಪಿಸುವ ಕೆಲಸವು ಸರ್ಕಾರಗಳಿಂದ ಆಗಬೇಕು. ಸ್ಮಾರ್ಟ್‌ಫೋನ್‌ಗಳ ಜವಾಬ್ದಾರಿಯುತ ಬಳಕೆಯನ್ನು ಹೇಳಿಕೊಡುವ ಕೆಲಸದಲ್ಲಿ ಪಾಲಕರ ಹೊಣೆಗಾರಿಕೆಯೂ ಬಹಳ ದೊಡ್ಡದಿದೆ. ಆ ಜವಾಬ್ದಾರಿಯನ್ನು ಅವರು ಮುತುವರ್ಜಿಯಿಂದ ನಿಭಾಯಿಸಬೇಕು.

ಮಕ್ಕಳು ಸ್ಮಾರ್ಟ್‌ಫೋನ್ ಬಳಕೆ ಮಾಡುವ ಸಂದರ್ಭದಲ್ಲಿ ಎದುರಾಗಬಹುದಾದ ಬಹುದೊಡ್ಡ ಅಪಾಯಗಳಲ್ಲಿ ಒಂದು, ಅವರು ಇಂಟರ್ನೆಟ್ ಮೂಲಕ ಅಪರಿಚಿತರಿಂದ ಕಿರುಕುಳಕ್ಕೆ ಗುರಿಯಾಗುವುದು. ಇದು ಮಕ್ಕಳ ಸೂಕ್ಷ್ಮ ಮನಸ್ಸಿನ ಮೇಲೆ ಬಹಳ ಕೆಟ್ಟ ಪರಿಣಾಮ ಉಂಟುಮಾಡಬಹುದು. ಇಂತಹ ಪರಿಸ್ಥಿತಿ ಎದುರಾದರೆ ಅದನ್ನು ನಿರ್ವಹಿಸುವುದು ಹೇಗೆ, ಅದನ್ನು ತಕ್ಷಣ ಪಾಲಕರ ಗಮನಕ್ಕೆ ತರುವುದರ ಮಹತ್ವ ಏನು ಎಂಬುದನ್ನು ಮಕ್ಕಳಿಗೆ ತಿಳಿಹೇಳುವ ಕೆಲಸ ಆಗಬೇಕು. ಅಲ್ಲದೆ, ಮಕ್ಕಳು ಇಂಟರ್ನೆಟ್ ಮೂಲಕ ವಿವಿಧ ವಿಷಯಗಳ ಬಗ್ಗೆ ಶೋಧ ನಡೆಸುವಾಗ ಅವರ ವಯಸ್ಸಿಗೆ ಸೂಕ್ತವಲ್ಲದ ವಸ್ತು–ವಿಷಯವು ಅಲ್ಲಿ ಕಾಣಿಸಿಕೊಳ್ಳದೇ ಇರುವಂತೆ ಮಾಡಲು ಅಗತ್ಯವಿರುವ ನಿಯಂತ್ರಣ ವ್ಯವಸ್ಥೆಯನ್ನು ಸ್ಮಾರ್ಟ್‌ಫೋನ್‌ಗೆ ಅಳವಡಿಸಬೇಕಿರುವುದು ಪಾಲಕರ ಕಡೆಯಿಂದ ಆಗಬೇಕಿರುವ ಮತ್ತೊಂದು ಮಹತ್ವದ ಕೆಲಸ. ತಮ್ಮ ಮಗು ಸ್ಮಾರ್ಟ್‌ಫೋನ್ ಅನ್ನು ಹೇಗೆ ಬಳಕೆ ಮಾಡುತ್ತಿದೆ ಎಂಬ ಬಗ್ಗೆ ಮನೆಗಳಲ್ಲಿ ಪಾಲಕರು ನಿಗಾ ಇರಿಸಬೇಕು. ಮನೆಯಲ್ಲಿ ಮಗು ಸ್ಮಾರ್ಟ್‌ಫೋನ್ ಬಳಕೆ ಮಾಡುವ ಬಗೆ ಹೇಗೆ ಇರುತ್ತದೆ ಎಂಬುದು ಆ ಮಗು ಅದನ್ನು ಶಾಲೆಯಲ್ಲಿ ಹೇಗೆ ಬಳಸಲು ಬಯಸುತ್ತದೆ ಎಂಬುದರ ಮೇಲೆ ಪರಿಣಾಮ ಉಂಟುಮಾಡುತ್ತದೆ. ಹೀಗಾಗಿ, ಸ್ಮಾರ್ಟ್‌ಫೋನ್ ಬಳಕೆಗೆ ಮಗುವಿಗೆ ಅವಕಾಶ ಕೊಡುವ ಹಾಗೂ ಬಳಕೆಯ ಮೇಲೆ ಸದಾಶಯದಿಂದ ಕೆಲವು ನಿರ್ಬಂಧಗಳನ್ನು ವಿಧಿಸುವ ಕೆಲಸದಲ್ಲಿ ಪಾಲಕರು, ಶಿಕ್ಷಕರು ಸಮನ್ವಯದಿಂದ ಮುಂದಕ್ಕೆ ಸಾಗಬೇಕು.

---



# ರಾಮಾಯಣ

## ಶ್ರೀ ರಾಮನು ವನವಾಸಕ್ಕೆ ಒಪ್ಪಿದುದು

• ಹಿಂದಿನ ಸಂಚಿಕೆಯಿಂದ **78ನೆಯ ಅಧ್ಯಾಯ**

ಅದುವರೆಗೂ ಸ್ನಾನ ಭೋಜನ ಭೋಗ್ಯವಸ್ತುಗಳನ್ನು ಕೈಗೊಳ್ಳನು ; ಆತನು ಅತ್ಯಂತ ಶೋಕದಿಂದ ನಿಟ್ಟುಸಿರುಬಿಡುತ್ತಿದ್ದಾನೆ ಎಂದು ಹೇಳಿದನು. ಆ ಮಾತನ್ನು ಕೇಳಿ ದಶ ರಥನು ಸುವರ್ಣಮಯವಾದ ಮಂಚದ ಮೇಲೆ ಮೂರ್ಜಿತನಾಗಿ ಬಿದ್ದನು. ಆಗ ಶ್ರೀರಾಮನು ದಶರಥರಾಯನನ್ನು ಕೈ ಹಿಡಿದೆಬ್ಬಿಸಿದನು. ದುಷ್ಟೆಯಾದ ಕೈಕೇಯಾದೇವಿಯ ಕರ್ಣಕಠೋರವಾದ ಮಾತನ್ನು ಕೇಳಿ ಕೋಲುಪೆಟ್ಟು ತಾಕಿದ ಉತ್ತಮಾತ್ರದಂತೆ ತ್ವರಿತವಾಗಿ ವನವನ್ನೆದುವುದಕ್ಕೆ ಶ್ರೀರಾಮನು ನಿಶ್ಚಯಿಸಿ ಮನಸ್ಸಿನಲ್ಲಿ ಕಿಂಚಿನ್ಮಾತ್ರವಾದರೂ ವ್ಯಥೆಯಿಲ್ಲದೆ ಕೈಕೇಯಿದೇವಿಯನ್ನು ಕುರಿತು ಹೇಳಿದನು ಎಲ್ ತಾಯ್ಕೆ ನಾನು ಅರ್ಥವನ್ನು ಬಯಸುವವನಲ್ಲ: ಆದ್ದರಿಂದ ರಾಜ್ಯಾಧಿಪತ್ಯವನ್ನು ಬಯಸೆನು. ಧರ್ಮದಲ್ಲಿಯೇ ತತ್ಪರನಾದ ನನ್ನನ್ನು ಋಷಿಗೆ ಸಮಾನನೆಂದು ತಿಳಿ. ಇದಲ್ಲದೆ ನಿನಗೆ ಪ್ರಿಯವಾದರೆ ನನ್ನ ಪ್ರಾಣಗಳನ್ನು ಬಿಚ್ಚಾದರೂ ಆ ಕಾರ್ಯವನ್ನು ಸಾಧ್ಯ ಮಾಡುತ್ತೇನೆ. ಲೋಕದಲ್ಲಿ ತಾಯಿತಂದೆಗಳ ಮಾತನ್ನು ಪಾಲಿಸುವುದಕ್ಕಿಂತಲೂ ಅಧಿಕವಾದ ಪುಣ್ಯವಿಲ್ಲ. ಎಲ್ ತಾಯಿ, ನನ್ನ ಗುಣಗಳನ್ನು ನೀನು ಬಲ್ಲೆ: ದಶರಥರಾಯನ ಅಪ್ಪಣೆಯಿಲ್ಲದೆ ನನ್ನನ್ನು ನೀನು ವನವಾಸಕ್ಕೆ ಕಳುಹಿಸಿದರೂ ಹದಿನಾಲ್ಕು ವರುಷ ಗಳು ವನವಾಸಕ್ಕೆ ಹೊರಡುತ್ತೇನೆ. ನನ್ನ ತಂದೆಗೆ ಕೋಪವು ಬಂದ ಕಾರಣವನ್ನು ತಿಳುಹಿಸಿದರೆ ನಾನು ಆತನಿಗೆ ಸಮಾಧಾನವನ್ನು ಹೇಳಿ ಆತನ ಅನುಮತಿಯನ್ನು ಪಡೆದು ಈ ಕ್ಷಣದಲ್ಲಿಯೇ ದಂಡಕಾರಣ್ಯಕ್ಕೆ ಹೋಗುತ್ತೇನೆ : ಭರತನು ರಾಜ್ಯವನ್ನಾಳುತ್ತಾ ತಂದೆಯ ಸೇವೆಯನ್ನು ಮಾಡಿ ಆ ಮಾತನ್ನು ಕೇಳಿ ದಶರಥರಾಯನು ಶೋಕಯುಕ್ತನಾಗಿ ಕಣ್ಣೀರು ಹರಿಸುತ್ತಾ ಗಟ್ಟಿಯಾಗಿ ರೋದನವನ್ನು ಮಾಡುತ್ತಿದ್ದನು. ಶ್ರೀರಾಮನು ಆತನ ಪಾದಗಳಿಗೂ ಕೈಕೇಯಿದೇವಿಯ ಪಾದಗಳಿಗೂ ಸಾಷ್ಟಾಂಗವೆರಗಿ, ದಶರಥರಾಯನು ಮಿತಿಮೀರಿದ ಶೋಕದಿಂದ ಎಚ್ಚರದಪ್ಪಿರುತ್ತಾ ನೆಂದು ತಿಳಿದನು. ಆಮೇಲೆ ಅಂತಃಪುರದಿಂದ ಹೊರಟು ಶೀಘ್ರವಾಗಿ ಎರಡು ಮೂರು ಬಾಗಿಲುಗಳನ್ನು ದಾಟಿ ಹೊರಬಾಗಿಲ ಚಾವಡಿಯಲ್ಲಿದ್ದ ತನ್ನ ಮಿತ್ರರನ್ನು ಕಂಡು ನಡೆದ ವೃತ್ತಾಂತವನ್ನು ನುಡಿದನು. ಅದನ್ನು ಕೇಳಿ ಲಕ್ಷ್ಮಣನು ಅತ್ಯಂತ ಕುಪಿತನಾಗಿ ಕಣ್ಣುಗಳಲ್ಲಿ ನೀರು ತುಂಬಿಕೊಂಡು ಶ್ರೀರಾಮನ ಹಿಂದೆ ನಡೆದನು! ಶ್ರೀರಾಮನು ತನ್ನ ಪಟ್ಟಾಭಿಷೇಕಾರ್ಥವಾಗಿ ತಂದ ವಸ್ತುಗಳಿಗೆ ಪ್ರದಕ್ಷಿಣೆಮಾಡಿ ತಿರುಗಿ ನೋಡದೆ ಉದಾಸೀನ ಬುದ್ಧಿಯುಳ್ಳವನಾಗಿ ಮುಂದೆ ಹೋದನು. ಸಮಯದಲ್ಲಿ ಆತನಿಗೆ ಪಟ್ಟಾಭಿಷೇಕಮಾಡುವ ಪ್ರಯತ್ನವು ನಿಲ್ಲಿಸಲ್ಪಟ್ಟಿತೆಂಬ ವಾರ್ತೆಯು ಜನಜನಿತವಾಗಿ ಹಬ್ಬಿತು ಆಗ ಆತನ ಮುಖಕಾಂತಿಯು ಹೆಚ್ಚಿತಲ್ಲದೆ ಕಡಮೆಯಾಗಲಿಲ್ಲ. ಸಮಸ್ತ ಲೋಕಗಳಿಗೂ ಮನೋಹರವಾದ ಶ್ರೀರಾಮನ ತನುಕಾಂತಿಯು ಶುಕ್ಲ ಪಕ್ಷದ ಚಂದ್ರನಂತೆ ಅತ್ಯಂತ ಸುಂದರವಾಗಿಯೇ ಕಾಣುತ್ತಿತ್ತು! ಶ್ರೀರಾಮನಿಗೆ ರಾಜ್ಯಭಾರವು ತಪ್ಪಿದರೂ ಮನಸ್ಸಿನಲ್ಲಿ ವಿಕಾರವು ಹುಟ್ಟಲಿಲ್ಲ. ತನ್ನ ರಾಜಚಿಹ್ನಗಳಾದ ಶ್ವೇತಚ್ಛತ್ರ, ಚಾಮರ ರಥ ವಾಹನಾದಿಗಳನ್ನೂ

ಊಳಿಗದವರು ಮೊದಲಾದವರನ್ನೂ ತೊರೆದು ಮನಸ್ಸಿನಲ್ಲಿ ಸಂತೋಷವನ್ನು ತಾಳಿ ತನ್ನ ತಾಯಿ ಯಾದ ಕೌಸಲ್ಯಾದೇವಿಗೆ ಕರ್ಣಕಠೋರವಾದ ಆ ವೃತ್ತಾಂತವನ್ನು ಹೇಳುವುದಕ್ಕಾಗಿ ಆಕೆಯ ಸಮೀಪಕ್ಕೆ ಹೋದನು. ಆ ಸಮಯದಲ್ಲಿ ಅಯೋಧ್ಯಾ ಪಟ್ಟಣದಲ್ಲಿದ್ದ ಸಮಸ್ತ ಜನರೂ ಶ್ರೀರಾಮನ ಮುಖ ಕಾಂತಿಯನ್ನು ಕಂಡು ಆಹಾ ಶ್ರೀರಾಮನು ಎಂಥ ಧೀರಪುರುಷನು ಪಟ್ಟಾಭಿಷೇಕೋತ್ಸವವು ನಿಂತು ದಂಡಕಾರಣ್ಯವಾಸ ಪ್ರಾಪ್ತವಾದರೂ ದುಃಖಪಡದಿದ್ದಾನೆ; ಇಂಥ ಧೀರಪುರುಷನು ಮತ್ತೊಬ್ಬನುಂಟೆ ಎಂದು ಕೊಂಡಾಡುತ್ತಿದ್ದರು. ಆಗ ಶರತ್ಕಾಲದ ಹುಣ್ಣಿಮೆಯ ಚಂದ್ರನಂತೆ ಶ್ರೀರಾಮನ ಮುಖವು ಕಾಂತಿಗುಂದದಿತ್ತು.


ಮುಂದುವರಿಯುವುದು...

---

ವಿಶ್ವದಾದ್ಯಂತ ಮಾರ್ಚ್ 8ನೇ ದಿನಾಂಕವನ್ನು 'ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಇಂದು ಈ ಕಾರಣವಾಗಿ ಅನೇಕ ವಿಶೇಷ ಕಾರ್ಯಕ್ರಮಗಳು ಎಲ್ಲೆಡೆ ನಡೆಯುತ್ತವೆ. ಈ ದಿನಕ್ಕೆ 'ಮಹಿಳಾ ದಿನ' ಎಂದೇಕೆ ಪ್ರಾಶಸ್ತ್ಯ –ಹೆಸರು ನೀಡಲಾಗಿದೆ ಈ ದಿನದ ವಿಶೇಷವೇನು? ಮಹತ್ವವೇನು ಮುಂತಾಗಿ ಬಹಳಷ್ಟು ಜನಕ್ಕೆ ತಿಳಿದಿರುವುದಿಲ್ಲ. ಈ ವಿಶೇಷ ದಿನಕ್ಕೆ ಒಂದು ಆಸಕ್ತಿಯುತ ಹಿನ್ನಲೆಯ ಇತಿಹಾಸ ಇದೆ.


# ಒಂದು ಸಂವೇದನೆ





• ಉದಯವಾಹಿನಿ ವಿಶೇಷ

ಈ ದಿನಕ್ಕೆ ಜಾಗತಿಕ ಮಹಿಳಾ ಇತಿಹಾಸದಲ್ಲಿ ತನ್ನದೇ ಆದ ಒಂದು ಮಹತ್ವ, ವೈಶಿಷ್ಟ್ಯಗಳಿವೆ. ಪುರುಷಪ್ರಧಾನ ಸಮಾಜದಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ಮುಷ್ಠಿಯಲ್ಲಿ ನಲುಗಿ ಹೋದ ಅಂದಿನ ಮಹಿಳೆ ಪ್ರಪ್ರಥಮವಾಗಿ ತನ್ನ ದನಿಯನ್ನು, ಪ್ರತಿಭಟನೆಯನ್ನು ತೋರಿದ ಪ್ರಮುಖ ದಿನ ಇದು. ಸಾವಿರಾರು ವರ್ಷಗಳಿಂದ ಭಾರತದಂತೆ ವಿದೇಶಗಳಲ್ಲಿಯೂ ಹೆಣ್ಣುಮಕ್ಕಳ ಬಗ್ಗೆ ಪುರುಷ ಸಮಾಜವು ಅಸಡ್ಡೆ, ಅನಾಸಕ್ತಿ ತೋರುತ್ತ ಬಂದಿತ್ತು. ಮಹಿಳೆಯರ ಮೇಲೆ ಸಾಮಾಜಿಕ, ಆರ್ಥಿಕ, ದೈಹಿಕ ಶೋಷಣೆ, ಅನ್ಯಾಯ, ಅತ್ಯಾಚಾರಗಳು ನಡೆಯುತ್ತಿದ್ದರೂ ಪ್ರಪಂಚದ ಎಲ್ಲಾ ಮಹಿಳೆಯರೂ ಮೂಕರಂತೆ ಅನುಭವಿಸುತ್ತ ಅಸಹಾಯಕರಾಗಿದ್ದ ಕಾಲವೊಂದಿತ್ತು. ಆದರೆ ಭಾರತದಲ್ಲಿ ಇಂದೂ ಕೂಡ ಕೆಲವು ಚಿಂತನಶೀಲ, ಪ್ರಗತಿಪರ ಸಬಲ ಸ್ತ್ರೀಯರನ್ನು ಹೊರತುಪಡಿಸಿ, ಹಲವಾರು ಮಹಿಳೆಯರು ಅನಿವಾರ್ಯವಾಗಿ, ಅಸಹಾಯಕತೆಯಿಂದ ಸಮಾಜದ ಅಸಮಾನತೆ, ತಾರತಮ್ಯ – ಅನ್ಯಾಯಗಳನ್ನು ಎದುರಿಸಲಾರದೆ ಜೊತೆಗೆ, ಪುರುಷ ದೌರ್ಜನ್ಯಗಳಿಂದಲೂ ಶೋಷಿತರಾಗುತ್ತಿರುವುದು ಸುಳ್ಳಲ್ಲ. ಇನ್ನು ಅಂದಿನ ಕಾಲದ ಮಹಿಳೆಯರ ಸ್ಥಿತಿಗತಿಯನ್ನು ಕಲ್ಪಿಸಿಕೊಳ್ಳಬಹುದು. ನೂರಕ್ಕೂ ಹೆಚ್ಚಿನ ಹಿಂದಿನ ವರ್ಷಗಳ ಘಟಿಸಿದ ಸಂಗತಿಗಳು ಅವು. ಪ್ರಥಮ ಪ್ರತಿಭಟನೆಯ ಮಹಿಳಾ ಸೊಲ್ಲು ಕೇಳಿ ಬಂದದ್ದು 1907ರಲ್ಲಿ. ಅಮೇರಿಕಾದ ನ್ಯೂಯಾರ್ಕಿನ ಸಿದ್ಧ ಉಡುಪಿನ ಕಾರ್ಖಾನೆಯೊಂದರಲ್ಲಿ ಮಹಿಳಾ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲಿನ ಎಲ್ಲಾ ಜನಾಂಗದ ಮಹಿಳಾ ಕಾರ್ಮಿಕರೂ ಸಮಾನ ವೇತನಕ್ಕಾಗಿ ಹಾಗೂ ದಿನಕ್ಕೆ 8 ಗಂಟೆ ಮಾತ್ರ ದುಡಿಯುವ ಹಕ್ಕಿಗಾಗಿ ಸಂಘಟಿತರಾಗಿ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು. ಅದು ಚಳವಳಿಯ ರೂಪ ತಳೆದಿತ್ತು. ಆಗ ಸರ್ಕಾರ ಅವರ ಮೇಲೆ ಗುಂಡಿನ ಸುರಿಮಳೆ ಸುರಿಸಿದಾಗ, ಅಲ್ಲಿನ ಮಹಿಳಾ ಕಾರ್ಮಿಕರು ಯಾರೂ ಕಿಂಚಿತ್ತೂ ಧೈರ್ಯಗೆಡದೆ ಸಾವು ನೋವು ಗಳನ್ನು ಲೆಕ್ಕಿಸದೆ ತಮ್ಮ ಹೋರಾಟವನ್ನು ಮುಂದುವರಿಸಿದರು. ಕೊನೆಗೆ ಸರ್ಕಾರ ಅವರ ಉಗ್ರ ಹೋರಾಟಕ್ಕೆ ಮಣಿದು ಅವರ ಬೇಡಿಕೆಯನ್ನು ಒಪ್ಪಿಕೊಂಡಿತು. 'ಮಹಿಳೆಯರ ವಿಜಯ'ಕ್ಕೆ ಈ ಘಟನೆ ನಾಂದಿ ಹಾಡಿತು. ಈ ಒಂದು ಘಟನೆ, ಚಳವಳಿ ಪ್ರಪಂಚದ ನಾನಾ ಭಾಗದ ಮಹಿಳೆಯರು ತಮಗಾಗುತ್ತಿರುವ ಅನ್ಯಾಯ,ಅತ್ಯಾಚಾರಗಳ ವಿರುದ್ಧ ಹೋರಾಡಲು ಪ್ರೇರೇಪಣೆ ನೀಡಿತು, ಹಾಗೂ ಈ ಹೋರಾಟ ಸಮಾಜವಾದದ ಮಹಿಳಾ ನಾಯಕಿಯರ ಗಮನವನ್ನು ಕೂಡ ಸೆಳೆ ಯಿತು. ಈ ದಿನವನ್ನು ಅತ್ಯಂತ 'ಮಹತ್ವದ ದಿನ'ವನ್ನಾಗಿ ಆಚರಿಸಲು ಅಂದಿನ ಸಮಾ ಜವಾದದ



ಅಂತರ ರಾಷ್ಟ್ರೀಯ ಮಹಿಳಾ ದಿನ

ನಾಯಕಿಯಾಗಿದ್ದ ಶ್ರೀಮತಿ ಕ್ಲಾರಾ ಜೆಟ್‌ಕಿನ್ 1910 ರ ಮಾರ್ಚ್ 8 ರಂದು ಮಹಿಳೆಯರಿಗೆ ಸಾರ್ವತ್ರಿಕ ಮತದಾನದ ಹಕ್ಕನ್ನು ಬೇಡಿಕೆಯನ್ನಾಗಿಟ್ಟುಕೊಂಡು ಆ ದಿನವನ್ನು 'ಅಂತರರಾಷ್ಟ್ರೀಯ ಮಹಿಳಾ ದಿನ'ವನ್ನಾಗಿ ಆಚರಿಸಿದರು. ಅವರ ಎರಡನೆಯ ಸಮಾವೇಶದಲ್ಲಿ ಆಕೆ ನಿರ್ಣಯವೊಂದನ್ನು ಮಂಡಿಸಿದಳು: 'ಮತದಾನದ ಚಳವಳಿಯಲ್ಲಿ ಆಕೆಯ ಹಕ್ಕನ್ನು ಕಸಿದುಕೊಳ್ಳುವುದು, ರಾಜಕೀಯ ಅಸಮಾನತೆ ಹಾಗೂ ಅವಮಾನವೇ ಸರಿ ಎಂದು ಸಾರಿ, ಪ್ರತಿಭಟನೆಯ ಕಿಚ್ಚನ್ನು ಹಚ್ಚಿದಳು. ಅಂದಿನಿಂದಲೇ ಮಾರ್ಚ್ 8 ರಂದು ವಿಶ್ವದಾದ್ಯಂತ 'ಮಹಿಳಾ ದಿನಚರಣೆ'ಯನ್ನಾಗಿ ಆಚರಿಸಬೇಕಾಗಿ ಆಕೆ, ಮಹಿಳಾ ಸಮುದಾಯಕ್ಕೆ ಕರೆ ನೀಡಿದಳು.'ಸಾರ್ವತ್ರಿಕ ಮತದಾನದ ಹಕ್ಕು' –ಎಂಬುದು ಸಮಾವೇಶದ ಘೋಷಣೆ ಯಾಗಿತ್ತು. 1911 ರಿಂದ ಹಿಡಿದು ಮೊದಲ ಜಾಗತಿಕ ಯುದ್ಧದ ಆರಂಭದವರೆಗೂ ಯೂರೋಪಿನ ಮಹಿಳೆಯರು ಈ ದಿನದಂದು ಪ್ರಮುಖ ಪಟ್ಟಣಗಳಲ್ಲಿ ಪ್ರತಿಭಟನಾ ಪ್ರದರ್ಶನ, ಮೆರವಣಿಗೆಗಳನ್ನು ನಡೆಸುತ್ತಿದ್ದರು. ಮಹಿಳೆಯರಲ್ಲಿ ಜಾಗೃತಿ ಯನ್ನು ಉಂಟುಮಾಡಲು ಯತ್ನಿಸುತ್ತಿದ್ದರು. ಮೊದಲ 'ಸಮಾಜವಾದಿ' ರಾಷ್ಟ್ರವಾದ ರಷ್ಯಾದಲ್ಲಿ ಮಹಿಳಾ ದಿನ' ಮೊದ ಮೊದಲು ಅಂಥ ಪ್ರಾಮುಖ್ಯವನ್ನೇನೂ ಪಡೆಯಲಿಲ್ಲ. 1914 ರಲ್ಲಿ ಮಾರ್ಚ್ 8 ರಂದು ಸೇರಿದ್ದ ಜನಸಂದಣಿಯನ್ನು

ಕಂಡು 'ತ್ಸಾರ್' ಸರ್ಕಾರ ಎಚ್ಚೆತ್ತಿತು. ಕೆಲವು ಸಭೆಗಳಲ್ಲಿ ಭಾಷಣ ಕಾರರನ್ನು ಬಂಧಿಸಿದರೆ, ಮತ್ತೆ ಕೆಲವು ಜಾಗಗಳಲ್ಲಿ ಕಾರ್ಯ ಕ್ರಮ ನಡೆಯದಂತೆ ನೋಡಿಕೊಳ್ಳಲಾಯಿತು. ಆದರೆ 1917ರಲ್ಲಿ ರಷ್ಯಾದಲ್ಲಿ ನಡೆದ ಅಂತರ ರಾಷ್ಟ್ರೀಯ ಮಹಿಳಾ ದಿನ ಚರಿತ್ರಾರ್ಹವೂ, ಅವಿಸ್ಮರಣೀಯ ಅನುಭವವೂ ಆಗಿ ಉಳಿಯಿತು. ಆ ದಿನ 10,000 ಪೆಟ್ರೋಗ್ರಾಡ್ ಕಾರ್ಮಿಕರು ಮುಷ್ಕರ ಹೂಡಿದ್ದರು. ಐದು ದಿನಗಳ ಕಾಲ ಸತತವಾಗಿ ನಡೆದ ಪ್ರದರ್ಶನ, ಚಳವಳಿಯ ಕಾವಿಗೆ ತ್ಸಾರನು ಮಣಿಯಲೇಬೇಕಾಯಿತು. ಮುಂದೆ– ಅಂತರ ರಾಷ್ಟ್ರೀಯ ಮಹಿಳಾ ದಿನ ರಷ್ಯಾದಲ್ಲಿ ಕಡ್ಡಾಯ ಆಚರಣೆಯಾಗಿ ಉಳಿಯಿತು. ಚೀನಾದಲ್ಲಿ ಮಹಿಳಾದಿನ ವನ್ನು ಮೊದಲ ಬಾರಿಗೆ 1924ರಲ್ಲಿ ಆಚರಿಸಲಾಯಿತು. ವಿದೇಶ ಸಾಮ್ರಾಜ್ಯ ಶಾಹಿಗೆ ಧಿಕ್ಕಾರ, ಚೀನಾ ವನ್ನು ಅದರ ವಸಾ ಹತುಶಾಹಿ ಸ್ಥಾನದಿಂದ ಮುಕ್ತ ಗೊಳಿಸಿ ಎಂಬ ಘೋಷಣೆಗಳನ್ನು ಬರೆದು ಮಹಿಳಾ ದಿನವನ್ನು ಅವರು ಆಚರಿಸಿದರು. ಎರಡನೇ ಮಹಾ ಯುದ್ಧದ ನಂತರ ಅಂತರ ರಾಷ್ಟ್ರೀಯ ಮಹಿಳಾದಿನದ ಬಹು ಮುಖ್ಯ ಘೋಷಣೆ 'ವಿಶ್ವಶಾಂತಿ' ಯ ಬೇಡಿಕೆಯಾಗಿತ್ತು. ವಿಶೇಷವಾಗಿ ಬ್ರಿಟನ್, ಯುರೋಪ್‌ಗಳಲ್ಲಿ ವಿಶ್ವಶಾಂತಿಯ ದಿನ ವೆಂದೇ ಮಹಿಳಾದಿನವನ್ನು ಆಚರಿಸಲಾಗುತ್ತಿತ್ತು. 1986 ರ ಮಾರ್ಚ್ 8 ರಂದು ಮನಿಲಾದಲ್ಲಿ ನಡೆದ 'ಮಹಿಳಾ ದಿನ'ದಲ್ಲಿ ಸೇರಿದ್ದ 30 ಗುಂಪುಗಳ ಸಾವಿರಾರು ಫಿಲಿಪನ್ ಮಹಿಳೆಯರು ಆ ಸಂದರ್ಭದಲ್ಲಿ – 'ಮಹಿಳೆಯರು ಸ್ವತಂತ್ರರಾಗದಿದ್ದರೆ ಆ ದೇಶವೂ ಸ್ವತಂತ್ರವಲ್ಲ. ಎಂಬ ದೊಡ್ಡ ಘೋಷಣೆ ಮೊಳಗಿಸಿದರು.

ಇಂದು ವಿಶ್ವದ ಮಹಿಳೆ ಈ ಘೋಷಣೆಯಾಚೆಗೂ ಬೆಳೆದಿದ್ದಾಳೆ. ಪುರು ಷಾಧಿಕಾರದ ಎಲ್ಲಾ ನೆಲೆಗಳನ್ನು ಪ್ರಶ್ನಿಸುತ್ತ ಮುಂದೆ ಸಾಗಿದ್ದಾಳೆ.

ತನ್ನ ಸ್ವತಂತ್ರ ಆಲೋಚನೆಯಿಂದ ರೂಪುಗೊಂಡ ಮಹಿಳೆ ಸ್ವಾವಲಂಬನೆ, ಆರ್ಥಿಕ ಸ್ವಾತಂತ್ರ್ಯಗಳಿಂದ ಪುಷ್ಟಗೊಂಡು ದಿಟ್ಟ ಹೆಜ್ಜೆ ಗಳನ್ನಿಡುತ್ತಿರುವುದು ಹೊಸ ವಿಚಾರವೇನಲ್ಲ. 21 ನೇ ಶತಮಾನದ ಜಾಗತಿಕ ಮಟ್ಟದಲ್ಲಿ ದಾಪುಗಾಲು ಹಾಕುತ್ತ ಸಾಗುತ್ತಿರುವ ಇಂದಿನ ಮಹಿಳೆಯರ ಆಲೋಚನೆ, ನಡೆ ಯಾವ ದಿಕ್ಕಿನಲ್ಲಿದೆ? ಈ ಮಹಿಳಾದಿನದ ಆಚರಣೆ ಕೇವಲ ಯಾಂತ್ರಿಕವಾಗಿ ನಡೆಯುತ್ತಿದೆಯೇ? ಅಥವಾ ಅರ್ಥಪೂರ್ಣವಾಗಿದೆಯೇ? ಮಹಿಳೆಯರನ್ನು ಸಬಲರನ್ನಾಗಿಸುವ ದಿಸೆಯಲ್ಲಿ ಹಿಂದಿನ ಈ ಚರಿತ್ರೆ ಎಷ್ಟು ಪೂರಕ? ಅವಳ ಹಕ್ಕುಗಳ ಸಾಕಾರತೆಗೆ, ಪ್ರತಿಭಟನೆಯ ಮುನ್ನಡೆಗೆ ಇಂಬು ನೀಡಿದೆಯೇ? ಆಕೆಯ ಸ್ಥಾನಮಾನಗಳಲ್ಲಿ ಬದುಕಿನ ಸ್ತರಗಳಲ್ಲಿ ಗಮನೀಯ ಬದಲಾವಣೆಗಳೇನಾದರೂ ಕಂಡುಬಂದಿವೆಯೇ? ಇತ್ಯಾದಿ ಅನೇಕ ಪ್ರಶ್ನೆಗಳು ಎದುರಾಗುವುದು ಸಹಜ.


---

# ಹೆಣ್ಣುಮಗು ಇಲ್ಲದ ಮನೆ ಚಂದ್ರನು ಇಲ್ಲದ ಆಕಾಶದಂತೆ ..!



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಸ್ತ್ರೀ ಎಂದರೆ ಅಷ್ಟೇ ಸಾಕೇ...! ಸ್ತ್ರೀ ಎಂದರೆ ದೈವಾಂಶ ಇರುವ ಸಕಲ ದೇವರುಗಳೂ ಗೌರವಿಸುವ ದೇವತೆ ..! ಹೆಣ್ಣುಮಗು ಹುಟ್ಟಿತು, ಶುರು ಆಯ್ತು, ಒಂದಲ್ಲಾ ನೂರೆಂಟು ಯೋಚನೆಗಳು. ಹೆಣ್ಣುಮಗು ಅನ್ನೋದು ಒಂದು ನಿಮ್ಮ ಜವಾಬ್ದಾರಿಯೇ ಹೊರತು, ಭಾರದ ವಸ್ತುವಲ್ಲ..! ಹೊರೆಯಲ್ಲ..! ಕ್ಷಮಯಾ ಧರಿತ್ರಿಯಾದವಳು, ತಾಳ್ಮೆಯ ಸಹನಾ ಮೂರ್ತಿಯಾದವಳು, ಗಂಡು ಮಕ್ಕಳು ತಂದೆತಾಯಿಗಳನ್ನು ಹೊರ ಹಾಕಿದರೂ , ಅವರನ್ನು ಕೊನೆಯ ತನಕ ನೋಡಿಕೊಳ್ಳಬೇಕೆಂಬ ಆಸೆ, ತಾಳ್ಮೆ ಹೆಣ್ಣುಮಗುವಿನಲ್ಲೇ ಹೆಚ್ಚು..! ಏನುಕ್ಕೆ ಈ ವಿಚಾರ ಪ್ರಸ್ತಾಪಿಸಿದೇ ಅಂದರೆ ಒಂದು ಜಾತಕ ಬಂದಿತ್ತು. ಹುಡುಗಿ ತುಂಬಾ ವಿದ್ಯಾವಂತಳು ಆದರೆ ಅವರ ತಂದೆತಾಯಿ ಮಗಳು ಮದುವೆ ವಯಸ್ಸಿಗೆ ಬಂದಳೆಂದು 21 ಕ್ಕೆ, ಅರ್ಧಕ್ಕೆ ವಿದ್ಯಾಭ್ಯಾಸ ನಿಲ್ಲಿಸಿ ಮದುವೆ ಮಾಡಿದರು.. ದುರಾದೃಷ್ಟವೇನೋ ಗಂಡನಿಂದ ದೂರವಾದಳು..! ಈಗ ತವರುಮನೆಯಲ್ಲಿ ಅತ್ತಿಗೆಯರ ಕಾಟ ಹೋಗುವುದಕ್ಕಾಗುವುದಿಲ್ಲ. ಗಂಡನ ಮನೆಯಲ್ಲಿ ವರದಕ್ಷಿಣೆ ಕಾಟ..! ಎಲ್ಲಿಗೆ ಅಂಥ ಹೋಗಬೇಕು.. ಉದ್ಯೋಗ ಮಾಡೋಣವೆಂದರೆ ವಿದ್ಯಾಭ್ಯಾಸ ಪೂರ್ಣವಾಗಿಲ್ಲ.. ಎಲ್ಲಿ ಬದುಕಬೇಕು..! ಯೋಚಿಸಿ..? ಹೆಣ್ಣುಮಗು ಓದುತ್ತಿದಿಯಾ..? ಚೆನ್ನಾಗಿ ಓದಿಸಿ, ಎಲ್ಲಿಯ ತನಕ ಓದುತ್ತಾರೋ ಓದಿಸಿ, ಅವಳ ಕಾಲ ಮೇಲೆ ಅವಳು ನಿಲ್ಲುವ ಹಾಗೇ ಬೆಳೆಸಿ..! ಯಾರ ಹಂಗೂ ಇಲ್ಲದೇ ಬೆಳೆಯುವ ಆತ್ಮವಿಶ್ವಾಸ ಕಲಿಸಿ. ನಾಳೇ ಯಾವುದೇ ವಿಚಾರದಲ್ಲಿ ತೊಂದರೆಯಾದರೂ ಸರಿ ಧೈರ್ಯವಾಗಿ ಜೀವನ ಮಾಡುವುದನ್ನು ಕಲಿ ಯಲಿ.. ಹಾಗೇ ನಮ್ಮ ಸಂಸ್ಕಾರ ಸಂಸ್ಕೃತಿಯ ಬಗ್ಗೆಯೂ ತಿಳಿಸಿ. ಮದುವೆ ವಯಸ್ಸಿಗೆ ಬಂದಲು, ಅಕ್ಕ ಪಕ್ಕ ಜನ ನೂರು ಮಾತಾಡ್ತಾರೆ, ಅಂಥ ಯಾರೋ ಸಿಕ್ದಾ, ಅಂಥ ತಳ್ಳಬೇಡಿ..! ನೂರು ಜನ ನೂರು ಮಾತಾಡ್ಲೀ ಕ್ಷಮಿಸಿ, ಆತ್ಮವಿಶ್ವಾಸ ಕಳ





ಉದಯವಾಹಿನಿ ಚಿತ್ರ

ಕೊಂಡರೇ ನಾಳೇ ಯಾರೂ ಬರೋಲ್ಲ..! ನೀವೇ ನೋಡಬೇಕು, ಆ ಹೆಣ್ಣುಮಗುನೇ ಅನುಭವಿಸಬೇಕು! ಸ್ತ್ರೀ ಏನಾದರು ನೊಂದು ಬೆಂದು ಶಾಪ ಹಾಕಿದರೆ ಆ ಮನೆಯು ಸರ್ವನಾಶ ಆಗುವುದು.. ತವರು ಮನೆಯಾದರೂ ಸರಿ, ಗಂಡನ ಮನೆಯಾದರೂ ಸರಿ,..! ಎಲ್ಲಾ ಹೆಣ್ಣುಮಕ್ಕಳು ಅಥವಾ ಗಂಡುಮಕ್ಕಳು ಒಳ್ಳೆಯವರು ಅಥವಾ ಕೆಟ್ಟವರು ಅಂಥ ವಾದವಲ್ಲ..!

**ಹೆಣ್ಣನ್ನು ಗೌರವಿಸಿ:** ಅಂಗಡಿಯಲ್ಲಿ ಅಕ್ಕಿ ತಗೋಳೋವಾಗ, ಬೇಳೆ ತಗೋಳೋವಾಗ ಎಷ್ಟು ಯೋಚನೆ ಮಾಡುವಿರಿ ಅಲ್ವಾ..? ಅಕ್ಕಿ ಚೆನ್ನಾಗಿ ಅನ್ನ ಆಗುತ್ತಾ..? ಚೆನ್ನಾಗಿದ್ಯಾ..? ಬೇಳೆ ಚೆನ್ನಾಗಿ ಬೇಯುತ್ತಾ..? ಅಡಿಗೆ ಚೆನ್ನಾಗಿ ಆಗುತ್ತಾ..? ಇಂಥಹ ವಸ್ತುಗಳಿಗೆ ಇಷ್ಟು ಎಚ್ಚರಿಕೆ ತಗೊಳೋ ನಾವು, ಇನ್ನು ನಮ್ಮವಸ್ತು ನಮ್ಮಕಣ್ಣು ಎಷ್ಟು ಎಚ್ಚರಿಕೆ ಇರಬೇಕು ಅಲ್ಲವಾ..? ಹೆಣ್ಣುಮಗು ಜವಾಬ್ದಾರಿಯೆ ಹೊರತು ಭಾರದ ವಸ್ತುವಲ್ಲ...!

---

## ಛತ್ರಪತಿ ಶಿವಾಜಿ ಮಹಾರಾಜರ ದೇವಾಲಯಕ್ಕೆ ಹೆಚ್ಚಿನ ನೆರವು ನೀಡಿ



• ಶ್ರೀ. ಸುನೀಲ ಘನವಟ್

ಕೇಂದ್ರ ಸರಕಾರದಿಂದ, ಭಾರತೀಯ ಪುರಾತತ್ವ ಇಲಾಖೆಯಿಂದ ಔರಂಗಜೇಬನ ಗೋರಿಯ ನಿರ್ವಹಣೆಗಾಗಿ ಪ್ರತಿವರ್ಷ ಲಕ್ಷಾಂತರ ರೂಪಾಯಿಗಳ ನೆರವು ನೀಡಲಾಗುತ್ತಿದೆ. ಲಭ್ಯವಿರುವ ಮಾಹಿತಿಯ ಪ್ರಕಾರ, 2021–22 ರಲ್ಲಿ ರೂ. 2,55,160 ಮತ್ತು 2022–23ರವರೆಗೆ ರೂ 2,00,626 ಖರ್ಚು ಮಾಡಲಾಗಿದೆ. ಈ ರೀತಿ, ಇದುವರೆಗೆ ರೂ. 6.50 ಲಕ್ಷ ಹಣ ವ್ಯಯಿಸಲಾಗಿದೆ. ಆದರೆ ಮಹಾರಾಷ್ಟ್ರದ ಗೌರವಯುತ ಸಂಸ್ಕೃತಿಯ ಸಂಕೇತವಾದ ಸಿಂಧುದುರ್ಗ ಕೋಟೆಯಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜರ ಏಕೈಕ ದೇವಸ್ಥಾನಕ್ಕೆ ಮಹಾರಾಷ್ಟ್ರ ಸರಕಾರವು ಕೇವಲ 250 ರೂಪಾಯಿಗಳ ಮಾಸಿಕ ಸಹಾಯವನ್ನು ನೀಡುತ್ತಿದೆ. ಹಿಂದೂ ಧರ್ಮ, ಮಹಾರಾಷ್ಟ್ರ ಸಂಸ್ಕೃತಿ ಮತ್ತು ಸ್ವರಾಜ್ಯದ ರಕ್ಷಣೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟವರ ದೇವಾಲಯಕ್ಕೆ ಇಷ್ಟು ಕಡಿಮೆ ಅನುದಾನ ನೀಡುತ್ತಿರುವುದು ಅತ್ಯಂತ ದುರದೃಷ್ಟಕರ, ಖಂಡನೀಯವಾಗಿದೆ. ಔರಂಗಜೇಬನ ಸಮಾಧಿಯ ನಿರ್ವಹಣೆಗೆ ನೀಡಲಾಗುವ ಸಹಾಯವನ್ನು ತಕ್ಷಣವೇ ನಿಲ್ಲಿಸಬೇಕು, ಛತ್ರಪತಿ ಶಿವಾಜಿ ಮಹಾರಾಜರ ದೇವಸ್ಥಾನಕ್ಕೆ ಸಾಕಷ್ಟು ಆರ್ಥಿಕ ಸಹಾಯವನ್ನು ಘೋಷಿಸಬೇಕು ಎಂದು ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ಸಂಘಟಕ ಶ್ರೀ. ಸುನೀಲ್ ಘನವಟ್ ಒತ್ತಾಯಿಸಿದ್ದಾರೆ. ಸರಕಾರವು ಈ ವಿಷಯದ ಬಗ್ಗೆ ತಕ್ಷಣ ಗಮನ ಹರಿಸಬೇಕು, ಇಲ್ಲದಿದ್ದರೆ ಹಿಂದೂ ಸಮಾಜವು ಈ ಅನ್ಯಾಯದ ವಿರುದ್ಧ ತೀವ್ರ ಆಂದೋಲನವನ್ನು ಮಾಡುತ್ತದೆ.



---

# ಅಗ್ನಿಹೋತ್ರದ ಮಹತ್ವ ಅಪಾರ

ಶ್ರೀ. ವಿನೋದ್ ಕಾಮತ್

**ಅಗ್ನಿಹೋತ್ರದ ಮಹತ್ವ:** ಪಂಚಮಹಾಯಜ್ಞಗಳಲ್ಲಿ ಸುಲಭವಾಗಿ, ಎಲ್ಲಾರೂ ಮಾಡಬಹುದಾದ ಯಜ್ಞವೆಂದರೆ ಅಗ್ನಿಹೋತ್ರ ! ವೇದ ಮತ್ತು ವೈದಿಕ ಸಂಸ್ಕೃತಿಯಷ್ಟೇ ಅಗ್ನಿಹೋತ್ರದ ಇತಿಹಾಸವೂ ಪ್ರಾಚೀನವಾಗಿದೆ. ಅನಾ ದಿಕಾಲದಿಂದಲೂ ಅಗ್ನಿಹೋತ್ರವು ಮನುಷ್ಯನ ದೈನಂದಿನ ದಿನಚರಿಯಲ್ಲಿ ಸಂಧ್ಯೆಯ ರೂಪದಲ್ಲಿ ಹಾಸು ಹೊಕ್ಕಾಗಿದೆ. ಶಾಸ್ತ್ರಗಳಿಗೆ ವಿರುದ್ಧವಾದ ಮನುಷ್ಯನ ಕರ್ಮಗಳಿಂದ ಪ್ರಕೃತಿಯಲ್ಲಿ ಆಗುವ ಮಾಲಿನ್ಯವನ್ನು ಶಮನಗೊಳಿಸುವ ಉಪಕರಣವೆಂದರೆ ಅಗ್ನಿಹೋತ್ರ. ದೇವಯಜ್ಞ ಅಥವಾ ಅಗ್ನಿಹೋತ್ರವನ್ನು ಮಾಡುವುದರಿಂದ ವಾಯು, ಮಳೆ ಮತ್ತು ಜಲ ಇವುಗಳ ಶುದ್ಧಿಯಾಗುತ್ತದೆ, ಒಳ್ಳೆಯ ಮಳೆಯಾಗಿ ಸಂಪೂರ್ಣ ಜಗತ್ತಿಗೆ ಸುಖ ಪ್ರಾಪ್ತಿಯಾಗುತ್ತದೆ.

**ಅಗ್ನಿಹೋತ್ರ, ಹೋಮ ಸಾಮಗ್ರಿಗಳು**

**ಹವನಪಾತ್ರ :** ಅಗ್ನಿಹೋತ್ರಕ್ಕಾಗಿ ವಿಶಿಷ್ಟ ಆಕಾರದ ತಾಮ್ರದ ಪಿರಮಿಡ್ ಪಾತ್ರೆ

**ಗೋವಂಶದ ಬೆರಣಿ :** ಅಗ್ನಿಹೋತ್ರಕ್ಕಾಗಿ ಅಗ್ನಿಯನ್ನು ತಯಾರಿಸಲು ದೇಶಿ ಗೋವುಗಳ ಸೆಗಣಿಯ ಬೆರಣಿ

**ಅಕ್ಕಿ (ಅಕ್ಷತೆ):** ಪಾಲಿಶ್ ಮಾಡದ ಅಖಂಡ ಅಕ್ಕಿಯನ್ನೇ ಉಪಯೋಗಿಸಬೇಕು


**ಆಕಳ ತುಪ್ಪ :** ದೇಶಿ ಆಕಳಿನ ತುಪ್ಪವನ್ನು ಬಳಸಿ

**ಶುದ್ಧ ಕರ್ಪೂರ:** ಇದನ್ನು ಅಗ್ನಿ ಪ್ರಜ್ವಲಿಸಲು ಅಥವಾ ಆಹುತಿ ಎಂದು ಅರ್ಪಿಸಲು

**ಇತರ ಸಾಮಗ್ರಿಗಳು:** ಬೆಂಕಿ ಪೊಟ್ಟಣ, ತಾಮ್ರದ ತಟ್ಟೆ, ಚಮಚ, ಕೈಬೀಸಣಿಗೆ, ವಿಭೂತಿ ಸಂಗ್ರಹಿಸಿಡಲು ಗಾಜಿನ ಅಥವಾ ಮಣ್ಣಿನ ಪಾತ್ರೆ ಸೂರ್ಯೋದಯ ಮತ್ತು ಸೂರ್ಯಾಸ್ತದ ಸಮಯದಲ್ಲಿಯೇ ಅಗ್ನಿಹೋತ್ರವನ್ನು ಮಾಡಬೇಕು ಸೃಷ್ಟಿಯಲ್ಲಿರುವ ಪ್ರತಿಯೊಂದು ವಿಷಯವು ಸ್ಥಳ, ಕಾಲ, ಸಮಯಕ್ಕೆ ಬದ್ಧವಾಗಿರುತ್ತದೆ. ಕಾಲಕ್ಕನುಸಾರ ಪ್ರತಿಯೊಂದು ವಿಷಯದ ಸ್ಥಳ, ಅದಕ್ಕನುಸಾರ ಆ ಕೃತಿ ಘಟಿಸಲು ಬೇಕಾಗುವ ಸಮಯವು ಈಶ್ವರನ ಯೋಜನೆಯೇ ಆಗಿರುತ್ತವೆ. ಆದ್ದರಿಂದ ಯಾವುದಾದರೊಂದು ಕೃತಿಯನ್ನು ಕಾಲಕ್ಕನುಸಾರ ಮಾಡಿದರೆ ವ್ಯಕ್ತಿಗೆ ಅಪೇಕ್ಷಿತ ಲಾಭ ಸಿಗುತ್ತದೆ. ಆದುದರಿಂದ ಸೂರ್ಯೋದಯದ ಸಮಯದಲ್ಲಿ, ಸೂರ್ಯಾಸ್ತದ ಸಮಯದಲ್ಲಿ ಅಗ್ನಿಹೋತ್ರವನ್ನು ಮಾಡುವುದಕ್ಕೆ ಮಹತ್ವವಿದೆ.

**ಅಗ್ನಿಹೋತ್ರ ಮಾಡುವ ವಿಧಾನ:** ಅಗ್ನಿಹೋತ್ರ ಮಾಡುವಾಗ ಪೂರ್ವದಿಕ್ಕಿಗೆ ಮುಖ ಮಾಡಿ ಕುಳಿತುಕೊಳ್ಳಬೇಕು. ಹವನ ಪಾತ್ರೆಯಲ್ಲಿ ಎಲ್ಲಾಕ್ಕಿಂತ ಕೆಳಗೆ ಸಣ್ಣ ಆಕಾರದ ಒಂದು ಬೆರಣಿಯ ಚಪ್ಪಟೆ ತುಂಡನ್ನು ಇಡಬೇಕು.

ಅದರ ಮೇಲೆ ತುಪ್ಪವನ್ನು ಹಚ್ಚಿದ ಬೆರಣಿಗಳ ತುಂಡುಗಳನ್ನು ಇಡಬೇಕು. ಎರಡು ಬೆರಣಿಗಳ ನಡುವೆ ಗಾಳಿ ಓಡಾಡುವ ಹಾಗೆ ಟೊಳ್ಳಿರಬೇಕು. ನಂತರ ಬೆರಣಿಯ ಒಂದು ತುಂಡಿಗೆ ಆಕಳ ತುಪ್ಪವನ್ನು ಹಚ್ಚಿ ಪ್ರಜ್ವಲಿಸಬೇಕು, ಆ ತುಂಡನ್ನು ಹವನಪಾತ್ರೆಯಲ್ಲಿಡಬೇಕು. ಸ್ವಲ್ಪ ಸಮಯದಲ್ಲಿ ಬೆರಣಿಗಳ ಎಲ್ಲಾ ತುಂಡುಗಳು ಪ್ರಜ್ವಲಿಸುವವು. ಅಗ್ನಿಯನ್ನು ಪ್ರಜ್ವಲಿಸಲು ಗಾಳಿ ಹಾಕಲು ಕೈಬೀಸಣಿಗೆಯನ್ನು ಉಪಯೋಗಿಸಬೇಕು; ಬಾಯಿಯಿಂದ ಊದಿ ಅಗ್ನಿಯನ್ನು ಪ್ರಜ್ವಲಿಸಬಾರದು,



## ಅಗ್ನಿಹೋತ್ರದ ವಿಭೂತಿಯ ಅನೇಕ ಉಪಯೋಗಗಳು

- ವಿಭೂತಿಯನ್ನು ಮನೆಯಲ್ಲಿ ಊದುವುದರಿಂದ ವಾಸ್ತು ಶುದ್ಧಿಯಾಗುತ್ತದೆ
- ವಿಭೂತಿಯನ್ನು ಹಚ್ಚಿಕೊಳ್ಳುವುದರಿಂದ ತ್ವಚೆಯ ವಿಕಾರಗಳಲ್ಲಿ ಸುಧಾರಣೆಯಾಗಲು ಸಹಾಯವಾಗುತ್ತದೆ
- ಪ್ರಾಣಶಕ್ತಿ ಕಡಿಮೆಯಾಗಿದೆ ಎನಿಸಿದಾಗ ಚಿಟಿಕೆ ವಿಭುತಿಯನ್ನು ಸೇವಿಸುವುದರಿಂದ ಪ್ರಾಣಶಕ್ತಿಯಲ್ಲಿ ಹೆಚ್ಚಳ
- ಚಿಟಿಕೆ ವಿಭೂತಿಯನ್ನು ಕುಡಿಯುವ ನೀರಿನಲ್ಲಿ ಹಾಕಿದರೆ ತೀರ್ಥ ಪ್ರಾಶನದ ಲಾಭವಾಗುತ್ತದೆ
- ಹೋಟೆಲ ಅಥವಾ ಹೊರಗಿನ ಊಟ–ತಿಂಡಿಯನ್ನು ಸೇವಿಸುವ ಮೊದಲು ಅದರ ಮೇಲೆ ಚಿಟಿಕೆ ವಿಭೂತಿಯನ್ನು ಸಿಂಪಡಿಸಿದರೆ ಅದರಲ್ಲಿರಬಹುದಾದ ನಕಾರಾತ್ಮಕ ಶಕ್ತಿ ನಾಶವಾಗುತ್ತದೆ
- ಕೈದೋಟದಲ್ಲಿರುವ ಗಿಡ– ಮರಗಳಿಗೆ ಈ ವಿಭೂತಿಯನ್ನು ಗೊಬ್ಬರವೆಂದೂ ಉಪಯೋಗಿಸಬಹುದು.

ಏಕೆಂದರೆ ಹೀಗೆ ಮಾಡುವುದರಿಂದ ಬಾಯಿಯಲ್ಲಿನ ರೋಗ ಜಂತುಗಳು ಅಗ್ನಿಯಲ್ಲಿ ಹೋಗುತ್ತವೆ. ಅಗ್ನಿ ಯನ್ನು ಪ್ರಜ್ವಲಿಸಲು ಸೀಮೆಎಣ್ಣೆಯಂತಹ ಜ್ವಲನಶೀಲ ಪದಾರ್ಥಗಳನ್ನು ಉಪಯೋಗಿಸಬಾರದು. ಅಗ್ನಿಯನ್ನು ಧೂಮರಹಿತವಾಗಿ ಪ್ರಜ್ವಲಿಸಬೇಕು, ಅಂದರೆ ಅದರಿಂದ ಹೊಗೆ ಬರಬಾರದು.

**ಮಂತ್ರವನ್ನು ಯಾರು ಹೇಳಬೇಕು ?** ಮನೆಯಲ್ಲಿ ಒಬ್ಬರು ಅಗ್ನಿಹೋತ್ರವನ್ನು ಮಾಡುವಾಗ, ಮನೆಯಲ್ಲಿರುವ ಇತರ ಸದಸ್ಯರು ಆ ಸಮಯದಲ್ಲಿ ಅಲ್ಲಿ ಉಪಸ್ಥಿತರಿದ್ದು, ಆಹುತಿ ನೀಡುವ ವ್ಯಕ್ತಿಯೊಂದಿಗೆ ಅಗ್ನಿಹೋತ್ರದ ಮಂತ್ರವನ್ನು ಹೇಳಬಹುದು.

**ಅಗ್ನಿಹೋತ್ರ ಮಂತ್ರ:** ಸೂರ್ಯೋದಯದ ಸಮಯದಲ್ಲಿ ಪಠಿಸಬೇಕಾದ ಮಂತ್ರ ಸೂರ್ಯಾಯ ಸ್ವಾಹಾ, ಸೂರ್ಯಾಯ ಇದಂ ನ ಮಮ । ಪ್ರಜಾಪತಯೇ ಸ್ವಾಹಾ, ಪ್ರಜಾಪತಯ ಇದಂ ನ ಮಮ ॥ ಸೂರ್ಯಾಸ್ತದ ಸಮಯದಲ್ಲಿ ಪಠಿಸಬೇಕಾದ ಮಂತ್ರ: ಅಗ್ನಯೇ ಸ್ವಾಹಾ, ಅಗ್ನಯ ಇದಂ ನ ಮಮ । ಪ್ರಜಾಪತಯೇ ಸ್ವಾಹಾ, ಪ್ರಜಾಪತಯ ಇದಂ ನ ಮಮ

**ಅಗ್ನಿಹೋತ್ರವಾದ ನಂತರ ಇದನ್ನು ಮಾಡಿ:** ಧ್ಯಾನ ಧಾರಣೆ ಅಗ್ನಿಹೋತ್ರವಾದ ನಂತರ ವಾತಾವರಣದ ಶುದ್ಧಿಯಾಗುವುದರಿಂದ ಇತರ ಸಮಯಕ್ಕೆ ಹೋಲಿಸಿದರೆ ಮನಸ್ಸು ಏಕಾಗ್ರವಾಗಲು ಹೆಚ್ಚಿನ ಸಮಯ ತಗುಲುವುದಿಲ್ಲ. ಆದುದರಿಂದ ಪ್ರತಿಯೊಂದು ಅಗ್ನಿಹೋತ್ರದ ನಂತರ ಸಾಧ್ಯವಿದ್ದಷ್ಟು ಹೆಚ್ಚು ಸಮಯವನ್ನು ಧ್ಯಾನಕ್ಕಾಗಿ ಇಡಬೇಕು. ಕನಿಷ್ಠ ಅಗ್ನಿಯು ಶಾಂತವಾಗುವವರೆಗಾದರೂ ಧ್ಯಾನವನ್ನು ಮಾಡಬೇಕು. ಅದರಲ್ಲೂ ಮನೆಮಂದಿಯೆಲ್ಲ ಸೇರಿ ಕುಳಿತು ಇಷ್ಟ ದೇವತೆಯ ನಾಮ ಜಪಿಸಿದರೆ ಎಲ್ಲರಿಗೂ ಅದರ ಲಾಭವಾಗುತ್ತದೆ.

**ಭಸ್ಮ ತೆಗೆದಿಡಬೇಕು:** ಮುಂದಿನ ಅಗ್ನಿಹೋತ್ರವನ್ನು ಮಾಡುವುದಕ್ಕಿಂತ ಸ್ವಲ್ಪ ಮೊದಲು ಹವನಪಾತ್ರೆಯಲ್ಲಿನ ವಿಭೂತಿ (ಭಸ್ಮ)ಯನ್ನು ತೆಗೆದು ಗಾಜಿನ ಅಥವಾ ಮಣ್ಣಿನ ಪಾತ್ರೆಯಲ್ಲಿ ಸಂಗ್ರಹಿಸಿಡಬೇಕು.

# ನಾಯಕನಹಟ್ಟಿ ಜಾತ್ರೆ: ವಸ್ತು ಪ್ರದರ್ಶನ ವ್ಯವಸ್ಥಿತವಾಗಿರಲಿ


• ಉದಯವಾಹಿನಿ, ಚಿತ್ರದುರ್ಗ

ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ ಕ್ಷೇತ್ರದ ಶ್ರೀ ಗುರುತಿಪ್ಪೇರುದ್ರಸ್ವಾಮಿ ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಇಲಾಖೆಗಳ ಕಾರ್ಯಕ್ರಮಗಳು, ಯೋಜನೆಗಳು, ಸೌಲಭ್ಯಗಳು ಹಾಗೂ ಆಯಾ ಇಲಾಖೆಗೆ ಸಂಬಂಧಿಸಿದ ಇನ್ನಿತರೆ ವಿಷಯಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ವಿವಿಧ ಇಲಾಖೆಗಳ ವಸ್ತುಪ್ರದರ್ಶವನ್ನು ವ್ಯವಸ್ಥಿತವಾಗಿ ಆಯೋಜಿಸಬೇಕು ಎಂದು ಉಪವಿಭಾಗಾಧಿಕಾರಿ ಮೆಹಬೂಬ್ ಜಿಲಾನ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಉಪವಿಭಾಗಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ನಾಯಕನಹಟ್ಟಿ ಶ್ರೀ ಗುರುತಿಪ್ಪೇರುದ್ರಸ್ವಾಮಿ ಜಾತ್ರೆಯಲ್ಲಿ ವಸ್ತುಪ್ರದರ್ಶನ ಏರ್ಪಡಿಸುವ ಸಂಬಂಧ ಹಮ್ಮಿಕೊಂಡಿದ್ದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಾಯಕನಹಟ್ಟಿ ಗ್ರಾಮದ ಶ್ರೀ ಗುರುತಿಪ್ಪೇರುದ್ರಸ್ವಾಮಿ ಕ್ಷೇತ್ರದಲ್ಲಿ ಇದೇ ಮಾರ್ಚ್ 09 ರಿಂದ 24 ರವರೆಗೆ ಜಾತ್ರೆ ನಡೆಯಲಿದ್ದು, ಮಾರ್ಚ್ 16ರಂದು ದೊಡ್ಡ ರಥೋತ್ಸವ ನಡೆಯಲಿದೆ. ಜಾತ್ರೆಗೆ 3 ರಿಂದ 4 ಲಕ್ಷಕ್ಕೂ ಹೆಚ್ಚು ಭಕ್ತಾಧಿಗಳು ಆಗಮಿಸುವ ನಿರೀಕ್ಷೆ ಇದ್ದು, ಜಾತ್ರಾ ವೇಳೆಯಲ್ಲಿ ಜಿಲ್ಲಾ ಪಂಚಾಯಿತಿ ಸಹಕಾರದೊಂದಿಗೆ ಕನಿಷ್ಟ 10 ರಿಂದ 12 ಮಳಿಗೆಗಳಲ್ಲಿ ಕೃಷಿ, ಅರಣ್ಯ, ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ ಇಲಾಖೆ, ಆರೋಗ್ಯ ಇಲಾಖೆ ಸೇರಿದಂತೆ ಮುಂತಾದ ವಿವಿಧ ಇಲಾಖೆಗಳು ಪ್ರತಿ ವರ್ಷದಂತೆ ಈ ಬಾರಿಯೂ ಸಹ ವಸ್ತು ಪ್ರದರ್ಶವನ್ನು ವ್ಯವಸ್ಥಿತವಾಗಿ ಆಯೋಜಿಸಬೇಕು ಎಂದು ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಸ್ವ-ಸಹಾಯಕ ಸಂಘಗಳು ಹೆಚ್ಚಾಗಿರುವುದರಿಂದ ಸ್ವ-ಸಹಾಯ ಸಂಘಗಳ ಮಹಿಳಾ ಸದಸ್ಯರಿಗೆ ಆಹಾರ ಮಳಿಗೆ


ಉದಯವಾಹಿನಿ ಚಿತ್ರ

ಸ್ಥಾಪನೆಗೆ ಅವಕಾಶ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಕಾರ್ಯಕ್ರಮಗಳು, ಸೌಲಭ್ಯಗಳ ಮಾಹಿತಿ ಸೇರಿದಂತೆ ಪೋಕ್ಸೋ ಕಾಯ್ದೆ, ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು. ಪಶು ಸಂಗೋಪನಾ ಇಲಾಖೆಯುವರು ಹಕ್ಕಿ ಜ್ವರದ ಕುರಿತು ಹೆಚ್ಚಿನ ಜಾಗೃತಿ ಮೂಡಿಸಬೇಕು. ಜತೆಗೆ ಪಶು ಸಂಗೋಪನೆ ಇಲಾಖೆಯ ಕಾರ್ಯಕ್ರಮಗಳು, ಯೋಜನೆಗಳ ಬಗ್ಗೆ ಮಾಹಿತಿ ನೀಡಬೇಕು. ವಿಶೇಷವಾಗಿ ಕುರಿ ಸಾಕಾಣಿಕೆ ಕುರಿತು ಹಾಗೂ ಕುರಿಗಳ ತಳಿಗಳು ಬಗ್ಗೆ ಮಾಹಿತಿ ನೀಡಬೇಕು ಎಂದು ಹೇಳಿದರು. ಆರೋಗ್ಯ ಇಲಾಖೆ ವತಿಯಿಂದ ಎಬಿಆರ್‌ಕೆ ನೋಂದಣಿ ಕುರಿತು ವಸ್ತು ಪ್ರದರ್ಶನದಲ್ಲಿ ಮಾಹಿತಿ ನೀಡಬೇಕು. ತೋಟಗಾರಿಕೆ ಇಲಾಖೆ ವತಿಯಿಂದ ಫಲ-ಪುಷ್ಪ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿಕೊಳ್ಳಬೇಕು. ಎಂದು ತಿಳಿಸಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿಗಳ ಕಚೇರಿಯ ತಹಶೀಲ್ದಾರ್ ನರಸಿಂಹಮೂರ್ತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಭಾರತಿ ಆರ್ ಬಣಕಾರ್, ಪಶುಸಂಗೋಪನಾ ಇಲಾಖೆ ಉಪನಿರ್ದೇಶಕ ಡಾ.ಕುಮಾರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

## ನೂರಾರು ಹೊಸ ಯೋಜನೆಗಳು ಬಜೆಟ್‌ನಲ್ಲಿ ಘೋಷಿಸಿದ್ದು ಸ್ವಾಗತಾರ್ಹ

• ಉದಯವಾಹಿನಿ, ಚಿಂಚೋಳಿ

ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ 2025-26ನೇ ಸಾಲಿನ ಬಜೆಟ್ ಅನ್ನು ಕರ್ನಾಟಕ ರಾಜ್ಯ ಇನಷ್ಟು ಅಭಿವೃದ್ಧಿ ಪಥದತ್ತ ಕೊಂಡ್ಯೊಯಲು ಪ್ರತಿಕ್ಷೇತ್ರದ ಅಭಿವೃದ್ಧಿಯ ಚಿಂತನೆಯೊಂದಿಗೆ ಕೊಟ್ಟ ಮಾತಿನಂತೆ ಪಂಚ ಗ್ಯಾರಂಟಿಗಳಿಗೆ ಹಣ ಮಿಸಲಿರಿಸಿ,ನೂರಾರು ಹೊಸ ಯೋಜನೆಗಳು ಘೋಷಿಸಿದ್ದು ಸ್ವಾಗತಾರ್ಹವಾಗಿದೆ ಎಂದು ಕಾಂಗ್ರೇಸ್ ವಕ್ತಾರ ಶರಣುಪಾಟೀಲ



ಮೋತಕಪಳ್ಳಿ ಹರ್ಷ ವ್ಯಕ್ತಪಡಿಸಿದ್ದಾರೆ. ಪತ್ರಿಕಾ ಪ್ರಕಟಣೆ ಹೊರಡಿಸಿದ ಅವರು,ಕಲ್ಯಾಣ ಕರ್ನಾಟಕ ಭಾಗದ ಜನರ ನಿರೀಕ್ಷೆಯಂತೆ ಸ್ಪಂದಿಸಿ ನಮ್ಮ ಭಾಗಕ್ಕೆ ಹಲವು ಯೋಜನೆಗಳ ಧಾರೆ ಎರೆದಿದ್ದು ಸಂತೋಷದ ವಿಷಯವಾಗಿದೆ.

ರಾಜ್ಯವನ್ನು ಇನ್ನಷ್ಟು ಅಭಿವೃದ್ಧಿಯ ದಿಕ್ಕಿನಲ್ಲಿ ತೆಗೆದುಕೊಂಡು ಹೋಗುತ್ತಿದೆ. ಸರ್ವ ಕ್ಷೇತ್ರದ ಅಭಿವೃದ್ಧಿಯ ಚಿಂತನೆಯೊಂದಿಗೆ ಕೂಡಿರುವ ಈ ಆಯ ವ್ಯಯವು ಮತ್ತೊಮ್ಮೆ ರಾಜ್ಯದ ಜನ ಸಿದ್ದರಾಮಯ್ಯ ಅವರ ಬಗ್ಗೆ ಮತ್ತಷ್ಟು ಗೌರವ ಕೊಡುವಂತಾಗಿದೆ, ನಮ್ಮ ರಾಜ್ಯವು ಸಾಮಾಜಿಕ ಬಲವರ್ಧನೆಯ ಮೂಲಕ ಆರ್ಥಿಕ ಸುಸ್ಥಿರತೆಯೊಂದಿಗೆ ಸರ್ವಾಂಗೀಣ ಅಭಿವೃದ್ಧಿ ಸಾಧಿಸುವಲ್ಲಿ ಮುನ್ನುಗ್ಗುತ್ತಿದೆ. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ,ಔದ್ಯೋಗಿಕ ಹೀಗೆ ಪ್ರತಿ ಕ್ಷೇತ್ರವನ್ನು ಅಧ್ಯಯನ ಮಾಡಿ ಎಲ್ಲಾ ರಂಗಕ್ಕೂ ನ್ಯಾಯ ಕೊಡುವ ಪ್ರಾಮಾಣಿಕ ಪ್ರಯತ್ನ ಮಾಡಿ ಯಾವತ್ತೂ ಸರ್ವ ಜನಾಂಗದ ಚಿಂತಕ ಎನ್ನುವುದು ಮತ್ತೊಮ್ಮೆ ರಾಜ್ಯಕ್ಕೆ ತೋರಿಸಿ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳ ದೃಷ್ಟಿಕೋನ ದೇಶವಲ್ಲ ಜಾಗತಿಕವಾಗಿಯೂ ಮನ್ನಣೆ ದೊರೆವಂತಿದೆ ಎಂದು ಹೇಳಿದ್ದಾರೆ.

## ರೂ.2,611 ಕೋಟಿ ಮೊತ್ತದಲ್ಲಿ ಶಾಖಾ ಕಾಲುವೆ ಕಾಮಗಾರಿ ಪ್ರಸಕ್ತ ವರ್ಷ ಪೂರ್ಣ


### ಕೇಂದ್ರ ಸರ್ಕಾರದ ಆಯವ್ಯಯದಲ್ಲಿ ಘೋಷಿಸಿದ ರೂ.5,300 ಕೋಟಿ ಅನುದಾನ ಇನ್ನೂ ಬಿಡುಗಡೆ ಆಗಿಲ್ಲ

• ಉದಯವಾಹಿನಿ, ಚಿತ್ರದುರ್ಗ

ಭದ್ರಾ ಮೇಲ್ದಂಡೆ ಯೋಜನೆ ಪೂರ್ಣಗೊಳಿಸಲು ರಾಜ್ಯ ಸರ್ಕಾರದಿಂದಲೇ ಅಗತ್ಯ ಅನುದಾನ ಒದಗಿಸುವ ಮೂಲಕ ಪ್ರಸಕ್ತ ಸಾಲಿನಲ್ಲಿಯೇ ರೂ.2,611 ಕೋಟಿ ಅಂದಾಜು ಮೊತ್ತದ ಚಿತ್ರದುರ್ಗ ಶಾಖಾ ಕಾಲುವೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಶುಕ್ರವಾರದಂದು ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ 2025-26 ನೇ ಸಾಲಿನ ಬಜೆಟ್‌ನಲ್ಲಿ ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ ಭದ್ರಾ ಮೇಲ್ದಂಡೆ ಯೋಜನೆ ಹಾಗೂ ಇತರೆ ಯೋಜನೆಗಳ ಕುರಿತಂತೆ ಪ್ರಸ್ತಾಪಿಸಿದ್ದು, ಭದ್ರಾ ಮೇಲ್ದಂಡೆ ಯೋಜನೆಗೆ 2023-24ರ ಕೇಂದ್ರ ಸರ್ಕಾರದ ಆಯವ್ಯಯದಲ್ಲಿ ಘೋಷಿಸಿದ ರೂ.5,300 ಕೋಟಿ ಅನುದಾನ ಇನ್ನೂ ಬಿಡುಗಡೆಯಾಗಿರುವುದಿಲ್ಲ. ಆದರೂ, ರಾಜ್ಯ ಸರ್ಕಾರವು ಅಗತ್ಯ ಅನುದಾನವನ್ನು ಒದಗಿಸಿ ಈ ಯೋಜನೆಯನ್ನು ಪೂರ್ಣಗೊಳಿಸಲು ಕ್ರಮ ವಹಿಸುತ್ತಿದೆ. ತರೀಕೆರೆ ಏತ ನೀರಾವರಿ ಯೋಜನೆಯಡಿ 79 ಕೆರೆಗಳನ್ನು ತುಂಬಿಸುವ ಮೂಲಕ 49,790 ಎಕರೆ ಸೂಕ್ಷ್ಮ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ 2,611 ಕೋಟಿ ರೂ. ಅಂದಾಜು ಮೊತ್ತದ ಚಿತ್ರದುರ್ಗ ಶಾಖಾ ಕಾಲುವೆ ಕಾಮಗಾರಿಗಳನ್ನು ಪೂರ್ಣಗೊಳಿಸುವ ಮೂಲಕ ಹೊಸದುರ್ಗ, ಹೊಳಲ್ಕೆರೆ, ಜಗಳೂರು, ಮೊಳಕಾಲ್ಮೂರು, ಚಳ್ಳಕೆರೆ ಮತ್ತು ಪಾವಗಡ ತಾಲ್ಲೂಕುಗಳಲ್ಲಿನ 30 ಕೆರೆಗಳನ್ನು ತುಂಬಿಸಿ ಒಂದು ಲಕ್ಷದ ಎಪ್ಪತ್ತೇಳು ಸಾವಿರ ಎಕರೆ ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗುವುದು ಎಂದು ಮುಖ್ಯಮಂತ್ರಿಗಳು ಶುಕ್ರವಾರ ಮಂಡಿಸಿದ ರಾಜ್ಯ ಬಜೆಟ್‌ನಲ್ಲಿ ತಿಳಿಸಿದ್ದಾರೆ.

ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿಗೆ ಪ್ರತಿ ಕ್ವಿಂಟಾಲ್‌ಗೆ ರೂ.7,550 ಜೊತೆಗೆ ರಾಜ್ಯ ಸರ್ಕಾರದ ವತಿಯಿಂದ


ಉದಯವಾಹಿನಿ ಚಿತ್ರ

ಹೆಚ್ಚುವರಿ ಪ್ರೋತ್ಸಾಹಧನ ರೂ.450 ಗಳಂತೆ ಒಟ್ಟು ರೂ.138 ಕೋಟಿ ನೀಡಲು ತೀರ್ಮಾನಿಸಲಾಗಿದೆ. ಇದರಿಂದ, ತೊಗರಿ ಬೆಳೆಯುವ ಪ್ರಮುಖ ಜಿಲ್ಲೆಗಳಾದ ಕಲಬುರಗಿ, ಬೀದರ್, ಯಾದಗಿರಿ, ವಿಜಯಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ, ಕೋಲಾರ, ಚಿತ್ರದುರ್ಗ ಹಾಗೂ ಚಿಕ್ಕಬಳ್ಳಾಪುರ ಭಾಗದ ರೈತರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

ಗರ್ಭಿಣಿಯರಲ್ಲಿ ರಕ್ತಹೀನತೆ ತಡೆಗಟ್ಟಲು ಹಿಂದುಳಿದ ಜಿಲ್ಲೆಗಳಲ್ಲಿ ಪೌಷ್ಟಿಕಾಂಶ ಕಿಟ್‌ಗಳು, ಪ್ರೋತ್ಸಾಹ ಧನ ಹಾಗೂ ತಾಯಂದಿರಿಗೆ ವಾತ್ಸಲ್ಯ ಕಿಟ್ ಗಳನ್ನು ವಿತರಣೆ ಮಾಡಲಾಗುವುದು. ಹುದ್ದೆಗಳನ್ನು ಪುನರ್ ಹಂಚಿಕೆ ಮಾಡುವ ಮೂಲಕ ಪ್ರತಿ ತಾಲ್ಲೂಕು ಆಸ್ಪತ್ರೆಯಲ್ಲಿ ಎಂಸಿಹೆಚ್ ತಜ್ಞರನ್ನು ನಿಯೋಜಿಸಲಾಗುವುದು. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರಿನಲ್ಲಿ 200 ಹಾಸಿಗೆ ಹಾಗೂ ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ 400 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಗಳನ್ನು ಸ್ಥಾಪಿಸಲಾಗುವುದು. ಸುಧಾರಿತ ಆರೋಗ್ಯ ಸೇವೆಯನ್ನು ಒದಗಿಸಲು ಬಾದಾಮಿ ತಾಲ್ಲೂಕಿನ ಕುಳಗೇರಿ ಕ್ರಾಸ್ ಹಾಗೂ ಚಿತ್ರದುರ್ಗದಲ್ಲಿ ಸುಸಜ್ಜಿತ ಟ್ರಾಮಾ ಕೇರ್ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ಹೇಳಿದ್ದಾರೆ.

ಕೋಲಾರ, ರಾಮನಗರ, ಚಿತ್ರದುರ್ಗ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಹೊಸ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಪ್ರಸಕ್ತ ಸಾಲಿನಲ್ಲಿ ಒಂಭತ್ತು ಕೋಟಿ ರೂ. ಒದಗಿಸಲಾಗಿದೆ.

**ಸಂಚಾರ ನಿಯಮ ಉಲ್ಲಂಘನೆ ಪ್ರಕರಣ**

**ರಾಜ್ಯದಲ್ಲಿ ಪ್ರಗತಿಯಲ್ಲಿರುವ 42 ಸ್ವಯಂಚಾಲಿತ ಪರೀಕ್ಷಾ ಪಥಗಳ ನಿರ್ಮಾಣವನ್ನು ಸದರಿ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. 2025-26ನೇ ಸಾಲಿನಲ್ಲಿ ಹೊನ್ನಾವರ, ಚಾಮರಾಜನಗರ ಮತ್ತು ಚಿತ್ರದುರ್ಗದಲ್ಲಿ 20 ಕೋಟಿ ರೂ. ವೆಚ್ಚದಲ್ಲಿ ಸ್ವಯಂಚಾಲಿತ ಪರೀಕ್ಷಾ ಪಥಗಳನ್ನು ನಿರ್ಮಿಸಲು ಕ್ರಮವಹಿಸಲಾಗುವುದು. ಈ ಉದ್ದೇಶಕ್ಕಾಗಿ 12 ಕೋಟಿ ರೂ. ಅನುದಾನವನ್ನು ಒದಗಿಸಲಾಗುವುದು. ರಾಜ್ಯದಲ್ಲಿ ವಾಹನ ಸಂಚಾರವನ್ನು ಮೇಲ್ವಿಚಾರಣೆ ಮಾಡಲು ಮತ್ತು ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಪತ್ತೆ ಹಚ್ಚಿ ನಿಯಂತ್ರಿಸಲು ದಾವಣಗೆರೆ, ಧಾರವಾಡ, ಕಲಬುರಗಿ, ಬೆಳಗಾವಿ, ಚಿತ್ರದುರ್ಗ, ಹಾವೇರಿ, ಹೊಸಪೇಟೆ, ಬಳ್ಳಾರಿ, ವಿಜಯಪುರ, ದಕ್ಷಿಣ ಕನ್ನಡ ಜಿಲ್ಲೆಗಳ ಒಟ್ಟು 60 ಸ್ಥಳಗಳಲ್ಲಿ 50 ಕೋಟಿ ರೂ. ವೆಚ್ಚದಲ್ಲಿ ಎಐ ಆಧಾರಿತ ವಿದ್ಯುನ್ಮಾನ ಕ್ಯಾಮರಾಗಳನ್ನು ಅಳವಡಿಸಲಾಗುವುದು ಎಂದು ಬಜೆಟ್‌ನಲ್ಲಿ ತಿಳಿಸಿದ್ದಾರೆ.**

## ಮಿನಿ ನ್ಯೂಸ್

### ಭಾಗ್ಯಲಕ್ಷ್ಮೀ ಬಾಂಡ್ ನೋಂದಣಿ ಹಾಗೂ ಪರಿಪಕ್ವ ಮೊತ್ತ ಪಾವತಿ

• ಉದಯವಾಹಿನಿ, ಚಿತ್ರದುರ್ಗ

ಭಾಗ್ಯಲಕ್ಷ್ಮೀ (ಸುಕನ್ಯ ಸಮೃದ್ಧಿ ಯೋಜನೆ) ಯೋಜನೆಯು 2006-07ನೇ ಸಾಲಿನಿಂದ ಜಾರಿಯಾಗಿದ್ದು, ಪ್ರಸ್ತುತ ನೋಂದಣಿ ಜಾರಿಯಲ್ಲಿದ್ದು, ಈಗಾಗಲೇ ನೋಂದಣಿಯಾಗಿ ಸೌಲಭ್ಯ ಪಡೆದಿರುವ ಫಲಾನುಭವಿಗಳಿಗೆ 2024-25ನೇ ಸಾಲಿನಿಂದ ಪರಿಪಕ್ವ ಮೊತ್ತ ಒದಗಿಸಬೇಕಾಗಿರುತ್ತದೆ. ಪರಿಪಕ್ವ ಮೊತ್ತ ಒದಗಿಸಲು ಹಾಗೂ ಹೊಸದಾಗಿ ಭಾಗ್ಯಲಕ್ಷ್ಮೀ ಬಾಂಡ್ (ಸುಕನ್ಯ ಸಮೃದ್ಧಿ ಯೋಜನೆ) ಪಡೆಯುವ ಕ್ರಮಗಳ ಬಗ್ಗೆ ತಾಲ್ಲೂಕು ಮಟ್ಟದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯರನ್ನು ಸಂಪರ್ಕಿಸಬಹುದಾಗಿದೆ. ಭಾಗ್ಯಲಕ್ಷ್ಮೀ (ಸುಕನ್ಯ ಸಮೃದ್ಧಿ ಯೋಜನೆ) ಯೋಜನೆಯಡಿ ನೋಂದಣಿ ಯಾಗಿರುವ ಎಲ್ಲಾ ಫಲಾನುಭವಿಗಳಿಗೆ, ಸಾರ್ವಜನಿಕರ ಗಮನಕ್ಕೆ ತರಬಯಸುವುದೇನೆಂದರೆ ಈ ಯೋಜನೆಯು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, ನೋಂದಣಿ ಹಾಗೂ ಪರಿಪಕ್ವ ಮೊತ್ತ ಪಾವತಿಯು ಸಂಪೂರ್ಣವಾಗಿ ಉಚಿತವಾಗಿರುತ್ತದೆ. ಯಾವುದೇ ತಾಲ್ಲೂಕು ಕಛೇರಿಗಳಲ್ಲಿ ಮಧ್ಯವರ್ತಿಗಳಾಗಲೀ ಅಥವಾ ಸಿಬ್ಬಂದಿಗಳಾಗಲೀ ಹಣ ಕೇಳಿದಲ್ಲಿ ನೇರವಾಗಿ ಸಂಬಂಧಪಟ್ಟ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಹಾಗೂ ಜಿಲ್ಲಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಿತ್ರದುರ್ಗ ಇವರನ್ನು ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಭರಮಸಾಗರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು-9448566058, ಚಿತ್ರದುರ್ಗ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು-9448873683, ಚಳ್ಳಕೆರೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು-9945888425, ಹಿರಿಯೂರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು-7892661086, ಹೊಳಲ್ಕೆರೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು-9481182921, ಹೊಸದುರ್ಗ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು -8867404421, ಮೊಳಕಾಲ್ಮೂರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು -7353002417, ಚಿತ್ರದುರ್ಗ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು-9480500575 ಅವರನ್ನು ಸಂಪರ್ಕಿಸಬಹುದು ಎಂದು ಚಿತ್ರದುರ್ಗ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಭಾರತಿ ಆರ್ ಬಣಕಾರ್ ತಿಳಿಸಿದ್ದಾರೆ.

## ಹಾರಕೂಡ ಚನ್ನಬಸವ ಶಿವಯೋಗಿಗಳ ಜಾತ್ರಾ ಮಹೋತ್ಸವ

• ಉದಯವಾಹಿನಿ,ಚಿಂಚೋಳಿ

ಪರಮ ಪೂಜ್ಯ ಲಿಂಗೈಕ್ಯ ಸದ್ಗುರು ಶ್ರೀ ಹಾರಕೂಡ ಚನ್ನಬಸವ ಶಿವಯೋಗಿಗಳವರ 74ನೇ ಜಾತ್ರಾ ಮಹೋತ್ಸವ ಮಾ.09ರಂದು ಜರುಗಲಿದೆ ಅದರ ಪ್ರಯುಕ್ತ ಶುಕ್ರವಾರದಂದು ಹಾರಕೂಡ ಮಠದಲ್ಲಿ ಬೃಹತ್ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಯಿತು.

ಬೃಹತ್ ರಕ್ತದಾನ ಶಿಬಿರಕ್ಕೆ ಪರಮಪೂಜ್ಯ ಷ.ಬ್ರ.ಡಾ.ಚನ್ನವೀರ ಶಿವಾಚಾರ್ಯರು ಕಾರ್ಯಕ್ರಮ ಉದ್ಘಾಟಿಸಿ ಆಶೀರ್ವಚನ ನೀಡಿದ ಅವರು,ರಕ್ತದಾನ ಮಹಾದಾನವಾಗಿದೆ.

ಡಾ.ಮಮತಾ ಪಾಟೀಲ,ಟಿಹೆಚ್‌ಓ ಡಾ.ಮಹ್ಮದ್ ಗಫೂರ ಮಾತನಾಡಿದರು. ಈ ಸಂದರ್ಭದಲ್ಲಿ ತಾಲ್ಲೂಕಾ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಎಎಂಓ ಡಾ.ಸಂತೋಷ ಪಾಟೀಲ,ಡಾ.ತೇಜಸ್ ಪಾಟೀಲ, ಗೋಪಾಲರಾವ ಕಟ್ಟಿಮನಿ,ನಾಗರಾಜ ಕಲಬುರ್ಗಿ,ಸಂತೋಷ ಗಡಂತಿ,ಸುಭಾಶ್ಚಂದ್ರ ಸೀಳಿನ,ರಾಜಶೇಖರ ಮಜ್ಜಗಿ,ಶಂಕರಗೌಡ ಅಲ್ಲಾಪೂರ,ಮಲ್ಲಿಕಾರ್ಜುನ ಪಾಲಾಮೋರ,ವೀರುಪಾಕ್ಷಪ್ಪ ಯಂಪಳ್ಳಿ,ನಾಗರಾಜ ಮಲಕೂಡ,ಮಹಾಂತೇಶ ಮಜ್ಜಗಿ,ಸಂತೋಷ ಕಡಗದ,ಸಂತೋಷ ಸೀಳಿನ,ಅಮರ-ಸಂಕೇತ ಬಬಲಾದ,ರಾಜು ಪಟಪಳ್ಳಿ,ಸಂಗಮೇಶ ಮೂಲಿ ಮನಿ, ಶ್ರೀಧರ್ ಪಾಟೀಲ,ನಾಗರಾಜ ಮಲಕೂಡ,ದಶರಥ ಬೀರಾಪುರ,ಬಸವರಾಜ ಸಜ್ಜನ,ಸಂಗಪ್ಪ ಹಲಚೇರಿ,ಜಗದೇವಿ ಹಲಚೇರಿ,ಕಾಶಪ್ಪ ಗಿರಿಗಿರಿ, ಚನ್ನು,ಪ್ರದೀಪ ಅನೇಕರಿದ್ದರು.


ಉದಯವಾಹಿನಿ ಚಿತ್ರ

**ಇಂದಿನ ಯುವಕರು ಹಿರಿಯರು ರಕ್ತದಾನ ಮಾಡಿದರೆ ಹಲವಾರು ಜನರ ಜೀವ ಉಳಿಸಬಹುದು,ದೇಶದಲ್ಲಿ ಅನೇಕ ಅಪಘಾತದಲ್ಲಿ ಘಾಯಗೊಂಡಿದವರಿಗೆ, ಬಾಣಂತಿಯರಿಗೆ,ಅನೇಕರಿಗೆ ತಾವು 105ಜನ ಕೊಟ್ಟಿರುವ ರಕ್ತದಾನವನ್ನು ಅಂಥವರ ಜೀವ ಕಾಪಾಡಬಹುದು ಕೆಲ ಬಡವರಿಗೆ ರಕ್ತದ ಅವಶ್ಯಕತೆವಿರುತ್ತದೆ ಅವರಲ್ಲಿ ಹಣ ಕೊರತೆಯಿಂದ ಹಲವಾರು ಜನ ಪ್ರಾಣ ಬಿಡುತ್ತಿದ್ದಾರೆ ಪ್ರತಿಯೊಬ್ಬರು ನೀವು ಕೊಡುವ ರಕ್ತದಾನದಿಂದ ಹಲವಾರು ಜನರ ಜೀವ ಕಾಪಾಡಬಹುದು ಎಂದರು.**

## ಹೂವಿನ ವ್ಯಾಪಾರಿಯ ಮಗ ಸಿಎ ಫೌಂಡೇಶನ್ ಪರೀಕ್ಷೆಯಲ್ಲಿ ಉತ್ತೀರ್ಣ

• ಉದಯವಾಹಿನಿ, ಕಲಬುರಗಿ

ಜನವರಿಯಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ನಡೆಸಿದ ಸಿಎ ಫೌಂಡೇಶನ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಮೊಹಮ್ಮದ್ ಶೇಖ್ ಅಬ್ದುಲ್ ವಾಸೆ ಅವರ ಕನಸು ನನಸಾಗಿದೆ ಮತ್ತು ಕಲಬುರಗಿ ನಗರದಲ್ಲಿ ಹೂವಿನ ವ್ಯಾಪಾರಿಯಾದ ಅವರ ತಂದೆ ಮೊಹಮ್ಮದ್ ಖಾಸಿಂ ಸಾನ್ ಅವರಿಗೆ ಇದು ಹೆಮ್ಮೆಯ ಕ್ಷಣವಾಗಿದೆ.

ಬೆಂಗಳೂರು ಮೂಲದ ಅರಿವುಪೂರ ಸಹಯೋಗದೊಂದಿಗೆ ಶರಣಬಸವೇಶ್ವರ ಕಾಲೇಜ್ ಆಫ್ ಕಾಮರ್ಸ್‌ನಲ್ಲಿ ನಡೆಸಲಾದ ಸಿಎ ಫೌಂಡೇಶನ್ ತರಬೇತಿ ಕಾರ್ಯಕ್ರಮದಲ್ಲಿ ತರಬೇತಿ ಪಡೆದ ಮೊಹಮ್ಮದ್ ಶೇಖ್ ಅಬ್ದುಲ್ ವಾಸೆ ಮತ್ತು ಸಿಬ್ಘಾ ತಹ್ರೀನ್ ಜನವರಿ 2025 ರಲ್ಲಿ ನಡೆಸಲಾದ ಸಿಎ ಫೌಂಡೇಶನ್ ಪರೀಕ್ಷೆಯಲ್ಲಿ ಯಶಸ್ವಿಯಾಗಿ ಉತ್ತೀರ್ಣರಾಗಿದ್ದಾರೆ. ಮೊಹಮ್ಮದ್ ಶೇಖ್ ಅಬ್ದುಲ್ ವಾಸೆ ಸಿಎ ಫೌಂಡೇಶನ್ ಪರೀಕ್ಷೆಯಲ್ಲಿ 215 ಅಂಕಗಳನ್ನು ಗಳಿಸಿದರೆ, ಸಿಬ್ಘಾ ತಹ್ರೀನ್ 208 ಅಂಕಗಳನ್ನು ಗಳಿಸಿ ಪರೀಕ್ಷೆಯಲ್ಲಿ ಅರ್ಹತೆ ಪಡೆದರು. ಮೊಹಮ್ಮದ್ ಶೇಖ್ ಅಬ್ದುಲ್ ವಾಸೆ ಮತ್ತು ಸಿಬ್ಘಾ ತಹ್ರೀನ್ ಇಬ್ಬರೂ ಕಲಬುರಗಿಯ ಶರಣಬಸವೇಶ್ವರ ವಿದ್ಯಾವರ್ಧಕ ಸಂಘ ನಡೆಸುತ್ತಿರುವ ಶರಣಬಸವೇಶ್ವರ ಕಾಲೇಜ್ ಆಫ್ ಕಾಮರ್ಸ್‌ನಲ್ಲಿ ಬಿ.ಕಾಂ. ಕೋರ್ಸ್ ಕಲಿಯುತ್ತಿದ್ದರು.


ಉದಯವಾಹಿನಿ ಚಿತ್ರ

ಈ ಕಾಲೇಜು ಹಳೆಯ ವಿದ್ಯಾರ್ಥಿಗಳ ಸಂಘದೊಂದಿಗೆ ಅರಿವುಪೂರದ ಪರಿಣಿತರೊಂದಿಗೆ ಸಿಎ ಫೌಂಡೇಶನ್ ತರಬೇತಿ ತರಗತಿಗಳನ್ನು ನಡೆಸುತ್ತಿದೆ. ಶರಣಬಸವೇಶ್ವರ ವಿದ್ಯಾವರ್ಧಕ ಸಂಘವು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕವಾಗಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ್ರತಿಯೊಬ್ಬ ವಿದ್ಯಾರ್ಥಿಗೆ ತಲಾ 5000 ರೂ. ನಗದು ಬಹುಮಾನವನ್ನು ನೀಡುತ್ತದೆ. ಇದಲ್ಲದೆ, ಅಲುಮಿನಿ ಸಂಘದ ಅಧ್ಯಕ್ಷರಾದ ಶ್ರೀ ಶಿವಾನಂದ ಪಾಟೀಲ್ ಅವರು ಕಲಬುರಗಿಯಲ್ಲಿ ಮೊದಲ ಚಾರ್ಟರ್ಡ್ ಅಕೌಂಟೆಂಟ್ ಆಗಿದ್ದ ಅವರ ತಂದೆ ದಿವಂಗತ ಧನ್ವಂತ್ ಪಾಟೀಲ್ ಅವರ ಹೆಸರಿನಲ್ಲಿ ಸ್ಥಾಪಿಸಲಾದ ಪ್ರಶಸ್ತಿಯನ್ನು ನೀಡುತ್ತಾರೆ.

ಶರಣಬಸವೇಶ್ವರ ಕಾಲೇಜ್ ಆಫ್ ಕಾಮರ್ಸ್‌ನ ಸಿಎ ಫೌಂಡೇಶನ್ ಕೋಚಿಂಗ್ ಸೆಂಟರ್ ನಿರ್ದೇಶಕಿ ಪ್ರೊ. ಇಂದಿರಾ ಶೆಟಗಾರ್, ಪ್ರೊ. ಸುನಂದಾ ವಾಂಜರಖೇಡ್ ಅವರೊಂದಿಗೆ ಯಶಸ್ವಿ ವಿದ್ಯಾರ್ಥಿಗಳನ್ನು ಶರಣಬಸವೇಶ್ವರ ಸಂಸ್ಥಾನದ 8 ನೇ ಮಹಾದಾಸೋಹ ಪೀಠಾಧಿಪತಿ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿ, ಶರಣಬಸವೇಶ್ವರ ವಿದ್ಯಾ ವರ್ಧಕ ಸಂಘದ ಚೇರಪರ್ಸನ್ ಮಾತೋಶ್ರೀ ಡಾ. ದಾಕ್ಷಾಯಿಣಿ ಅವ್ವಾಜಿ ಅವರು ಶರಣಬಸವೇಶ್ವರ ದೇವಾಲಯ ಸಂಕೀರ್ಣದ ದಾಸೋಹ ಮಹಾಮನೆಯಲ್ಲಿ ಗಮನಾರ್ಹ ಸಾಧನೆಗಾಗಿ ಸನ್ಮಾನಿಸಿದರು.

ಸಂಘದ ಕಾರ್ಯದರ್ಶಿ ಶ್ರೀ ಬಸವರಾಜ ದೇಶಮುಖ ಅವರು ಉತ್ತೀರ್ಣರಾದ ಇಬ್ಬರೂ ವಿದ್ಯಾರ್ಥಿಗಳನ್ನು ಹಾಗೂ ತರಬೇತಿ ಕೇಂದ್ರದ ಬೋಧನಾ ಸಿಬ್ಬಂದಿಯನ್ನು ಅಭಿನಂದಿಸಿದ್ದಾರೆ.

## ಮಹಿಳೆಯಲ್ಲಿ ಸವಾಲು ಎದುರಿಸುವ ಶಕ್ತಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ವಿಜಯಪುರ

'ಸಾಧನೆಯು ನಿರಂತರ. ಅದನ್ನು ಅರಿತರೆ ಮಹಿಳೆ ತನ್ನ ಜೀವನದಲ್ಲಿ ಯಶಸ್ಸು ಗಳಿಸಬಲ್ಲಳು' ಎಂದು ಕಲಬುರಗಿಯ ಕರ್ನಾಟಕ ರಂಗಾಯಣ ನಿರ್ದೇಶಕಿ ಸುಜಾತ ಜಂಗಮಶೆಟ್ಟಿ ಹೇಳಿದರು.ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ವತಿಯಿಂದ ಅಂತರರಾಷ್ಟ್ರೀ ಮಹಿಳಾ ದಿನಾಚರಣೆಯ ಅಂಗವಾಗಿ ಗುರುವಾರ ಆಯೋಜಿಸಿದ್ದ 'ಮಹಿಳಾ ಸಾಂಸ್ಕೃತಿಕ ಹಬ್ಬ-2025' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಮಹಿಳೆಯರು ಎಷ್ಟೇ ಉನ್ನತ ಸ್ಥಾನಕ್ಕೇರಿದರೂ, ಅವರನ್ನು ಕೇವಲ ಅಡುಗೆ ಮನೆಗೆ ಮಾತ್ರ ಸೀಮಿತಗೊಳಿಸುವ ಪರಂಪರೆ ಚಿಂತನೆ ಇನ್ನೂ ಮುಂದುವರಿಯುತ್ತಿದೆ. ಮಹಿಳೆಯರು ಧೈರ್ಯದಿಂದ ಜಗತ್ತನ್ನೇ ತಲುಪಬಲ್ಲ ಶಕ್ತಿ ಹೊಂದಿದ್ದಾರೆ. ಮಹಿಳೆಯರು ಮುಂದುವರಿಯಲು ಕೇವಲ ಸೌಂದರ್ಯವಷ್ಟೇ ಅಲ್ಲ, ಅವರ ಗುಣ, ಸಾಧನೆ ಹಾಗೂ ನಡೆ-ನುಡಿಗಳು ಮುಖ್ಯವಾಗಿವೆ ಎಂದರು. ಮಹಿಳಾ ವಿವಿಯ ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಎಚ್.ಎಂ.ಚಂದ್ರಶೇಖರ, ಸಿಂಡಿಕೇಟ್ ಸದಸ್ಯೆ ಮಲ್ಲಮ್ಮಾ ಯಾಳವಾರ, ಮಹಿಳಾ ವಿವಿಯ ಹಂಗಾಮಿ ಕುಲಪತಿ ಶಾಂತಾದೇವಿ.ಟಿ ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನ ಕನ್ನಡ ಸಂಸ್ಕೃತಿ ಇಲಾಖೆಯಿಂದ ಡೊಳ್ಳುಕುಣಿತ, ಬಂಜಾರಾ ಸಮುದಾಯದ ಯುವತಿಯರಿಂದ ನೃತ್ಯ ಹಾಗೂ ದೈಹಿಕ ಶಿಕ್ಷಣ ಅಧ್ಯಯನ ವಿಭಾಗದ ವಿದ್ಯಾರ್ಥಿನಿಯರಿಂದ ಲೇಜಿಮ್ ಮೂಲಕ ಸಾಂಸ್ಕೃತಿಕ ಮೆರವಣಿಗೆ ಜರುಗಿತು.

**ಸಾಮಾಜಿಕ ಕಾರ್ಯಕರ್ತ ರೂಮಿ ಹರೀಶ ಮಾತನಾಡಿ, 'ಮಾನವ ಹಕ್ಕುಗಳೇ ಮಹಿಳಾ ಹಕ್ಕುಗಳಾಗಿದ್ದರೂ ಇಂದಿಗೂ ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ಹೋರಾಡುವ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಕೌಟುಂಬಿಕ ದೌರ್ಜನ್ಯ, ಮನಸ್ತಾಪ ಉಂಟುಮಾಡುವ ಕಿರುಕುಳ ಹಾಗೂ ಸಮಾಜದಲ್ಲಿ ಶೋಷಣೆ ಮಹಿಳೆಯ ಮುನ್ನಡೆಗೆ ಬಾಧಕವಾಗುತ್ತಿವೆ. ಆದರೂ, ಸವಾಲುಗಳನ್ನು ಧೈರ್ಯ ಮನೋಬಲ ಮತ್ತು ಆತ್ಮವಿಶ್ವಾಸದಿಂದ ಎದುರಿಸುವ ಶಕ್ತಿ ಮಹಿಳೆಯಲ್ಲಿದೆ' ಎಂದರು.**


## ಭೋಜಲಿಂಗೇಶ್ವರರ ಪವಾಡಗಳು ಅನೇಕ: ಗಜದಂಡ ಶಿವಾಚಾರ್ಯ

• ಉದಯವಾಹಿನಿ, ಯರಗೋಳ

ಧಾರ್ಮಿಕ ಚಟುವಟಿಕೆಗಳಿಂದ ಸಮಾಜದಲ್ಲಿ ಸಾಮರಸ್ಯ ಮೂಡಿ, ಐಕ್ಯತೆಗೆ ಶಕ್ತಿ ಬರುತ್ತದೆ ಎಂದು ಗುಡಗುಂಟಿ ಅಮರೇಶ್ವರ ಕ್ಷೇತ್ರದ ಗಜದಂಡ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಗ್ರಾಮದಲ್ಲಿ ಜರುಗಿದ ಭೋಜಲಿಂಗೇಶ್ವರರ 30ನೇ ವರ್ಷದ ಜಾತ್ರಾ ಮಹೋತ್ಸವ, ರಥೋತ್ಸವ ನಂತರ ನಡೆದ ಧರ್ಮ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.'ಸಮಾಜಕ್ಕೆ ತಮ್ಮ ಬದುಕು ಅರ್ಪಿಸಿದ ಭೋಜಲಿಂಗೇಶ್ವರರಿಗೆ ಸಹಸ್ರಾರು ಭಕ್ತವೃಂದವಿದೆ. ಅವರೇ ನಿಜವಾದ ಆಸ್ತಿಯಾಗಿದ್ದಾರೆ ಎಂದು ಹೇಳಿದರು. 'ಇಲ್ಲಿ ನಿರ್ಮಾಣ ಮಾಡುತ್ತಿರುವ ಭವ್ಯ ಮಂದಿರ ಎಲ್ಲರನ್ನೂ ಆಕರ್ಷಿಸುತ್ತಿದೆ. ಅದಕ್ಕೆಲ್ಲಾ ಕಾರಣ ಭಕ್ತರು. ಇಲ್ಲಿ ಕೈಗೊಳ್ಳುವ ನಿರಂತರ ಸಮಾಜಮುಖಿ ಚಟುವಟಿಕೆಗಳಿಗೆ ಮುಂದೆಯೂ ಅಗತ್ಯ ಸಹಾಯ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಯುವ ಮುಖಂಡ ಮಾಣಿಕರಡ್ಡಿ ಕುರಕುಂದಿ ಮಾತನಾಡಿ, ಇಲ್ಲಿರುವ ಮಠ ಮಾನ್ಯಗಳು ಹಲವಾರು ಕ್ಷೇತ್ರಗಳಲ್ಲಿ ಸರ್ಕಾರದಿಂದ ಮಾಡಲಾಗದಂತ ಮಹತ್ವದ ಕೆಲಸಗಳನ್ನು ಮಾಡಿ, ಜನಮನ್ನಣೆ ಪಡೆದಿವೆ. ಭೋಜಲಿಂಗೇಶ್ವರರ ಪವಾಡಗಳು ಅನೇಕ. ಈ ಮಣ್ಣಿನ ಶಕ್ತಿ ದೊಡ್ಡದಿದೆ ಎಂದು ಹೇಳಿದರು. ಗುಳೆದಗುಡ್ಡದ ಒಪ್ಪತ್ತೇಶ್ವರ ಮಠದ ಅಭಿನವ ಒಪ್ಪತ್ತೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿದರು. ನೇತೃತ್ವವನ್ನು ಶ್ರೀಮಠದ ಪೀಠಾಧಿಪತಿ ಹಿರಗಪ್ಪ ತಾತ ವಹಿಸಿದ್ದರು. ವೇದಿಕೆ ಮೇಲೆ ವೈದ್ಯ ಡಾ. ರವಿಕುಮಾರ ಯಾಕಾ, ಸಿದ್ದಣ್ಣಗೌಡ ಕಾಡಂನೋರ, ಸಿದ್ರಾಮಯ್ಯ ಸ್ವಾಮಿ, ಗುರುಶಾಂತಯ್ಯ ಹುನಗುಂದ, ಮಹಾಂತೇಶ ಕೌಲಗಿ ಇದ್ದರು. ಮಠದ ಭಕ್ತರಾದ ಬಸವರಾಜ ಹವಾಲ್ದಾರ, ಎಸ್.ಎಸ್ ಜುಗೇರಿ, ಶಿವನಗೌಡ ಪಾಟೀಲ್ ಅಶನಾಳ, ಹಣಮಂತ ಕಾವಲಿ, ಪ್ರಭು ಹೂಗಾರ, ವಿಶ್ವನಾಥರಡ್ಡಿ ಪಾಟೀಲ್ ಸುಗೂರ, ರಾಜು ಹತ್ತಿಕುಣಿ, ಗುತ್ತಿಗೆದಾರ ಮೋಹನ ರಾಠೋಡ, ಶರಣಗೌಡ ಬಿರಾದಾರ, ಮಲ್ಲಯ್ಯ ಕಸಬಿ, ಮಹಾಂತೇಶ ಗೌಡರ್ ಲಿಂಗಸೂಗೂರ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಭೀಮರಡ್ಡಿ ಕುರಹಾಳ ಸ್ವಾಗತಿಸಿದರು. ಶಂಕರಗೌಡ ಪಾಟೀಲ್ ನಿರೂಪಿಸಿದರು. ಈರಣ್ಣ ಬಲಕಲ್ ಎಲ್ಐಸಿ ವಂದಿಸಿದರು.


ಉದಯವಾಹಿನಿ ಚಿತ್ರ



## ಜಾನುವಾರುಗಳಿಗೆ ಮೇವು ಸಂಗ್ರಹ ಆರಂಭ

• ಉದಯವಾಹಿನಿ, ತಾವರಗೇರಾ

ಹೋಬಳಿ ವ್ಯಾಪ್ತಿಯಲ್ಲಿ ಹಿಂಗಾರು ಬೆಳೆಗಳ ಕಟಾವು ಮುಗಿಸಿರುವ ರೈತರು ಮುಂಬರುವ ಬೇಸಿಗೆ ದಿನಗಳಲ್ಲಿ ತಮ್ಮ ಜಾನುವಾರುಗಳಿಗೆ ಮೇವಿನ ಕೊರತೆ ಆಗದಂತೆ ಮುಂಜಾಗ್ರತವಾಗಿ ಜಮೀನುಗಳಲ್ಲಿ ವಿವಿಧ ಬೆಳೆಗಳ ಬಣವೆಗಳನ್ನು ನಿರ್ಮಿಸಲು ಆರಂಭಿಸಿದ್ದಾರೆ.ಇಡೀ ವರ್ಷ ಕೃಷಿ ಚಟುವಟಿಕೆಯಲ್ಲಿ ದುಡಿಯುವ ಎತ್ತುಗಳಿಗೆ ಬೇಸಿಗೆಯಲ್ಲಿ ಮೇವು, ಹೊಟ್ಟು ಸಂಗ್ರಹಿಸಲು ರೈತರು ಮುಂದಾಗಿದ್ದು, ಗ್ರಾಮೀಣ ಪ್ರದೇಶದ ಊರ ಮುಂದಿನ ಜಮೀನುಗಳಲ್ಲಿ ದಾರಿಯುದ್ದಕ್ಕೂ ಒಣ ಮೇವಿನ ಬಣವೆಗಳು ಕಾಣುತ್ತಿವೆ.

ಜಮೀನಿನಲ್ಲಿ ಮುಂಗಾರು- ಹಿಂಗಾರು ಬೆಳೆಯ ಸಜ್ಜೆ ಮತ್ತು ಜೋಳದ ಸೊಪ್ಪಿ, ದ್ವಿದಳ ಧಾನ್ಯಗಳ ಸೊಪ್ಪನ್ನು ಒಣಗಿಸಿ ಸಂಗ್ರಹಿಸುತ್ತಿದ್ದಾರೆ. ರೈತರು ತಮ್ಮ ಜಾನುವಾರುಗಳಿಗೆ ಆಹಾರ ಕೊರತೆ ನೀಗಿಸಲು ಇಂತಹ ಬಣವೇ ನಿರ್ಮಾಣದ ಮೂಲಕ ಆಹಾರ ಒದಗಿಸುವ ಕಾಯಕ


ಉದಯವಾಹಿನಿ ಚಿತ್ರ

ಮುಂದುವರೆದಿದೆ ಎನ್ನುತ್ತಾರೆ ನವಲಹಳ್ಳಿ ಗ್ರಾಮದ ಶರಣಪ್ಪ ಮುದಗಲ್.

'ಇತ್ತಿಚಿನ ದಿನಗಳಲ್ಲಿ ಕೃಷಿ ಚಟುವಟಿಕೆಗಳಿಗೆ ಯಂತ್ರಗಳು, ಟ್ರಾಕ್ಟರ್, ವಿವಿಧ ಹೊಸ ತಂತ್ರಜ್ಞಾನಗಳ ಬಳಕೆ ಹೆಚ್ಚಾಗಿದೆ. ಜಾನುವಾರು ಗಳ ಸಾಕಾಣಿಕೆ ಕ್ಷೀಣಿಸಿದೆ. ಆದರೆ ರೈತ ಕುಟುಂಬಗಳಿಗೆ ಜಾನುವಾರುಗಳ ಕೃಷಿ ಒಡನಾಟದಿಂದ ಸಿಗುವ ನೆಮ್ಮದಿ ಯತ್ರಗಳಿಂದ ಸಿಗುವುದಿಲ್ಲ. ಮಳೆ ಕೊರತೆ, ಕೃಷಿ ಬೆಳೆಗಳ ಬೆಲೆ, ಅಧಿಕ ಬರಗಾಲದಿಂದ ಯಂತ್ರಗಳ ಬಳಕೆ ಅನಿವಾರ್ಯ' ಎಂದು ಜುಮಲಾಪುರ ರೈತ ತಿಪ್ಪಣ್ಣ ಮಡೇರ ಹೇಳಿದರು.

# ಕೋಳಿ ಸಾಕಾಣಿಕೆಯಿಂದ ಬದುಕು ಕಟ್ಟಿಕೊಂಡ ದಂಪತಿ

### ಹಲವಾರು ವರ್ಷಗಳಿಂದ ಪಿತ್ರಾರ್ಜಿತ ಆಸ್ತಿಯಲ್ಲಿ ಕಡಲೆ, ಮೆಕ್ಕೆಜೋಳ, ಸೂರ್ಯಕಾಂತಿ ಸೇರಿ ವಿವಿಧ ಕೃಷಿ ನಡೆಸಿದ್ದಾರೆ

• ಉದಯವಾಹಿನಿ, ಅಳವಂಡಿ

ಕೃಷಿಯಲ್ಲಿ ನಷ್ಟ ಅನುಭವಿಸಿದ್ದರೂ ಉಪ ಕಸುಬಾಗಿ, ಜೀವನ ನಿರ್ವಹಣೆಗೆ ನರೇಗಾ ಯೋಜನೆಯಡಿ ಕೋಳಿ ಸಾಕಾಣಿಕೆ ರೈತ ದಂಪತಿ ಕೈ ಹಿಡಿದಿದೆ.ಸಮೀಪದ ಕಾತರಕಿ-ಗುಡ್ಲಾನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಬೇಳೂರು ಗ್ರಾಮದ ಗಾಳಪ್ಪ ಸುಣಗಾರ ಮತ್ತು ಪತ್ನಿ ರೇಣುಕಮ್ಮ ಸುಣಗಾರ ಕೃಷಿ ದಂಪತಿ. ಗ್ರಾಮದ ಬಹುತೇಕ ಜನ ಕೃಷಿ ನಂಬಿ ಜೀವನ ನಡೆಸಿದ್ದಾರೆ. ಅದರ ಜತೆಗೆ ಕೋಳಿ, ಹಸು, ಎಮ್ಮೆ, ಮೇಕೆಗಳನ್ನು ಸಾಕುವುದನ್ನು ಉಪಕಸುಬುವಾಗಿಸಿಕೊಂಡಿದ್ದಾರೆ.

ರೈತ ದಂಪತಿ ಕಾತರಕಿ-ಗುಡ್ಲಾನೂರು ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ 2024-25ನೇ ಸಾಲಿನಲ್ಲಿ ನರೇಗಾದಡಿ ಕೊಳಿಶೆಡ್ ನಿರ್ಮಿಸಿಕೊಂಡಿದ್ದಾರೆ. ಹಲವಾರು ವರ್ಷಗಳಿಂದ ಪಿತ್ರಾರ್ಜಿತ ಆಸ್ತಿಯಲ್ಲಿ ಕಡಲೆ, ಮೆಕ್ಕೆಜೋಳ, ಸೂರ್ಯಕಾಂತಿ ಸೇರಿ ವಿವಿಧ ಕೃಷಿ ನಡೆಸಿದ್ದಾರೆ.

**ಬೈಲರ್ ಕೋಳಿ ಮಾಂಸಕ್ಕೆ ಬೇಡಿಕೆ:** ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬೈಲರ್ ಕೋಳಿಗಳಿಗೆ ಬಹು ಬೇಡಿಕೆ ಇದೆ.


ಉದಯವಾಹಿನಿ ಚಿತ್ರ

ಬೈಲರ್ ಜಾತಿಯ ಕೋಳಿಮರಿಗಳನ್ನು ಒಂದಕ್ಕೆ ರೂ.36ನಂತೆ 5,000 ಮರಿಗಳನ್ನು ಖರೀದಿಸಿದ್ದಾರೆ. ಅತ್ಯಾಧುನಿಕ ಶೆಡ್ ನಿರ್ಮಾಣ ಮಾಡಿ ಅದರಲ್ಲಿ ಸಜ್ಜೆ, ಅಕ್ಕಿ, ಜೋಳ ಸೇರಿದಂತೆ ಮೊಳಕೆ ಪೈರನ್ನು ಆಹಾರವಾಗಿ ನೀಡುವ ಮೂಲಕ ಬೈಲರ್ ಕೋಳಿಗಳ ಪೋಷಣೆ ಮಾಡುತ್ತಿದ್ದಾರೆ.ಮಾರುಕಟ್ಟೆಯಲ್ಲಿ ಗುಣಮಟ್ಟದ ಕೋಳಿ ಮಾಂಸಕ್ಕೆ ಹೆಚ್ಚು ಬೇಡಿಕೆ. ಜೊತೆಗೆ ಮಳೆ ಇಲ್ಲದೆ ಬೇಸಾಯದಲ್ಲಿ ನಷ್ಟವಾದಾಗ ವ್ಯವಸಾಯವನ್ನೇ ಬಿಡುವ ಬದಲಿಗೆ, ಹೀಗೆ ಮಿಶ್ರಬೇಸಾಯ ಮಾಡುವ ಮೂಲಕ ರೈತ ದಂಪತಿಗಳು ಮಾದರಿಯಾಗಿದ್ದಾರೆ. ಇರುವ 8 ಎಕರೆ ಜಮೀನಿನಲ್ಲಿ 6 ಎಕರೆ ಮೆಕ್ಕೆಜೋಳ, 2 ಎಕರೆ ಶೆಂಗಾ ಬೆಳೆದಿದ್ದಾರೆ.

**ಕೋಳಿಗೆ ಆಹಾರ ವಿತರಣೆ**

**ಪ್ರತಿ ದಿನ ಕೋಳಿಗಳಿಗೆ ಎಷ್ಟೋ ಕಂಪನಿಯ ಆಹಾರ ವಿತರಣೆ ಮಾಡಲಾಗುತ್ತಿದ್ದು ಅದರಲ್ಲಿ ಸೋಯಾ, ಮೆಕ್ಕೆಜೋಳ ಇತ್ಯಾದಿ ಒಳಗೊಂಡ ಆಹಾರ ತಯಾರಿಸಿದ ಪ್ರತಿ ದಿನಕ್ಕೆ 50 ಕೆಜಿಯ 30 ಚೀಲಗಳನ್ನು ಕೋಳಿಗಳಿಗೆ ಆಹಾರವಾಗಿ ನೀಡಲಾಗುತ್ತಿದೆ. ಪ್ರತಿ 50 ಕೆಜಿಗೆ ರೂ.2000/-ರಂತೆ ಒಟ್ಟು 40 ದಿನಗಳಲ್ಲಿ 400 ಚೀಲಗಳನ್ನು ಆಹಾರ ರೂಪದಲ್ಲಿ ಕೋಳಿಗಳಿಗೆ ನೀಡುತ್ತಿದ್ದಾರೆ.**

ವ್ಯವಸಾಯ ಪತಿ ನೋಡಿಕೊಂಡರೆ, ಪತ್ನಿ ರೇಣುಕಾ ಮತ್ತು ಮಗ ಮಂಜುನಾಥ ಕೋಳಿ ಸಾಕಾಣಿಕೆ ಮೂಲಕ ಸ್ವಾವಲಂಬಿ ಬದುಕು ಸಾಗಿಸುತ್ತಾ ಮುನ್ನುಗ್ಗಿದ್ದಾರೆ. ಪ್ರತಿ ತಿಂಗಳಿಗೆ ಕೋಳಿ ಸಾಕಾಣಿಕೆಗೆ ರೂ.3000 ಖರ್ಚು ಭರಿಸುತ್ತಾರೆ. ಕೋಳಿ ಸಾಕಾಣಿಕೆಯಿಂದ ವಿಶೇಷ ದ್ರವ ಬಳಕೆ ಮಾಡುತ್ತಿರುವದರಿಂದ ವಾಸನೆಗೆ ಕಡಿವಾಣ ಬೀಳುತ್ತಿದೆ. ಪ್ರಸ್ತುತ ಪ್ರತಿ ಕೋಳಿ 2 ಕೆಜಿ 600 ಗ್ರಾಂ ಮಾಂಸ ಬಂದಿರುತ್ತದೆ. ಒಟ್ಟು 5,000 ಕೋಳಿಯಿಂದ 12 ಟನ್ 400 ಕೆಜಿ ತೂಕ ಬಂದಿದೆ.

ಸ್ಥಳೀಯವಾಗಿ ಮಾರಾಟ ಮಾಡಿರುವದರಿಂದ ಸಾಗಣೆ ವೆಚ್ಚ ಉಳಿತಾಯವಾಗಿರುತ್ತದೆ. ಕೇವಲ 45 ದಿನಗಳಲ್ಲಿ 1.20 ಲಕ್ಷ ಆದಾಯ ಪಡೆಯುವ ಮೂಲಕ ಆರ್ಥಿಕ ಸದೃಡದತ್ತ ಹೆಜ್ಜೆ ಇಟ್ಟಿದ್ದಾರೆ.

**ನರೇಗಾ ಅನುದಾನ:** ಮಹಾತ್ಮಾ ಗಾಂಧಿ ನರೇಗಾ ಯೋಜನೆಯಡಿ ಅಂದಾಜು ರೂ.60,000 ನೀಡಿದೆ. ಇದರಲ್ಲಿ 22 ಮಾನವ ದಿನಗಳ ಕೂಲಿ ಹಣ ರೂ.6,952, ಸಾಮಗ್ರಿ ಹಣ ರೂ.48,802 ಇವರ ಬ್ಯಾಂಕ್ ಖಾತೆಗೆ ಜಮೆಯಾಗಿದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ನಿಮ್ಮ ಹಣ ಖರ್ಚಾಗುತ್ತಿದೆ ಎಂಬುದರ ಮೇಲೆ ನಿಗಾ ಇರಿಸುವ ಅಗತ್ಯವಿದೆ ಇಲ್ಲದಿದ್ದರೆ ಮುಂಬರುವ ಸಮಯದಲ್ಲಿ ನೀವು ತೊಂದರೆಗೊಳಗಾಗಬಹುದು ಹತ್ತಿರದ ಗೆಳೆಯರು ಹಾಗು ಸ್ನೇಹಿತರು ಆಕ್ರಮಣಕಾರಿಯಾಗುತ್ತಾರೆ ಪಡೆಯಲು ಮತ್ತು ನಿಮಗೆ ಜೀವನವನ್ನು ಕಠಿಣಗೊಳಿಸುತ್ತಾರೆ.

**ವೃಷಭ** ನಿಮ್ಮ ಜೀವನವನ್ನು ಲಘುವಾಗಿ ತೆಗೆದುಕೊಳ್ಳಬೇಡಿ ನೆನಪಿಡಿ, ಬದುಕಿನ ರಕ್ಷಣೆ ನಿಜವಾದ ಆಣೆ. ನಿಮ್ಮ ಸಮರ್ಪಣೆ ಮತ್ತು ಶ್ರಮವನ್ನು ಗಮನಿಸಲಾಗುತ್ತದೆ ಮತ್ತು ಇಂದು ನಿಮಗೆ ಸ್ವಲ್ಪ ಆರ್ಥಿಕ ಪ್ರತಿಫಲಗಳನ್ನು ತರುತ್ತದೆ.

**ಮಿಥುನ** ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಿ ಮತ್ತು ನಿಮ್ಮ ವ್ಯಾಯಾಮವನ್ನು ತಪ್ಪದೆ ಮಾಡಿ. ತೀರಾ ಖರ್ಚು ಮಾಡುವ ಮತ್ತು ಮನರಂಜನೆಗೆ ತುಂಬಾ ಖರ್ಚ ಮಾಡುವ ನಿಮ್ಮ ಪ್ರವೃತ್ತಿಗೆ ಕಡಿವಾಣ ಹಾಕಿ.

**ಕರ್ಕಾಟಕ** ಹೆಚ್ಚು ಆಶಾವಾದಿಗಳಾಗಿರಲು ನಿಮ್ಮನ್ನು ನೀವೇ ಪ್ರೇರೇಪಿಸಿಕೊಳ್ಳಿ. ವಿಶ್ವಾಸ, ನಮ್ಯತೆಯನ್ನು ಹೆಚ್ಚಿಸುತ್ತದಾದರೂ ಅದೇ ಸಮಯದಲ್ಲಿ ಭಯ, ದ್ವೇಷ, ಅಸೂಯೆ, ಸೇಡಿನಂಥ ನಕಾರಾತ್ಮಕ ಭಾವನೆಗಳನ್ನು ಹಿಂದೆ ಬಿಡಲು ಸಿದ್ಧವಾಗಿ.

**ಸಿಂಹ** ಪತ್ನಿ ನೀವು ಹುರಿದುಂಬಿಸಬಹುದು. ಆರ್ಥಿಕ ದೃಷ್ಟಿಯಿಂದ ಇಂದಿನ ದಿನ ಮಿಶ್ರವಾಗಿ ಉಳಿಯುತ್ತದೆ.ಇಂದು ನೀವು ಹಣದ ಪ್ರಯೋಜನವನ್ನು ಪಡೆಯಬಹುದು ಆದರೆ ಇದಕ್ಕಾಗಿ ನೀವು ಕಠಿಣ ಪರಿಶ್ರಮ ಮಾಡಬೇಕಾಗುತ್ತದೆ.

**ಕನ್ಯಾ** ಫಿಟ್ ಆಗಿ ಉಳಿಯಲು ನಿಯಮಿತವಾಗಿ ಹೆಲ್ತ್ ಕ್ಲಬ್‌ಗೆ ಭೇಟಿ ನೀಡಿ. ಹೊಸ ಒಪ್ಪಂದಗಳು ಲಾಭದಾಯಕವೆಂದು ಕಂಡರೂ ಬಯಸಿದ ಲಾಭ ತರುವುದಿಲ್ಲ ಹಣವನ್ನು ಹೂಡುವ ಪ್ರಶ್ನೆ ಬಂದಾಗ ಆತುರದ ನಿರ್ಧಾರಗಳನ್ನು ಮಾಡಬೇಡಿ.

**ತುಲಾ** ನಿಮ್ಮ ವೆಚ್ಚಗಳನ್ನು ನಿಯಂತ್ರಿಸಲು ಪ್ರಯತ್ನಿಸಿ ತುಂಬಾ ಖರ್ಚು ಮಾಡಬೇಡಿ. ಸಂತೋಷದ ಚೈತನ್ಯದಾಯಕ ಪ್ರಿಯವಾದ ಚಿತ್ತದ ನಿಮ್ಮ ಖುಷಿಯ ಸ್ವಭಾವ ನಿಮ್ಮ ಸುತ್ತಲಿನವರಿಗೆ ಸಂತೋಷ ಖುಷಿಯನ್ನು ತರುತ್ತದೆ.

**ವೃಶ್ಚಿಕ** ಗಾಯಗೊಳ್ಳುವುದನ್ನು ತಪ್ಪಿಸಲು ಕುಳಿತುಕೊಳ್ಳುವಾಗ ವಿಶೇಷ ಕಾಳಜಿ ವಹಿಸಿ. ಅಲ್ಲದೇ ಒಳ್ಳೆಯ ನಿಲುವು ಕೇವಲ ನಿಮ್ಮ ವ್ಯಕ್ತಿತ್ವವನ್ನು ವೃದ್ಧಿಸುವುದಷ್ಟೇ ಅಲ್ಲದೇ ಆರೋಗ್ಯ, ವಿಶ್ವಾಸಾರ್ಹತೆಯನ್ನು ಅಭಿವೃದ್ಧಿಪಡಿಸುವಲ್ಲೂ ಪ್ರಮುಖ ಪಾತ್ರ ವಹಿಸುತ್ತದೆ.

**ಧನಸ್ಸು** ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು ನಿಮ್ಮ ಕುಟುಂಬದ ಸಲುವಾಗಿ ಏನಾದರೂ ಉದಾತ್ತ, ಉಪಯುಕ್ತವಾದದ್ದರ ಸಲುವಾಗಿ ಶ್ರಮಪಡಿ.

**ಮಕರ** ಇತರರ ವಿರುದ್ಧ ದ್ವೇಷ ಕಾರುವುದು ಮಾನಸಿಕ ಒತ್ತಡವನ್ನು ನೀಡುತ್ತದೆ. ಇವುಗಳು ಜೀವನವನ್ನು ವ್ಯರ್ಥಗೊಳಿಸುವುದರಿಂದ ನಿಮ್ಮ ಸಾಮರ್ಥ್ಯವನ್ನು ಕೊಲ್ಲುವುದರಿಂದ ನೀವು ಈ ರೀತಿಯ ಆಲೋಚನೆಗಳನ್ನು ತಪ್ಪಿಸಬೇಕು.

**ಕುಂಭ** ಇಂದು ಆರೋಗ್ಯ ಪರಿಪೂರ್ಣವಾಗಿರುತ್ತದೆ. ನೀವು ಸಂಪ್ರದಾಯಬದ್ಧ ಹೂಡಿಕೆಗಳನ್ನು ಮಾಡಿದಲ್ಲಿ ಒಳ್ಳೆಯ ಹಣ ಮಾಡುತ್ತೀರಿ. ನಿಮ್ಮ ಮನೆಯಲ್ಲಿ ಸಾಮರಸ್ಯ ತರಲು ನಿಕಟ ಸಹಕಾರದೊಂದಿಗೆ ಕೆಲಸ ಮಾಡಬೇಕು.

**ಮೀನ** ದೇಹದ ನೋವು ಮತ್ತು ಒತ್ತಡ ಸಂಬಂಧಿತ ಸಮಸ್ಯೆಗಳನ್ನು ತಳ್ಳಿಹಾಕಲು ಸಾಧ್ಯವಿಲ್ಲ. ನಿಕಟ ಸಂಬಂಧಿಗಳ ಮನೆಗೆ ಹೋಗುವುದರಿಂದ ಇಂದು ನಿಮ್ಮ ಆರ್ಥಿಕ ಪರಿಸ್ಥಿತಿ ಹಾಳಾಗಬಹುದು.

## ಜೂಜಾಟ: 8 ಜನರ ಬಂಧನ

• ಉದಯ ವಾಹಿನಿ, ಕಲಬುರಗಿ,

ನಗರದ ಹಳೆ ಜೇವರ್ಗಿ ರಸ್ತೆಯ ಪಿ.ಡಬ್ಲ್ಯೂಡಿ ಕ್ವಾಟರ್ಸ್ ಹತ್ತಿರದ ಖಾಲಿ ಜಾಗದಲ್ಲಿ ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯ ಎ.ಎಸ್.ಐ ಶಿವಶರಣಪ್ಪ ಕೋರಳ್ಳಿ, ಸಿಬ್ಬಂದಿಗಳಾದ ಪ್ರಭಾಕರ, ಯಲ್ಲಪ್ಪ, ಮಲ್ಲಣ್ಣಾ, ಸಂಗಣ್ಣ ಅವರು ದಾಳಿ ನಡೆಸಿ 8 ಜನರನ್ನು ಬಂಧಿಸಿದ್ದಾರೆ. ಸುಭಾಷ ಚೆಲಾ, ಮೊಹ್ಮದ್ ಶಫಿ, ಶರಣಬಸಪ್ಪ ಪಾಟೀಲ, ಶರಣಗೌಡ ಸೋಮಪ್ಪಗೋಳ, ಸಂತೋಷ ನಡುವಿನಮನಿ, ಆರ್ಯಪ್ಪ ದೊಡ್ಡಮನಿ, ಪ್ರವೀಣ್ ತಾಳಿಕೋಟೆ, ಅಂಬರೀಶ ಸೊನ್ನ ಎಂಬುವವರನ್ನು ಬಂಧಿಸಿ 24,400 ರೂ.ನಗದು ಮತ್ತಗು 52 ಇಸ್ಪೇಟ್ ಎಲೆಗಳನ್ನು ಜಪ್ತಿ ಮಾಡಿದ್ದಾರೆ. ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನೇಣು ಹಾಕಿಕೊಂಡು ವ್ಯಕ್ತಿ ಆತ್ಮಹತ್ಯೆ


• ಉದಯ ವಾಹಿನಿ, ಕಲಬುರಗಿ,

ಕುಡಿತದ ಚಟಕ್ಕೆ ಅಂಟಿಕೊಂಡಿದ್ದ ವ್ಯಕ್ತಿಯೊಬ್ಬ ಜೀವನದಲ್ಲಿ ಜಿಗುಪ್ಸೆಗೊಂಡು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಇಲ್ಲಿನ ಕೋರಂಟಿ ಹನುಮಾನ ನಗರ ತಾಂಡಾದಲ್ಲಿ ನಡೆದಿದೆ. ಅರವಿಂದ ತಂದೆ ತಾರು ಪವಾರ ಆತ್ಮಹತ್ಯೆ ಮಾಡಿಕೊಂಡವರು. ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದ ಅರವಿಂದ ಐದು ವರ್ಷದ ಹಿಂದೆ ಮದುವೆಯಾಗಿದ್ದರು. ಮಕ್ಕಳಾಗಿರಲಿಲ್ಲ. ಕುಡಿತದ ಚಟಕ್ಕೆ ಅಂಟಿಕೊಂಡಿದ್ದರಿಂದ ಆರೋಗ್ಯ ಹದಗೆಟ್ಟಿತ್ತು. ಪತ್ನಿ ಪ್ರಿಯಾಂಕಾ ತಮ್ಮ ಅತ್ತಿಗೆಯ ಕುಬಸ ಕಾರ್ಯಕ್ರಮ ಇದ್ದ ಪ್ರಯುಕ್ತ ತವರು ಮನೆಗೆ ಹೋಗಿದ್ದರು. ಮನೆಯಲ್ಲಿ ಯಾರೂ ಇಲ್ಲದ ವೇಳೆ ಮನೆಯ ಪತ್ರಾ ಶೆಡ್ಡಿಗೆ ಇರುವ ಕಬ್ಬಿಣದ ರಾಡಿಗೆ ಬಟ್ಟೆಯಿಂದ ನೇಣು ಬಿಗಿದುಕೊಂಡು ಅರವಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಈ ಸಂಬಂಧ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮಾ.9 ರಂದು ರಾಜಾಪೂರ ಆಸ್ಪತ್ರೆಯಲ್ಲಿ ಉಚಿತ ತಪಾಸಣಾ ಶಿಬಿರ: ಡಾ.ಸುರೇಶಗೌಡ

• ಉದಯವಾಹಿನಿ, ಶಹಾಪುರ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಾರ್ಚ್ 9 ರವಿವಾರದಂದು ಪಟ್ಟಣದ ಗಣೇಶ್ ನಗರದ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಎದುರುಗಡೆ ಇರುವ ರಾಜಾಪೂರ ಆಸ್ಪತ್ರೆಯಲ್ಲಿ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಚರ್ಮ ಹಾಗೂ ಕೂದಲು ಸಂಧಿವಾತ ಬೊಜ್ಜಿಗೆ ಸಂಬಂಧಿಸಿದಂತೆ



ಉಚಿತ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ರಾಜಾಪೂರ ಆಸ್ಪತ್ರೆಯ ವೈದ್ಯ ಡಾ. ಸುರೇಶಗೌಡ ಎನ್. ಪಾಟೀಲ್. ರಾಜಾಪೂರ ತಿಳಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರಲ್ಲಿ ಬಂಗು ಮೊಡವೆ ಕಲೆಗಳು ಇಸುಬು ಬಿಳಪು ಸೊರಿಯಾಸಿಸ್ ಶಿಲೀಂದ್ರ ಸೋಂಕು ಕೂದಲು ಉದುರುವುದು ಬೋಳುತಲೆ ಹೊಟ್ಟಿನ ಸಮಸ್ಯೆ ಕೂದಲು ತುಂಡಾಗುವುದು ಸಂಧಿವಾತ ಬೊಜ್ಜಿಗೆ ಸಂಬಂಧಿಸಿದ ರೋಗಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ ಆದ್ದರಿಂದ ತಾಲ್ಲೂಕಿನ ಜನತೆಯ ಆರೋಗ್ಯ ದೃಷ್ಟಿಯಿಂದ ನಮ್ಮ ರಾಜಾಪೂರ ಆಸ್ಪತ್ರೆಯಲ್ಲಿ ಉಚಿತವಾಗಿ ತಪಾಸಣೆ ಮಾಡಿ ರಿಯಾಯಿತಿ ದರದಲ್ಲಿ ಪರೀಕ್ಷೆಗಳು ಹಾಗೂ ಔಷಧಿಗಳನ್ನು ನೀಡಲಾಗುವುದು ಈ ಉಚಿತ ತಪಾಸಣೆ ಶಿಬಿರದ ಸದುಪಯೋಗವನ್ನು ಮಹಿಳೆಯರು ಪುರುಷರು ಸಾರ್ವಜನಿಕರು ಪಡೆದುಕೊಳ್ಳುವಂತೆ ರಾಜಾಪೂರ ಆಸ್ಪತ್ರೆಯ ವೈದ್ಯರಾದ ಡಾ. ಸುರೇಶಗೌಡ ಎನ್.ಪಾಟೀಲ್ ರಾಜಾಪೂರ, ಡಾ.ಪೂಜಾ ಎಸ್. ಪಾಟೀಲ್ ರಾಜಾಪೂರ ತಿಳಿಸಿದ್ದಾರೆ.

### ವರ್ಷದ ಶಿಕ್ಷಕ ವಿದ್ಯಾರ್ಥಿಗಳ ಸ್ವಾಗತ, 2024-25ನೇ ಸಾಲಿನ ಶಿಕ್ಷಕ ವಿದ್ಯಾರ್ಥಿ ಒಕ್ಕೂಟದ ಉದ್ಘಾಟನಾ ಸಮಾರಂಭ

# ಶಿಕ್ಷಕ ಸ್ಥಾನಕ್ಕಿಂತ ಮಿಗಿಲಾದದ್ದು ಯಾವುದಿಲ್ಲ: ಸಿದ್ಧಲಿಂಗಶ್ರೀ

• ಉದಯ ವಾಹಿನಿ, ತಾಳಿಕೋಟೆ



ಉದಯವಾಹಿನಿ ಚಿತ್ರ

ಶಿಕ್ಷಕ ಎಂಬ ವೃತ್ತಿ ಜೀವನವು ಈ ಹಿಂದಿನ ಕಾಲದಿಂದಲೂ ಸಾಗಿಬಂದಿದೆ ಈ ವೃತ್ತಿಗಿಂತ ಮಿಗಿಲಾದಂತಹ ವೃತ್ತಿಗಳಿದ್ದರೂ ಸಹ ಅವುಗಳಿಗೆ ಶಿಕ್ಷಣ ನೀಡಿ ಆ ಸ್ಥಾನಮಾನವನ್ನು ಕಲ್ಪಿಸುವಂತಹ ಶಕ್ತಿ ಶಿಕ್ಷಕ ಎಂಬ ಸ್ಥಾನಮಾನಕ್ಕಿದೆ ಎಂದು ಶ್ರೀ ಖಾಸ್ಗತೇಶ್ವರ ಮಠದ ಬಾಲಶಿವಯೋಗಿ ಶ್ರೀ ಸಿದ್ಧಲಿಂಗ ದೇವರು ನುಡಿದರು.

ಸ್ಥಳೀಯ ಶ್ರೀ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯದ ಬಿಇಡಿ ಪ್ರಥಮ ವರ್ಷದ ಶಿಕ್ಷಕ ವಿದ್ಯಾರ್ಥಿಗಳ ಸ್ವಾಗತ ಹಾಗೂ 2024-25ನೇ ಸಾಲಿನ ಶಿಕ್ಷಕ ವಿದ್ಯಾರ್ಥಿ ಒಕ್ಕೂಟದ ಉದ್ಘಾಟನಾ ಸಮಾರಂಭದಲ್ಲಿ ದಿವ್ಯ ಸಾನಿದ್ಯ ವಹಿಸಿ ಸನ್ಮಾನ ಸ್ವಿಕರಿಸಿ ಮಾತನಾಡುತ್ತಿದ್ದ ಶ್ರೀಗಳು ಸಾಧನೆ ಎಂಬುದು ಸಾದಿಸಿದರೆ ಮಾತ್ರ ಒಲುಮೆಯಾಗಲಿದೆ ಆ ಒಲುಮೆಯನ್ನು ಯಾವ ರೀತಿ ಪಡೆಯಬೇಕೆಂಬುದನ್ನು ಅರ್ಥೈಸಿ ಹೇಳುವ ಕಾರ್ಯ ಶಿಕ್ಷಕ ಆದವನು ಮಾಡುತ್ತಾನೆಂದರು. ಕ್ರಿಕೆಟ್ ಆಟಗಾರ ವೀರಾಟ್ ಕೋಹ್ಲಿ ಎಂಬವ ರಾಷ್ಟ್ರ ಮಟ್ಟದ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದಾಗ ಆತನಿಗೆ ತಂದೆ ಮೃತಪಟ್ಟ ಸುದ್ದಿ ಆಟವಾಡುವ ಸಮಯದಲ್ಲಿ ಕೇಳಿ ಬರುತ್ತದೆ ಇದನ್ನು ಹೇಗೋ ಅರೀತ ಈ ಕೋಹ್ಲಿಯ ಗುರು ಎಂಬಾತ ಕೋಹ್ಲಿ ಅವನಿಗೆ ತಿಳಿ ಹೇಳಿ ನಿನ್ನ ತಂದೆಯ ಹೆಸರನ್ನು ತೆಗೆದುಕೊಂಡು ಆಟವಾಡು ನೀನು ಜಯ ಗಳಿಸುತ್ತಿ ಎಂಬ ಮಾತನ್ನು ಆಲಿಸಿದ ಕೋಹ್ಲಿ ತಂದೆ ಮೃತಪಟ್ಟ ಸುದ್ದಿಯನ್ನು ಅರೀತರೂ ಕೂಡಾ ಲಕ್ಷಾಂತರ ಜನ ಆಟ ವಿಕ್ಷಿಸುತ್ತಿರುವವರಿಗೆ ತೊಂದರೆಯಾಗಬಾರದೆಂಬ ಉದ್ದೇಶ ಹೊತ್ತು ಆಟವಾಡಿ ದೇಶಕ್ಕೆ ಜಯ ತಂದುಕೊಟ್ಟ ಆತನ ಇತಿಹಾಸ ಇನ್ನೂ ಅಜರಾಮರವಾಗಿ ಉಳಿಯುವಂತಾಗಿದೆ ಎಂದು ಹೇಳಿದ ಶ್ರೀಗಳು ಮಾಡಿದರೆ ಅಂತಹ ಸಾಧನೆಯನ್ನು ಮಾಡಿ ಎಂದು ಶಿಕ್ಷಕ ವಿದ್ಯಾರ್ಥಿಗಳಿಗೆ ಸಲಹೆ ನೀಡಿದ ಶ್ರೀಗಳು ಶಿಕ್ಷಕ ಹೇಗೆ ಇರಲಿ ಆತನಿಗೆ ಒಳ್ಳೆಯವ ಕೆಟ್ಟವನವ ಎಂಬ ಹೆಸರು ತರುವ ಕೆಲಸ ವಿದ್ಯಾರ್ಥಿಯಾದವರ ಕೈಯಲ್ಲಿದೆ ಎಂದು ಕೆಲವು ವಿಷಯಗಳನ್ನು ವಿವರಿಸಿದ ಶ್ರೀಗಳು ಇಡೀ ದೇಶವನ್ನು ರಕ್ಷಿಸುವ ಸಾಮರ್ಥ್ಯ ಶಿಕ್ಷಕ ಎಂಬ ಸ್ಥಾನಮಾನದಲ್ಲಿದೆ ಕಾರಣ ಅದನ್ನು ವಿಚಾರ ಮನೋಭಾವನೆಯಿಂದ ಕಾಣದೇ ಅದರ ಸ್ಥಾನ ಮಾನಕ್ಕೆ ತಕ್ಕಂತೆ ಕಾರ್ಯ ನಿರ್ವಹಿಸಿರಿ ಎಂದರು.

ಯಾವ ರೀತಿ ಹೂವಿಗೆ ಸುವಾಸನೆ ಎಂಬುದು ಮುಖ್ಯವೋ ಆ ರೀತಿ ವ್ಯಕ್ತಿಗೆ ವ್ಯಕ್ತಿತ್ವ ಮುಖ್ಯ ಎಂಬ ಅರಿವಿನೊಂದಿಗೆ ಮುನ್ನಡೆಯಬೇಕು ಶಿಕ್ಷಣ ಮಾಡಲಿರುವ ಇಚ್ಛಾಶಕ್ತಿ ಎಂಬುದಕ್ಕೆ ಶಿಕ್ಷಕರಾದವರು ಅಳವಡಿಸಿಕೊಳ್ಳಲು ಮುಂದಾಗಬೇಕೆದು ಹೇಳಿದ ಅವರು ಅನೇಕ ಶಿಕ್ಷಣ ಸಂಸ್ಥೆಗಳು ಜನ್ಮತಾಳಿವೆ ಮಾದರಿಯ ಶಿಕ್ಷಣ ಸಂಸ್ಥೆಗಳಲ್ಲಿ ತಾಳಿಕೋಟೆಯ ವೀರಶೈವ ವಿದ್ಯಾವರ್ದಕ ಶಿಕ್ಷಣ ಸಂಸ್ಥೆಯೊಂದಾಗಿದೆ ಎಂದು ಹೇಳಿದ ಅವರು ಡಾ.ಡಿ.ವ್ಹಿ.ಗುಂಡಪ್ಪನವರು ಪತ್ರಕರ್ತರಾಗಿ ಯಾವುದೇ ಆಸೆ ಆಮಿಷ್ಯಗಳಿಗೆ ಒಳಗಾಗದೇ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರೊಂದಿಗೆ ಇದ್ದ ಒಡನಾಟ ಕುರಿತು ಹಾಗೂ ಪತ್ರಿಕೋದ್ಯಮದಲ್ಲಿ ಪಾವಿತ್ರತೆಯನ್ನು ಕಾಪಾಡಿಕೊಂಡು ಸಾಗಿದ್ದರ ಕುರಿತು ವಿವರಿಸಿದ ಅವರು ಎಲ್ಲಾ ಹುದ್ದೆಗಳನ್ನು ಸೃಷ್ಠಿ ಮಾಡುವಂತಹ ಕಾರ್ಯ ಶಿಕ್ಷಕನಾದವನೇ ಮಾಡುತ್ತಾನೆ ಕಾರಣ ಆದರ್ಶ ಬಧುಕನ್ನು ತಂದೆ ತಾಯಿಯಂತೆ ರೂಪಿಸಿಕೊಂಡು ನಡೆಯಿರಿ ಎಂದು ಡಾ.ಮಾದವ್ ಅವರು ಶಿಕ್ಷಕ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿ ಶಿಕ್ಷಕ ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಭೋದಿಸಿದ ಶ್ರೀ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಆರ್.ಎಂ.ಭಂಟನೂರ ಅವರು ಮಹಾವಿದ್ಯಾಲಯದ ಪ್ರಾರಂಭವಾದುದ್ದರಿಂದ ಹಿಡಿದು ಪ್ರಸ್ತುತ ಮಹಾವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿರುವಂತಹ ವಿದ್ಯಾರ್ಥಿಗಳ ಸಂಖ್ಯೆಯನ್ನು ವಿವರಿಸಿದರಲ್ಲದೇ ಆದರ್ಶ ಸ್ಥಾನಮಾನವನ್ನು ಹೊಂದಿರುವ ಶಿಕ್ಷಕ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಿಕೊಂಡಿದ್ದರ ಕುರಿತು ಗುಣಗಾನ ಮಾಡಿ ದರಲ್ಲದೇ ವಿದ್ಯಾರ್ಥಿ ಒಕ್ಕೂಟ ಸ್ಥಾಪನೆ ಯಾಗಿದ್ದರ ಕುರಿತು ಅದರ ಕಾರ್ಯ ವೈಖರ್ಯಗಳ ಕುರಿತು ಚಟುವಟಿಕೆಗಳ ಕುರಿತು ವಿವರಿಸಿದರು. ಸಮಾರಂಭವನ್ನು ದೀಪ ಬೆಳಗಿಸುವದರೊಂದಿಗೆ ಉದ್ಘಾಟಿಸಿದ ವೀರಶೈವ ವಿದ್ಯಾವರ್ದಕ ಸಂಘದ ಅಧ್ಯಕ್ಷ ವ್ಹಿ.ಸಿ.ಹಿರೇಮಠಅವರು ಮಾತನಾಡಿ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂಬ ಉದ್ದೇಶದಿಂದ ಶ್ರೀ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯ ಬಿಇಡಿಯನ್ನು 2016-17ನೇ ಸಾಲಿನಲ್ಲಿ ಪ್ರಾರಂಭ ಮಾಡಲಾಯಿತು.

ಈ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ ಒಳ್ಳೆಯ ಶಿಕ್ಷಣ ನೀಡುತ್ತಾ ಒಳ್ಳೆಯ ಭೋದನೆ ಮಾಡುತ್ತಾ ಸಾಗಿದಂತಹ ಭೋದಕ ಸಿಬ್ಬಂದಿಯವರ ಕಾರ್ಯ ಮೆಚ್ಚುವಂತಹದ್ದಾಗಿದೆ ಎಂದರು.

> ಮಾನವರಾಗಿ ಹುಟ್ಟಿದ ಮೇಲೆ ಯಾವುದಾದರೊಂದು ಸಾಧನೆ ಮಾಡಬೇಕು ಎಲ್ಲಾ ಸಾಧನೆಗಳಲ್ಲಿ ಹೆಚ್ಚಿನ ಸಾಧನೆ ಎಂದು ಮಹತ್ವ ಪಡೆದಿರುವ ಶಿಕ್ಷಕ ವೃತ್ತಿ ಎಂಬ ಸಾಧನೆಯಾಗಿದ್ದು ಆ ಸಾಧನೆಯನ್ನು ಆಯ್ಕೆ ಮಾಡಿಕೊಂಡು ನಡೆದರೆ ಉನ್ನತ ಸ್ಥಾನಮಾನದ ಮೇಟ್ಟಿಲು ಏರಲು ಸಾಧ್ಯವಾಗಲಿದೆ ಎಂದರು. ಶಿಕ್ಷಕರಿಗೆ ಇರತಕ್ಕಂತಹ ಗೌರವ ಮತ್ಯಾರಿಗೂ ಇಲ್ಲಾ ಶಿಕ್ಷಕನಾದವ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ನೀಡುವಂತಹ ಸಾಮಾರ್ಥ್ಯ ಇರಬೇಕೆಂದರು.
>
> -ಡಾ.ಮಾದವ ಎಚ್. ಗುಡಿ ಸಾಹಿತಿ

## ಕುಡಿಯುವ ನೀರಿನ ಸಮಸ್ಯೆ: ಸಿಇಒ ಭೇಟಿ



ಉದಯವಾಹಿನಿ ಚಿತ್ರ

• ಉದಯ ವಾಹಿನಿ, ಕೆಂಭಾವಿ

ನೀರಿನ ಸಮಸ್ಯೆಯಿಂದ ಬಳಲುತ್ತಿರುವ ಯಾವೂರ ಗ್ರಾಮ ಪಂಚಾಯತಿ ವ್ಯಾಪ್ತಿಯ ಹಲವು ಗ್ರಾಮಗಳಿಗೆ ಗುರುವಾರ ಜಿ.ಪಂ ಸಿಇಒ ಲವೀಶ ಒರ್ಡಿಯಾ ಭೇಟಿ ನೀಡಿ ಪರಿಶೀಲನೆ ನಡೆಸಿದರು.ಗ್ರಾ.ಪಂ ವ್ಯಾಪ್ತಿಯ 13 ಗ್ರಾಮಗಳ ಪೈಕಿ ಸುಮಾರು ಐದು ಆರು ಗ್ರಾಮಗಳಲ್ಲಿ ಈ ನೀರಿನ ಸಮಸ್ಯೆ ಇದ್ದು ಜಲಮೂಲ ಸಂಪೂರ್ಣ ಬತ್ತಿ ಹೋಗಿರುವುದೇ ಸಮಸ್ಯೆಗೆ ಕಾರಣ ಎಂದು ಹೇಳಲಾಗಿದೆ. ನೀರು ಪೂರೈಸುವ ಕೊಳವೆ ಬಾವಿ ಮತ್ತು ತೆರೆದ ಬಾವಿಗಳ ಪರಿಶೀಲನೆ ನಡೆಸಿ ನಂತರ ಗ್ರಾ.ಪಂ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿದ ಜಿ.ಪಂ ಸಿಇಒ ಲವೀಶ, ಇಲ್ಲಿನ ಜನರಿಗೆ ಶಾಶ್ವತ ನೀರಿನ ಸಮಸ್ಯೆಗೆ ಯಾವ ರೀತಿ ಪರಿಹಾರ ಕಂಡುಕೊಳ್ಳಬೇಕು ಮತ್ತು ಈಗ ಲಭ್ಯ ಇರುವ ನೀರನ್ನು ಯಾವ ರೀತಿ ಬಳಸಿಕೊಳ್ಳಬೇಕು ಎಂಬುದರ ಕುರಿತು ಚರ್ಚಿಸಿದರು. ಈಗಾಗಲೇ ಟ್ಯಾಂಕರ್ ಮೂಲಕ ಆಶ್ರಯ ಕಾಲೊನಿ ಮತ್ತು ಇತರ ಕಡೆಗೆ ಪೂರೈಕೆಯಾಗುತ್ತಿರುವ ನೀರನ್ನು ಯಾವ ಕಾರಣಕ್ಕೂ ನಿಲ್ಲಿಸದಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು .

## ಗ್ಯಾರಂಟಿ ಯೋಜನೆಗಳ ಸಮರ್ಪಕ ಜಾರಿಗೆ ಆಗ್ರಹಿಸಿ ಜೆಡಿಎಸ್ ಪ್ರತಿಭಟನೆ

• ಉದಯ ವಾಹಿನಿ, ಬಳ್ಳಾರಿ



ಉದಯವಾಹಿನಿ ಚಿತ್ರ

ರಾಜ್ಯದಲ್ಲಿನ ಕಾಂಗ್ರೆಸ್ ಪಕ್ಷ ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಪಂಚ ಗ್ಯಾರಂಟಿಗಳಾದ ಗೃಹಲಕ್ಷ್ಮಿ ಗೃಹಜ್ಯೋತಿ, ಶಕ್ತಿ, ಅನ್ನಭಾಗ್ಯ ಹಾಗೂ ಯುವನಿಧಿ ಯೋಜನೆಗಳ ಅನುಷ್ಠಾನ ಸಮರ್ಪಕವಾಗಿ ಜಾರಿಗೆ ತಂದಿಲ್ಲ ಕಳೆದ ಮೂರು ತಿಂಗಳಿಂದ ಹಣ ಬಿಡುಗಡೆಯಾಗಿಲ್ಲ.


ಮತ್ತು ಮೈಕ್ರೋ ಫೈನಾನ್ಸ್ ಹಾವಳಿಯಿಂದ ಆತ್ಮಹತ್ಯೆಗೆ ಶರಣಾಗುತ್ತಿರುವ ಸಾಲಗಾರರ, ರೈತರ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿದೆಂದು ನಗರದಲ್ಲಿ ಜೆಡಿಎಸ್ ಪ್ರತಿಭಟನೆ ನಡೆಸಿ ರಾಜ್ಯಪಾಲರಿಗೆ ಬರೆದ ಮನವಿ ಪತ್ರವನ್ನು ಜಿಲ್ಲಾಡಳಿತಕ್ಕೆ ಸಲ್ಲಿಸಿದ್ದಾರೆ. ಪಕ್ಷದ ಜಿಲ್ಲಾ ಅಧ್ಯಕ್ಷ ಮೀನಳ್ಳಿ ತಾಯಣ್ಣ ನೇತೃತ್ವದಲ್ಲಿ ಪಕ್ಷದ ಕಚೇರಿಯಿಂದ ಡಿಸಿ ಕಚೇರಿ ವರೆಗೆ ಪ್ರತಿಭಟನೆಯ ಮೆರವಣಿಗೆ ಮೂಲಕ ಆಗಮಿಸಿ ಮನವಿ ಸಲ್ಲಿಸಿದರು. ರಾಜ್ಯಸರ್ಕಾರ 2023-24 ನೇ ಸಾಲಿನ ಆಯವ್ಯಯದಲ್ಲಿ 36 ಸಾವಿರ ಕೋಟಿ ರೂ. ಮತ್ತು 2025 ನೇ ಸಾಲಿನ ಆಯವ್ಯಯದಲ್ಲಿ 52 ಸಾವಿರ ಕೋಟಿ ರೂ. ಗಳನ್ನು ಅನುಷ್ಠಾನಕ್ಕೆ ಮೀಸಲು ಇಟ್ಟಿದ್ದರೂ, ಗ್ಯಾರಂಟಿಗಳ ಅನುಷ್ಠಾನದಲ್ಲಿ ವಿಫಲಗೊಂಡಿದ್ದು, ರಾಜ್ಯದ ಜನರ ಆಕ್ರೋಶಕ್ಕೆ ಗುರಿಯಾಗಿದೆ.

ಮೈಕ್ರೋಫೈನಾನ್ಸ್‌ನವರು ಸಾಲ ವಸೂಲಿ ಭಾದೆಯಿಂದ ಹಲವಾರು ಸಾಲಗಾರರು ಊರು ತೊರೆದು ಹೋಗಿದ್ದಾರೆ, ಕೆಲವರು ಆತ್ಮಹತ್ಯೆಗೆ ಶರಣಾಗಿದ್ದು ಹಲವಾರು ಬಡ ಮತ್ತು ಮಾಧ್ಯಮ ಕುಟುಂಬಗಳು ಬೀದಿಪಾಲಾಗಿವೆ. ರಾಜ್ಯಸರ್ಕಾರ ಈ ಬಗ್ಗೆ ಮುಂಚಿತವಾಗಿ ಎಚ್ಚೆತ್ತುಕೊಂಡು ಸೂಕ್ತ ಕ್ರಮಗಳನ್ನು ಅನುಸರಿಸಿದ್ದರೆ ಹಲವು ಜೀವಗಳನ್ನು ಉಳಿಸಬಹುದಿತ್ತು. ಈ ಸಾಮಾಜಿಕ ಪಿಡುಗನ್ನು ನಿಯಂತ್ರಿಸುವಲ್ಲ ಸರ್ಕಾರ ಇನ್ನೂ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಾಗಿದೆಂದರು.

ರಾಜ್ಯದಲ್ಲಿ ಬ್ಯಾಂಕ್ ದರೋಡೆಗಳು, ಮಾದಕ ವಸ್ತುಗಳ ಮಾರಾಟ ಮತ್ತು ಸೈಬರ್ ಅಪರಾಧಗಳು ಯಥೇಚ್ಛಾವಾಗಿ ನಡೆಯುತ್ತಿವೆ. ಹಾಗೂ ಮೈಸೂರಿನಲ್ಲಿ ಕೆಲವು ಕಿಡಿಗೇಡಿಗಳು ಪೋಲೀಸ್ ಠಾಣೆಯ ಮೇಲೆ ಕಲ್ಲು ತೂರಾಟ ನಡೆಸಿ ಶಾಂತಿಗೆ ಭಂಗ ತಂದಿರುವ ಘಟನೆಗಳು ನಡೆಯುತ್ತಿವೆ ಇದರಿಂದ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕಾಪಾಡಲು ಸರ್ಕಾರ ದಿಟ್ಟ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆ.ಗಾಢನಿದ್ರೆಗೆ ಜಾರಿದ ರಾಜ್ಯ ಸರ್ಕಾರವನ್ನು ಸಾರ್ವಜನಿಕವಾಗಿ ಖಂಡಿಸಿ ಛಾಟಿ ಬೀಸುವುದು ಅವಶ್ಯಕವಾಗಿದೆ. ಈ ಹಿನ್ನಲೆಯಲ್ಲಿ ರಾಜ್ಯಪಾಲರು ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರ ತನ್ನ ಪಕ್ಷದ ಪ್ರಣಾಳಿಕೆಯಲ್ಲಿ ಘೋಷಿಸಿದ ಪಂಚ ಗ್ಯಾರಂಟಿಗಳನ್ನು ಯಥವತ್ತಾಗಿ ಅನುಷ್ಠಾನಗೊಳಿಸುವಂತೆ ಎಚ್ಚರಿಸಬೇಕೆಂದು ಆಗ್ರಹಿಸಿದ್ದಾರೆ.

## ಹೊಸೂರು ಗ್ರಾಮದಲ್ಲಿ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮ

• ಉದಯ ವಾಹಿನಿ, ಲಕ್ಷ್ಮೇಶ್ವರ



ಉದಯವಾಹಿನಿ ಚಿತ್ರ

ತಾಲ್ಲೂಕಿನ ಬಾಲೆ ಹೊಸೂರು ಗ್ರಾಮದಲ್ಲಿನ ಅತ್ಯಂತ ಪುರಾತನವಾದ ಶಾತವಾಹನರ ಕಾಲದ್ದೆಂದು ಹೇಳಲಾದ ದೇವಸ್ಥಾನವನ್ನು ಗ್ರಾಮಸ್ಥರು ಒಗ್ಗೂಡಿ ಶಿಲಾ ದೇವಾಲಯವನ್ನು ನಿರ್ಮಿಸುವ ಮೂಲಕ ತಮ್ಮ ಒಗ್ಗಟ್ಟನ್ನು ಸಾಬೀತು ಮಾಡಿದ್ದಾರೆ.

ಪೊದೆ ಮುಳ್ಳು ಕಂಟೆಗಳ ಮಧ್ಯದಲ್ಲಿ ಸಿಲುಕಿದ್ದ ಆಂಜನೇಯ ದೇವಸ್ಥಾನ ಶಿಥಿಲ ಗೊಂಡಿತ್ತು ಇದನ್ನು ಜೀರ್ಣೋದ್ಧಾರ ಮಾಡಲು ಗ್ರಾಮಸ್ಥರು ನಿರ್ಣಯ ಕೈಗೊಂಡು ಆರಂಭಿಸಿದಾಗ ಗ್ರಾಮದ ಜನತೆ ಸುಮಾರು 35 ಲಕ್ಷ ರೂಪಾಯಿ ಸುಮಾರು 25 ಲಕ್ಷ ರೂಪಾಯಿ ಭಕ್ತಾದಿಗಳ ಕಾಣಿಕೆ ಸುಮಾರು ಹನ್ನೊಂದು ಲಕ್ಷ ಹುಂಡಿ ಕಾಣಿಕೆ ಎರಡು ಲಕ್ಷ ಶಾಸಕರ ಅನುದಾನ ಸೇರಿಸಿ ನಾಲ್ಕು ವರ್ಷಗಳಲ್ಲಿ ಈ ದೇವಸ್ಥಾನವನ್ನು ಪೂರ್ಣಗೊಳಿಸಲಾಗಿದೆ ಎಂದು ಆಂಜನೇಯ ದೇವಸ್ಥಾನ ಸಮಿತಿಯ ಅಧ್ಯಕ್ಷರಾದ ಗೋಪಾಲ್ ರಾವ್ ಕುಬೇರ್ ತಿಳಿಸಿದರು. ಅವರು ದೇವಸ್ಥಾನದ ಆವರಣದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿ ಇಂದು ಶುಕ್ರವಾರ ದಿನಾಂಕ 7 ರಿಂದ 9ರವರೆಗೆ ದೇವಸ್ಥಾನದ ಕಾರ್ಯಕ್ರಮಗಳು ಜರಗಲಿವೆ ಎಂದರು ಶುಕ್ರವಾರ ಆಂಜನೇಯ ಸ್ವಾಮಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ, ಹೋಮ ಹವನ ಕಳಸಾರೋಹಣ ಕಾರ್ಯಕ್ರಮಗಳು ಜರುಗಲಿದ್ದು ದೇವಸ್ಥಾನದ ಉದ್ಘಾಟನೆಯನ್ನು ಫಕೀರ ದಿಂಗಾಲೇಶ್ವರ ಮಹಾಸ್ವಾಮಿಗಳು ನೆರವೇರಿಸಲಿದ್ದಾರೆ ಎಂದರು. ಸಂಜೆ 6 ಗಂಟೆಗೆ ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮ ಜರುಗಲಿದ್ದು ರಾಮಪ್ಪ ಹಾವನೂರ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ ದಾನಿಗಳಿಗೆ ಸನ್ಮಾನ ಸಮಾರಂಭ ಧಾರವಾಡದ ಆನಂದ ಕಂದ ಗೆಳೆಯರ ಬಳಗ ಹಾಗೂ ಗನಾಚಾರಿ ಸಹೋದರರಿಂದ ಸಂಗೀತ ಕಾರ್ಯಕ್ರಮ ಜರಗಲಿದೆ ಎಂದರು. ದಿ.8 ರಂದು ಬೆಳಿಗ್ಗೆ ಪವಮಾನ ಹೋಮ ಪಂಚಾಮೃತ ಅಭಿಷೇಕ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಮತ್ತು ಗೋಪಾಲ ತುಂಬಿಸುವುದು ಜರಗಲಿದೆ ಸಂಜೆ ಆರಕ್ಕೆ ಚೆನ್ನವ ಮೈಲಾರಿ ಅವರು ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ದಾನಿಗಳಿಗೆ ಸನ್ಮಾನ ಹಾಗೂ ಪಂಡಿತ್ ಕಿಶೋರ್ ಕುಲಕರ್ಣಿ ಇವರಿಂದ ಕೀರ್ತನೆ ಜರುಗಲಿದೆ. ರಾಮಣ್ಣ ಹಾವನೂರ ಶಿವಣ್ಣ ಕಬ್ಬೆರ ಚೆನ್ನವ್ವ ಮೈಲಾರಿ ಸೋಮಯ್ಯ ಚನ್ನಾಪುರ ಮಠ ಬಸವ ರೆಡ್ಡಿ ಹನುಮರೆಡ್ಡಿ ಎಲ್ಲಪ್ಪ ಸುರಣಿಗಿ ನಿಂಗಪ್ಪ ಮಡಿವಾಳರ ಬಸವರಾಜ್ ಅಶೋಕ್ ಮಾಗಿ ಸಿದ್ದಲಿಂಗಯ್ಯ ಸ್ವಾಮಿ, ಪಶುಪತಿಮಠ ಸೇರಿದಂತೆ ಅನೇಕರಿದ್ದರು.

> ದಿನಾಂಕ 9 ರಂದು ರವಿವಾರ ಲೋಕಕಲ್ಯಾಣಾರ್ಥವಾಗಿ ಬೆಳಿಗ್ಗೆ 8.30 ಕ್ಕೆ ಸರ್ವ ಜನಾಂಗದಿಂದ 108 ಸತ್ಯನಾರಾಯಣ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು ಸಂಜೆ ಆರು ಗಂಟೆಗೆ ಧಾರ್ಮಿಕ ಸಭೆ ಜರುಗಲಿದ್ದು ಫಕೀರ ದಿಂಗಾಲೇಶ್ವರ ಶ್ರೀಗಳು ಸಾನಿಧ್ಯ ವಹಿಸಲಿದ್ದು ಉದ್ಘಾಟನೆಯನ್ನು ಸಚಿವ ಎಚ್ ಕೆ ಪಾಟೀಲ್ ನಿರ್ವಹಿಸಲಿದ್ದಾರೆ ಶ್ರೀ ಮಾರುತಿ ಪ್ರಸಾದ ನಿಲಯದ ಅಡಿಗಲನ್ನು ಸಂಸದ ಬಸವರಾಜ ಬೊಮ್ಮಾಯಿ ನೆರವೇರಿಸಲಿದ್ದಾರೆ ಅಧ್ಯಕ್ಷತೆಯನ್ನು ಸಮಿತಿಯ ಗೋಪಾಲ್ ರಾವ್ ಕುಬೇರ್ ವಹಿಸಲಿದ್ದಾರೆ ಮುಖ್ಯ ಅತಿಥಿಗಳಾಗಿ ಚಂದ್ರು ಲಮಾಣಿ ಸೇರಿದಂತೆ ಮಾಜಿ ಶಾಸಕರು ಪಕ್ಷಗಳ ಮುಖಂಡರು ಯುವ ಮುಖಂಡರು ಜಿಲ್ಲಾ ಪಂ. ತಾಲ್ಲೂಕ ಪಂಚಾಯಿತಿ ಮಾಜಿ ಸದಸ್ಯರು ಆಗಮಿಸಿದ್ದಾರೆ

## ಗ್ರಾಮೀಣಾಭಿವೃದ್ಧಿಗೆ ಎನ್‌ಎಸ್‌ಎಸ್ ಪೂರಕ

• ಉದಯ ವಾಹಿನಿ, ಹೊಳೆನರಸೀಪುರ



ಉದಯವಾಹಿನಿ ಚಿತ್ರ

ಗ್ರಾಮೀಣ ಪ್ರದೇಶಗಳಲ್ಲಿ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಕೈಗೊಳ್ಳುವ ಕಾರ್ಯಗಳು ಈಗಾಗಲೇ ಜನರ ಮನಗೆದ್ದಿದ್ದು, ಅವರು ನಡೆಸುವ ಅರಿವಿನ ಕಾರ್ಯಕ್ರಮಗಳು ಹಳ್ಳಿಗಳ ಮುಗ್ಧ ಜನರಿಗೆ ಅಗತ್ಯವಾಗಿದೆ. ಈ ಶಿಬಿರದಲ್ಲಿ ಗ್ರಾಮೀಣಾಭಿವೃದ್ಧಿಗೆ ಪೂರಕವಾದ ಕಾರ್ಯಗಳನ್ನು ಆಯೋಜಿಸಬೇಕು. ಇದಕ್ಕೆ ಪೂರಕವಾಗಿ ಗ್ರಾಮದ ಜನರು ಸಹಕಾರ ನೀಡಬೇಕು ಎಂದು ಶಾಸಕ ಎಚ್.ಡಿ.ರೇವಣ್ಣ ಸಲಹೆ ನೀಡಿದರು.

ತಾಲ್ಲೂಕಿನ ಎಲೇಚಾಗಹಳ್ಳಿಯಲ್ಲಿ ಪಟ್ಟಣದ ಗೃಹವಿಜ್ಞಾನ ಕಾಲೇಜಿನ ಎನ್‌ಎಸ್‌ಎಸ್ ಘಟಕದ ವತಿಯಿಂದ ಆಯೋಜಿಸಲಾಗಿದ್ದ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಹೆಚ್ಚಿಗೆ ಬಿಸಿಲಿದೆ. ಆದ್ದರಿಂದ ಹೆಚ್ಚಿಗೆ ನೀರು ಕುಡಿಯಿರಿ, ಅಗತ್ಯ ಮುಂಜಾಗ್ರತೆ ವಹಿಸಿಕೊಂಡು, ಖುಷಿಯಿಂದ ಶಿಬಿರದಲ್ಲಿ ಭಾಗಿಗಳಾಗಿರಿ ಎಂದರು. ತಾಲ್ಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷ ನಂಜುಂಡಪ್ಪ ಮಾತನಾಡಿ, ನಮ್ಮ ಊರಿನಲ್ಲಿ ಈ ಶಿಬಿರ ಆಯೋಜಿಸಿರುವುದು ಸಂತಸದ ವಿಚಾರ. ನಿತ್ಯ ನಡೆಯುವ ಕಾರ್ಯಕ್ರಮಗಳಲ್ಲಿ ಗ್ರಾಮದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಇಂತಹ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವ ಮೂಲಕ ಗ್ರಾಮದ ಘನತೆ ಕಾಪಾಡಬೇಕು ಎಂದು ಮನವಿ ಮಾಡಿದರು. ಐಚನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷ ಚಂದ್ರಶೇಖರಯ್ಯ ಮಾತನಾಡಿ, ಶಾಸಕರು ಗ್ರಾಮದ ಅಭಿವೃದ್ಧಿಗೆ ಶ್ರಮಿಸುವುದರ ಜೊತೆಗೆ ಇಂತಹ ಶೈಕ್ಷಣಿಕ ಕಾರ್ಯಕ್ರಮಗಳು ನಮ್ಮ ಗ್ರಾಮದಲ್ಲಿ ಆಯೋಜನೆಗೊಳ್ಳಲು ಕಾರಣೀಕರ್ತರು. ಈ ಶಿಬಿರವನ್ನು ಎಲ್ಲರೂ ಸೇರಿ ಯಶಸ್ವಿಗೊಳಿಸೋಣ ಎಂದರು. ಪ್ರಾಂಶುಪಾಲೆ ಪ್ರೊ.ಆಶಾಜ್ಯೋತಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಎನ್‌ಎಸ್‌ಎಸ್ ಅಧಿಕಾರಿ ಪಕೀರಮ್ಮ ಮುರುಗೋಡು ಪ್ರಾಸ್ತಾವಿಕವಾಗಿ ಮಾತನಾಡಿ, ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಡಾ.ಕೃಷ್ಣಮೂರ್ತಿ ಸ್ವಾಗತಿಸಿದರು. ಅಮೃತ ಮತ್ತು ತಂಡದವರು ನಿರೂಪಿಸಿದರು. ಎನ್‌ಎಸ್‌ಎಸ್ ಸಹ ಕಾರ್ಯಕ್ರಮ ಅಧಿಕಾರಿ ಜಗದೀಶ್ ವಂದಿಸಿದರು. ಗ್ರಾಮದ ಮುಖಂಡರಾದ ಮಹೇಂದ್ರ, ಗುರುಮೂರ್ತಿ, ಅಂಗಡಿ ಮಂಜಣ್ಣ, ಕಾಲೇಜಿನ ಬೋಧಕರಾದ ಗಣೇಶ್ ಆಶೋಕ್, ರಾಘವೇಂದ್ರ, ನಾಗೇಂದ್ರ, ಕರಿಯಪ್ಪ ಲಮಾಣಿ, ಶಿವು ಮುಂತಾದವರು ಹಾಜರಿದ್ದರು.

## ಪುರಸಭೆ ಪ್ರಥಮ ಸಾಮಾನ್ಯ ಸಭೆ ಪ್ರಮುಖ ವಿಷಯಗಳ ಕುರಿತು ಚರ್ಚೆ

### ಕೆಂಭಾವಿ ಪುರಸಭೆಗೆ ಸರ್ವ ಸದಸ್ಯರನ್ನೊಳಗೊಂಡು ಸಾಮಾನ್ಯ ಸಭೆಯ ಯಶಸ್ವಿ

• ಉದಯವಾಹಿನಿ, ಕೆಂಭಾವಿ

ಉದಯವಾಹಿನಿ ಚಿತ್ರ



ಸುಮಾರು ಮೂರು ವರ್ಷಗಳಿಂದ ಒಂದು ಸಾಮಾನ್ಯ ಸಭೆಯು ಕಾಣದೆ ಮರುಗುತ್ತಿದ್ದ ಕೆಂಭಾವಿ ಪುರಸಭೆಗೆ ಸರ್ವ ಸದಸ್ಯರನ್ನೊಳಗೊಂಡು ಸಾಮಾನ್ಯ ಸಭೆಯ ಯಶಸ್ವಿಯಾಗಿ ನಡೆಯಿತು. ಪುರಸಭೆಗೆ ಜೀವಬಂದಂತಾಗಿದೆ.ಇಲ್ಲಿನ ಪುರಸಭೆ ಸಭಾಭವನದಲ್ಲಿ ಪುರಸಭೆ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಹಾಗೂ ಮುಖ್ಯ ಅಧಿಕಾರಿಗಳು ಮತ್ತು ಸರ್ವ ಸದಸ್ಯರನ್ನೊಳಗೊಂಡು ಸಾಮಾನ್ಯ ಸಭೆ ಜರುಗಿತು.

ಸಭೆಯಲ್ಲಿ ಸದಸ್ಯರೊಬ್ಬರು ಮಂಡಿಸಿದ್ದ ಶೌಚಾಲಯ, ವಿದ್ಯುತ್ತ, ಕುಡಿಯುವ ನೀರು, ವಿಷಯದ ಮೇಲೆ ಸರ್ವ ಸದಸ್ಯರು ಚರ್ಚೆ ಮಾಡಿದ್ರು. ವಾರ್ಡ್ ನಂಬರ್ 18ರಲ್ಲಿ ಅಂಗನವಾಡಿ ವಿದ್ಯುತ್ ವ್ಯವಸ್ಥೆ ಕಲ್ಪಿಸಲು ಸದಸ್ಯರು ಮನವಿ ಮಾಡಿದರು. ವಾರ್ಡ್ ನಂಬರ್ 23ರಲ್ಲಿ ಶೌಚಾಲಯಕ್ಕೆ ತುಂಬಾ ಕಷ್ಟವಾಗುತ್ತಿದ್ದು ಅದನ್ನು ಕೂಡಲೇ ಬಗೆಹರಿಸಲು ಮಹಿಳಾ ಸದಸ್ಯರು ಮನವಿ ಮಾಡಿದರು. ಸಭೆಯಲ್ಲಿ ಒಟ್ಟು 06 ವಿಷಯಗಳ ಮೇಲೆ ಚರ್ಚೆ ನಿಗದಿಪಡಿಸಲಾಗಿತ್ತು. ಕೆಲವೊಂದು ವಾರ್ಡಿನ ಮಹಿಳಾ ಸದಸ್ಯರು ಲಿಖಿತ ರೂಪದಲ್ಲಿ ಪತ್ರದೊಂದಿಗೆ ಸಮಸ್ಯೆಗಳನ್ನು ಚರ್ಚೆಗೆ ಆಹ್ವಾನಿಸಿದರು. ಒಟ್ಟಾರೆಯಾಗಿ ಹೇಳುವುದಾದರೆ ಕೆಂಭಾವಿ ಪುರಸಭೆಯ ಮೊದಲ ಸಾಮಾನ್ಯ ಸಭೆಯು ಮೂಲಭೂತ ಸೌಕರ್ಯಗಳ ಸಮಸ್ಯಗಳ ಗೊಂಚಲನ್ನು ಹಿಡಿದಿಟ್ಟಂತಾಗಿದೆ. ಇಂಥ ಕೆಲವೊಂದು ಜ್ವಲಂತ ಸಮಸ್ಯೆಗಳಿಗೆ ಕೆಂಭಾವಿ ಪುರಸಭೆ ಹೇಗೆ ಕಾರ್ಯಭಾರ ಮಾಡಲಿದೆ ಸಮಸ್ಯೆಗೆ ಪರಿಹಾರ ಹೇಗೆ ಕಂಡುಕೊಳ್ಳಲಿದೆ ಎನ್ನುವುದು ಕಾದು ನೋಡಬೇಕಾಗಿದೆ.

ಈ ಸಂದರ್ಭದಲ್ಲಿ ಪುರಸಭಾ ಅಧ್ಯಕ್ಷ ರಹಮಾನ್ ಪಟೇಲ್ ಉಪಾಧ್ಯಕ್ಷ ಲಕ್ಷ್ಮಿಬಾಯಿ ಕಂಬಾರ್, ಮುಖ್ಯ ಅಧಿಕಾರಿ ಮೊಮ್ಮದ್ ಯುಸೂಪ್ ಪುರಸಭೆ ಸದಸ್ಯರಾದ ಶ್ರೀಮತಿ ಗಿರಿಜಾ ರಮೇಶ ಕೊಡಗಾನೂರ ರವಿಶಂಕರ ಸೊನ್ನದ, ಶ್ರೀಮತಿ ರಮ್ಯ ರಾಘವೇಂದ್ರರಾವ್ ದೇಶಪಾಂಡೆ,ಸುದಾಕರ ದಿಗ್ಗಾವಿ, ಶ್ರೀಮತಿ ಸಾಧಿಯಾಬೇಗಂ ಅನ್ವರ ಪಾಷಾ ನಾಶಿ, ಶ್ರೀಮತಿ ಬೇಗಂಬಿ ಮಮ್ಮದ್ ಆದಂ ನಾಶಿ, ಆರೀಫ ಹುಸೇನ ಖಾಜಿ,ಮಲ್ಲಿನಾಥ ಪೋಲಿಸ ಪಾಟೀಲ, ಶ್ರೀಮತಿ ಪ್ರಿಯಾ ರಾಮನಗೌಡ ಪೋಲಿಸ ಪಾಟೀಲ, ಶರಣಪ್ಪ ಯಾಳಗಿ, ರಾಘವೇಂದ್ರ ಕವಲ್ದಾರ,ಚಳಿಗೆಪ್ಪ ಮ್ಯಾಗೇರಿ ಶ್ರೀಮತಿ ಪಾರ್ವತಿ ದೇವಪ್ಪ ಹಂದ್ರಾಳ, ಶ್ರೀಮತಿ ಶಾರದಾ ಭೀಮನಗೌಡ ಮಲ್ಕಾಪೂರ, ರಾಜು ಬಾಂಬೆ, ರಾಮಕೃಷ್ಣ,ನಾನಾಗೌಡ ಹಬ್ಬು, ಶ್ರೀಮತಿ ದೇವಮ್ಮ ರಾಯಪ್ಪ ದೊರಿ, ಶ್ರೀಮತಿ ಕಾಳಮ್ಮ ಭೀಮಪ್ಪ ಮೇಲಿನಮನಿ. ನಾಮ ನಿರ್ದೇಶಕ ಸದಸ್ಯರಾದ ದೇವೇಂದ್ರಪ್ಪ ಟನಕೆದಾರ, ಶಿವಶಂಕರ್ ಕನಪುರ್, ಪರಶುರಾಮ್ ಬಳಬಟ್ಟಿ, ದಾವಲ್ ಸಾಬ್ ನಾಸಿ, ಶ್ರೀಮತಿ ಸಂಗಮ್ಮ ಯರಗಲ್, ಪುರಸಭೆ ಸಿಬ್ಬಂದಿಗಳು, ಉಪಸ್ಥಿತರಿದ್ದರು.

> **ನೋಟಿಸ್ ನೀಡಲು ಮನವಿ**
>
> ವಾರ್ಡ್ ನಂಬರ್ 08 ಮತ್ತು 09 ರ ಸದಸ್ಯರು ಚರಂಡಿಗಳು ಸ್ವಚ್ಛಗೊಳಿಸಲು ಮನವಿ ಮಾಡಿದರು.ಸಾಮಾನ್ಯವಾಗಿ ಎಲ್ಲಾ ಸದಸ್ಯರು ಪ್ರಥಮ ಸಾಮಾನ್ಯ ಸಭೆಯಲ್ಲಿ ಚರಂಡಿ ಮೂಲಭೂತ ಸೌಕರ್ಯ ವಿದ್ಯುತ್ ದೀಪಗಳ ಅಳವಡಿಕೆ, ಕುಡಿಯುವ ನೀರಿನ ಸಮಸ್ಯೆ, ಕುರಿತು ಚರ್ಚಿಸಲಾಯಿತು. ಹಾಗೆಯೇ ಕೆಲವೊಂದು ಅಧಿಕಾರಿಗಳು ಬೇಜವಾಬ್ದಾರಿತನದಿಂದ ವರ್ತಿಸುತ್ತಿರುವ ಕುರಿತು ಸಭೆಯಲ್ಲಿ ಗಮನ ಸೆಳೆದರು. ಅಂತವರಿಗೆ ನೋಟಿಸ್ ನೀಡಲು ಮನವಿ ಮಾಡಿದರು. ಅಮೃತ 2 ಯೋಜನೆಯ ಕುರಿತು ಕೆಲವು ಸದಸ್ಯರು ಚರ್ಚೆ ಮಾಡಿದರು. ಹಾಗೆ ಆಸ್ತಿ ತೆರಿಗೆಯ ಬಗ್ಗೆ ಈ ಖಾತೆಗಳ ಬಗ್ಗೆ ಸಭೆಯಲ್ಲಿ ಚರ್ಚೆ ಮಾಡಿದರು .

## ಎನ್‌ಸಿಸಿ ಬೆಟಾಲಿಯನ್‌ಗೆ ಮಾಜಿ ಸೈನಿಕರ ನೇಮಕ : ಅರ್ಜಿ ಆಹ್ವಾನ

• ಉದಯ ವಾಹಿನಿ, ಚಿತ್ರದುರ್ಗ

ಕರ್ನಾಟಕ ಮತ್ತು ಗೋವಾ ಎನ್.ಸಿ.ಸಿ. (National cadet corps) ನಿರ್ದೇಶನಾಲಯವು ಬೆಂಗಳೂರು, ಮೈಸೂರು, ಮಂಗಳೂರು, ಬೆಳಗಾವಿ, ರಾಯಚೂರು, ಶಿವಮೊಗ್ಗದ ಎನ್.ಸಿ.ಸಿ. ಬೆಟಾಲಿಯನ್‌ಗಳಿಗೆ ಹೆಚ್ಚುವರಿ ತರಬೇತಿ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಮಾಜಿ ಸೈನಿಕರನ್ನು ನೇಮಿಸಿಕೊಳ್ಳಲು ಉದ್ದೇಶಿಸಿದ್ದು ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.ಮಾಜಿ ಸೈನಿಕರನ್ನು ಎನ್‌ಸಿಸಿ ಬೆಟಾಲಿಯನ್‌ಗಳಿಗೆ ಹೆಚ್ಚುವರಿ ಸಿಬ್ಬಂದಿಗಳಾಗಿ ಹೊರಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಉದ್ದೇಶಿಸಲಾಗಿದ್ದು, ಭೂಸೇನೆಯಿಂದ ಆಕ್ಟೋಬರ್ 2022ರ ನಂತರ ನಿವೃತ್ತರಾಗಿರುವ ಜೆ.ಸಿ.ಒ (ಸುಬೇದಾರ್ ನಾಯಬ್ ಸುಬೇದರ್), ಹವಾಲ್ದಾರ್ ರ್ಯಾಂಕ್‌ನ (ಎಮ್‌ಎಸಿಪಿ ಹವಾಲ್ದಾರಗಳನ್ನು ಪರಿಗಣಿಸುವುದಿಲ್ಲ) ಮಾಜಿ ಸೈನಿಕ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಸೈನ್ಯದಲ್ಲಿ ದುರ್ನಡತೆ, ಯಾವುದೇ ವೈದ್ಯಕೀಯ ಕಾರಣಗಳಿಂದ ಸೈನ್ಯದಿಂದ ಬಿಡುಗಡೆಗೊಂಡಿರುವವರು ಅರ್ಜಿ ಸಲ್ಲಿಸಲು ಅರ್ಹರಲ್ಲ. ಆಸಕ್ತ ಮಾಜಿ ಸೈನಿಕರು 13 ಮಾರ್ಚ್ 2025 ರೊಳಗೆ ಅರ್ಜಿ ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಇಮೇಲ್ : itdirpc.kardte@nccindia.nic.in ಸಂಪರ್ಕಿಸಬಹುದು. ಅರ್ಜಿ ಸಲ್ಲಿಸಲು https://nis.bisag-n.gov.in/nis/downloads-public ಜಾಲತಾಣವನ್ನು ಬಳಸಬೇಕು. ನಿರ್ದೇಶನಾಲಯ (ಕರ್ನಾಟಕ ಮತ್ತು ಗೋವಾ) ಕೆಎಸ್‌ಸಿಎಮ್‌ಎಫ್ ಬಿಲ್ಡಿಂಗ್, 4ನೇ ಮಹಡಿ ನಂ-8 ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು-560001 ಕ್ಕೆ ಸಂಪರ್ಕಿಸಬಹುದಾಗಿದೆ ಎಂದು ಶಿವಮೊಗ್ಗದ ಸೈನಿಕ ಕಲ್ಯಾಣ ಪುನರ್ವಸತಿ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಕ್ಕಳ ವಯಸ್ಸು 21 ವರ್ಷ ತಲುಪುತ್ತಿದ್ದಂತೆ ಅವರಿಗೆ ಪ್ರತ್ಯೇಕ ವೀಸಾ ಪಡೆಯುವುದು ಅನಿವಾರ್ಯ

# ಅಮೆರಿಕದಲ್ಲಿರುವ ಭಾರತೀಯರ ಮಕ್ಕಳಿಗೆ ಸಂಕಷ್ಟ

**ಅಮೆರಿಕ:** ಉತ್ತಮ ಜೀವನ ಕಟ್ಟಿಕೊಳ್ಳೇಕು, ಒಳ್ಳೇ ಕಂಪನಿಯಲ್ಲಿ ಒಳ್ಳೇ ಸಂಬಳದ ಕೆಲ್ಸ ತಗೊಂಡು ಅಲ್ಲೇ ಸೆಟ್ಲ್ ಆಗಿಬಿಡಬೇಕು ಅಂದ್ಕೊಂಡು ಭಾರತದಿಂದ ಅಮೆರಿಕಕ್ಕೆ ಹೋಗಿರುವ ಲಕ್ಷಾಂತರ ಜನರಿದ್ದಾರೆ. ಅವರಲ್ಲಿ ಬಹುತೇಕರು ಒಳ್ಳೇ ಬದುಕು ಕಟ್ಟಿಕೊಂಡಿದ್ದಾರೆ.

ಆದ್ರೆ, ಹೆಚ್ಚಿನವರಿಗೆ ಅಧಿಕೃತವಾಗಿ ಅಮೆರಿಕನ್ ಪ್ರಜೆಯಾಗೋದಕ್ಕೆ ಇನ್ನೂ ಗ್ರೀನ್ ಕಾರ್ಡ್ ಸಿಕ್ಕಿಲ್ಲ. ಕೆಲಸದ ಬಲದಿಂದ ಸಿಕ್ಕಿರುವ ಎಚ್1 ಬಿ ವೀಸಾ ಬಳಸಿಕೊಂಡು ಹತ್ತಾರು ವರ್ಷಗಳಿಂದ ಅಲ್ಲೇ ಬದುಕು ಸಾಗಿಸ್ತಿದ್ದಾರೆ. ಹಾಗೇ ಅವರ ಮಕ್ಕಳು ಕೂಡ ಅಮೆರಿಕದ ವಾತಾವರಣದಲ್ಲೇ ಬೆಳೆಯುತ್ತಿದ್ದಾರೆ. ಆದ್ರೆ, ಆ ಮಕ್ಕಳ ವಯಸ್ಸು 21 ವರ್ಷಕ್ಕೆ ಹತ್ತಿರ ಆಗ್ತಿದ್ದಂತೆ ಆತಂಕ ಜೋರಾಗ್ತಿದೆ. ಪಾಲಕರಿಗೆ ಗ್ರೀನ್ ಕಾರ್ಡ್ ಸಿಗದೆ, ಮಕ್ಕಳಿಗೆ ಅಮೆರಿಕದಲ್ಲೇ ಉಳಿಯೋಕೆ ಆಗಲ್ಲ. ಅಪ್ಪ-ಅಮ್ಮನಿಗೆ ಇರುವ ಎಚ್1 ಬಿ ವೀಸಾ ಆಧಾರದ ಮೇಲೆ ಮಕ್ಕಳಿಗೆ ಕೊಟ್ಟಿದ್ದ ಎಚ್-4 ವೀಸಾ ರದ್ದಾಗುತ್ತೆ. ಅಂದ್ರೆ, ಅಂಥ ಮಕ್ಕಳ ಸ್ಥಿತಿ ನಿಜಕ್ಕೂ ಅತಂತ್ರವಾಗಿ ಹೋಗುತ್ತೆ.

ಡೊನಾಲ್ಡ್ ಟ್ರಂಪ್ ಅಮೆರಿಕದ ಅಧ್ಯಕ್ಷರಾದ ಮೇಲೆ ವಲಸೆ ನೀತಿಗಳು, ಅಮೆರಿಕದ ಪ್ರಜಾಪ್ರಭುತ್ವದ ಪಡೆಯುವ ನಿಯಮಗಳು ಹಾಗೂ ವೀಸಾಗೆ ಸಂಬಂಧಿಸಿದಂತೆ ಹಲವು ಬದಲಾವಣೆಗಳು ಆಗುತ್ತಿವೆ. ಸೂಕ್ತ ಸದಾಖಲೆಗಳಿಲ್ಲದೆ ಅಮೆರಿಕದಲ್ಲಿರುವ ವಿದೇಶಗಳ ಅಕ್ರಮ ವಲಸಿಗರನ್ನು ಹುಡುಕಿ ಹುಡುಕಿ ಅವರನ್ನು ಬಂಧಿಸಿ, ವಾಪಸ್ ಅವರ ದೇಶಕ್ಕೆ ಬಿಟ್ಟು ಬರಲಾಗುತ್ತಿದೆ.

ಈಗ ಎಚ್-4 ವೀಸಾ ಅಡಿಯಲ್ಲಿ ಅಮೆರಿಕದಲ್ಲಿರುವವರೂ ಕೂಡ ವಾಪಸ್ ಅವರ ಮೂಲ ಸ್ಥಾನಕ್ಕೆ ಗಡಿಪಾರು ಆಗಬೇಕಾದ ಅನಿವಾರ್ಯತೆ ಎದುರಾಗೋ ಆತಂಕವು ಮನೆ ಮಾಡಿದೆ. ಅದರಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಭಾರತೀಯರೂ ಇದ್ದಾರೆ. ಏನಂದ್ರೆ, ಭಾರತದಿಂದ ಎಚ್1 ಬಿ ವೀಸಾ ಆಧಾರದ ಮೇಲೆ ಅಮೆರಿಕದಲ್ಲಿ ಇದ್ದವರಿಗೆ, ಅವರ ಮಕ್ಕಳನ್ನು ತಮ್ಮ ಜೊತೆಯಲ್ಲೇ ಇರಿಸಿಕೊಳ್ಳೋಕೆ ಅಮೆರಿಕದಿಂದ ಎಚ್-4 ಹೆಸರಿನ ವೀಸಾ ಕೊಡಲಾಗುತ್ತೆ. ಆದ್ರೆ, ಆ ಮಕ್ಕಳ ವಯಸ್ಸು 21 ವರ್ಷ ತಲುಪುತ್ತಿದ್ದಂತೆ ಅವರಿಗೆ ಪ್ರತ್ಯೇಕ ವೀಸಾ ಪಡೆಯುವುದು ಅನಿವಾರ್ಯ ಅಷ್ಟರಲ್ಲಿ ಅವರ ಪಾಲಕರು ಗ್ರೀನ್ ಕಾರ್ಡ್ ಪಡೆದಿದ್ದರೆ, ಮಕ್ಕಳೂ ಕೂಡ ಅಮೆರಿಕದ ಪ್ರಜೆಯಾಗಿ ಮುಂದುವರಿಯೋಕೆ ಅವಕಾಶ ಇರುತ್ತೆ. ಅಥವಾ ಎರಡು ವರ್ಷಗಳಲ್ಲಿ ಮಕ್ಕಳು ಪ್ರತ್ಯೇಕ ವೀಸಾ ಪಡೆಯೋದಕ್ಕೆ ಅವಕಾಶ ಇತ್ತು.

### ಏನಾಗುತ್ತೆ ಮಕ್ಕಳ ಭವಿಷ್ಯ ?

**ಗ್ರೀನ್‌ಕಾರ್ಡ್ ಪಡೆಯೋಕೆ ನಿಯಮಗಳೂ ಕಠಿಣ ಆಗ್ತಿವೆ, ಹಾಗೇ ಹತ್ತಾರು ವರ್ಷ ವೇಯ್ಟಿಂಗ್ ಪಿರಿಯಡ್ ಇರೋದ್ರಿಂದ ಅಮೆರಿಕ ಪ್ರಜೆ ಆಗೋಕೆ ಸಾಧ್ಯವಾಗದೆ ಹೋಗಬಹುದು. ಅಲ್ಲಿನ ಕಂಪನಿಗಳಲ್ಲಿ ಕೆಲಸ ಮಾಡ್ತಿರೋರು ನಿವೃತ್ತಿ ಪಡೆದು ಭಾರತಕ್ಕೆ ವಾಪಸ್ ಆಗಿ, ಇಲ್ಲಿ ಬದುಕು ಸಾಗಿಸಬಹುದು. ಆದ್ರೆ, ಚಿಕ್ಕ ವಯಸ್ಸಿನಲ್ಲೇ ಅಮೆರಿಕದ ವಾತಾವರಣ, ಅಲ್ಲಿನ ಫ್ರೆಂಡ್ಸ್, ಅಲ್ಲಿ ಓದು, ಎಲ್ಲಾ ಅಮೆರಿಕವೇ ಆಗಿರುವ ಮಕ್ಕಳಿಗೆ ಭಾರತ ಕೂಡ ಮತ್ತೊಂದು ಫಾರಿನ್ ಕಂಟ್ರಿಯೇ ಆಗಿರುತ್ತೆ.**

**ಅಕಸ್ಮಾತ್ ಮಕ್ಕಳ ವಯಸ್ಸು 21 ವರ್ಷ ಆಗಿದ್ರೂ, ಅವರೇನಾದ್ರೂ ಕಾಲೇಜುಗಳು ವಿದ್ಯಾರ್ಥಿಯಾಗಿದ್ರೆ ಅಥವಾ ಯಾವುದೇ ಕೋರ್ಸ್ ಮಾಡ್ತಿದ್ರೆ ಎಫ್-1 ಸ್ಟೂಡೆಂಟ್ ವೀಸಾ ಪಡೆಯೋಕೆ ಅವಕಾಶ ಇರುತ್ತೆ. ಅದೂ ಕೂಡ ಅವರ ವಿದ್ಯಾಭ್ಯಾಸ ಮುಗಿಯೋವರೆಗೂ. ಅಷ್ಟೇ ಅಲ್ಲ. ಆ ವಿದ್ಯಾರ್ಥಿಯು ಅವತ್ತಿನಿಂದಲೇ ವಿದೇಶಿ ವಿದ್ಯಾರ್ಥಿ ಅಂತ ಪರಿಗಣಿಸಲಾಗುತ್ತೆ. ಎಷ್ಟೇ ವರ್ಷದಿಂದ ಅಮೆರಿಕದಲ್ಲೇ ಓದಿ, ಅಲ್ಲೇ ಬೆಳೆದಿದ್ರೂ, ಹಿಂದಿನಿಂದ ಸಿಗುತ್ತಿದ್ದ ಸರಕಾರದ ಎಲ್ಲಾ ಹಣಕಾಸು ನೆರವುಗಳೂ ಬಂದ್ ಆಗ್ತವೆ. ಹೊರಗಿನವರು ಕಟ್ಟುವಷ್ಟು ಫೀಸ್ ಕಟ್ಟಬೇಕಾಗುತ್ತೆ. ಉದಾಹರಣೆಗೆ, ಅಮೆರಿಕದ ವಿದ್ಯಾರ್ಥಿ ಕಾಲೇಜಿಗೆ 9 ಲಕ್ಷ ರೂಪಾಯಿ ಫೀಸ್ ಕಟ್ಟಿದ್ರೆ, ಎಚ್-4 ವೀಸಾ ಎಕ್ಸ್‌ಪೈರ್ ಆದ ವಿದ್ಯಾರ್ಥಿಯು ಸುಮಾರು 40 ಲಕ್ಷ ರೂಪಾಯಿ ಕಟ್ಟಬೇಕಾಗುತ್ತೆ.**




### ಮಿನಿ ನ್ಯೂಸ್

## ಐಟಿ ಕಂಪನಿಯೊಳಗೆ ಮನಬಂದಂತೆ ಗುಂಡು ಹಾರಿಸಿದ ಮಾಜಿ ಸಂಸದರ ಮೊಮ್ಮಗ

**ಲಕ್ನೋ:** ಮಾಜಿ ಸಂಸದರ ಮೊಮ್ಮಗ ಐಟಿ ಕಂಪನಿಯೊಳಗೆ ಮನಬಂದಂತೆ ಗುಂಡು ಹಾರಿಸಿ ಪಿಸ್ತೂಲ್‌ನ ಹಿಂಬದಿಯಿಂದ ಇಬ್ಬರ ಮೇಲೆ ಹಲ್ಲೆ ನಡೆಸಿರುವ ಘಟನೆ ಉತ್ತರ ಪ್ರದೇಶದ ಲಕ್ನೋದಲ್ಲಿ ನಡೆದಿದೆ. ಐಟಿ ಕಂಪನಿಯೊಳಗೆ ವ್ಯಕ್ತಿಯೊಬ್ಬ ಕುಡಿದ ಮತ್ತಿನಲ್ಲಿ ಗುಂಡು ಹಾರಿಸಿದ್ದಾನೆ. ಆರೋಪಿಯನ್ನು ವಿವೇಕ್ ಭದೌರಿಯಾ ಎಂದು ಗುರುತಿಸಲಾಗಿದ್ದು, ಆತ ಮಾಜಿ ಸಂಸದ ಅರ್ಜುನ್ ಸಿಂಗ್ ಅವರ ಮೊಮ್ಮಗ ಎಂದು ಹೇಳಲಾಗಿದೆ. ವಿವೇಕ್‌ನಲ್ಲಿ ಪೊಲೀಸರು ಕೂಡಲೇ ಬಂಧಿಸಿದ್ದಾರೆ. ಕಂಪನಿಯ ಕಚೇರಿಯ ಬಳಿ ಭದೌರಿಯಾ ಇದ್ದಕ್ಕಿದ್ದಂತೆ ಬಂದು ಗುಂಡು ಹಾರಿಸಿದ್ದ, ಆರೋಪಿಯು ಕಚೇರಿ ನಿರ್ವಾಹಕ ಅನುಜ್ ಕುಮಾರ್ ವೈಶ್ಯ ಮತ್ತು ಅಮಿತೇಶ್ ಶ್ರೀವಾಸ್ತವ ಅವರ ಮೇಲೆ ತನ್ನ ಪಿಸ್ತೂಲಿನ ಹಿಂಭಾಗದಿಂದ ಹಲ್ಲೆ ನಡೆಸಿದ್ದಾನೆ. ಗುಂಡು ಹಾರಿಸುವ ಮೊದಲು ಅರ್ಧ ಡಜನ್ ಉದ್ಯೋಗಿಗಳಿಗೆ ದೈಹಿಕವಾಗಿ ಶಿಕ್ಷೆ ಕೊಟ್ಟಿದ್ದಾನೆ.

# ಭಾರತದೊಂದಿಗೆ ಒಗ್ಗಟ್ಟಿನ ಮಂತ್ರ ಜಪಿಸಿದ ಚೀನಾ

**ಬೀಜಿಂಗ್:** ಇದು ನಿಜಕ್ಕೂ ಅಪರೂಪದಲ್ಲೇ ಅಪರೂಪದ ಪ್ರಸಂಗ. ಭಾರತ ಎಂದರೆ ಸದಾ ಉರಿದು ಬೀಳುವ ಚೀನಾ, ಅಪರೂಪಕ್ಕೆ ಎಂಬಂತೆ, ಭಾರತ-ಚೀನಾ ಒಗ್ಗಟ್ಟಿನ ಬಗ್ಗೆ ಮಾತನಾಡಿದೆ. ಇದಕ್ಕಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಮೊದಲು ಥ್ಯಾಂಕ್ಸ್ ಹೇಳಬೇಕು.

- **ಅರೆ! ಇದೇನು, ಭಾರತದೊಂದಿಗೆ ಒಗ್ಗಟ್ಟಿನ ಮಂತ್ರ ಜಪಿಸಿದ ಚೀನಾ**
- **ಅಮೆರಿಕದ ವಿರುದ್ಧ ಭಾರತ-ಚೀನಾ ಒಂದಾಗುವಂತೆ ವಾಂಗ್ ಯಿ ಕರೆ**
- **ಡ್ರ್ಯಾಗನ್, ಆನೆ ಜಂಟಿ ನೃತ್ಯ ಒಂದೇ ಪರಿಹಾರ ಎಂದ ವಾಂಗ್-ಯಿ**
- **ಜಗತ್ತಿನ ಗಮನ ಸೆಳೆದ ಚೀನಾದ ವಿದೇಶಾಂ ಸಚಿವರ ಹೇಳಿಕೆ**

ಹೌದು, ಅಮೆರಿಕ ಮತ್ತು ಚೀನಾ ನಡುವಿನ ವಾಣಿಜ್ಯ ಉದ್ವಿಗ್ನತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಚೀನಾದ ವಿದೇಶಾಂಗ ಸಚಿವ ವಾಂಗ್-ಯಿ ಅವರು ಭಾರತ ಮತ್ತು ಚೀನಾ ಒಟ್ಟಾಗಿ ಅಮೆರಿಕವನ್ನು ಎದುರಿಸುವ ಬಗ್ಗೆ ಮಾತನಾಡಿದ್ದಾರೆ. ಚೀನಾ ರಾಜಧಾನಿ ಬೀಜಿಂಗ್‌ನಲ್ಲಿ ಶುಕ್ರವಾರ ನಡೆದ



ರಾಷ್ಟ್ರೀಯ ಪೀಪಲ್ಸ್ ಕಾಂಗ್ರೆಸ್ ಸಭೆಯ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ವಾಂಗ್ ಯಿ, ಅಮರಿಕದ ಪ್ರಭುತ್ವ ಮತ್ತು ಅಧಿಕಾರ ರಾಜಕಾರಣವನ್ನು ವಿರೋಧಿಸಲು, ಭಾರತ-ಚೀನಾ ಒಂದಾಗಬೇಕು ಎಂದು ಕರೆ ನೀಡಿದ್ದಾರೆ.

ಚೀನಾದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲಿನ ಸುಂಕವನ್ನು, ಅಮೆರಿಕ ಶೇ.20ಕ್ಕೆ ದ್ವಿಗುಣಗೊಳಿಸಿದೆ. ಇದರಿಂದ ಕೆರಳಿರುವ ಚೀನಾ ಇದೀಗ ಭಾರತದ ಮನವೊಲಿಕೆಗೆ ಮುಂದಾಗಿದ್ದು, ಅಮೆರಿಕದ ವಾಣಿಜ್ಯ ಯುದ್ಧವನ್ನು ಒಟ್ಟಾಗಿ ಎದುರಿಸಲು ಕರೆ ನೀಡಿದೆ. ಡ್ರ್ಯಾಗನ್ ಮತ್ತು ಎಲಿಫಂಟ್ (ಆನೆ) ಒಟ್ಟಾಗಿ ನೃತ್ಯ ಮಾಡುವುದು ಮಾತ್ರ ಸದ್ಯದ ಸರಿಯಾದ ಆಯ್ಕೆ. ಒಬ್ಬರನ್ನೊಬ್ಬರು ಬೆಂಬಲಿಸುವುದು, ಸಹಕಾರವನ್ನು ಬಲಪಡಿಸುವುದು ಮತ್ತು ಮೂಲಭೂತ ಹಿತಾಸಕ್ತಿಗಳಿಗೆ ಒತ್ತು ಕೊಡುವದು ಸದ್ಯ ಚೀನಾ ಮತ್ತು ಭಾರತ ಮಾಡಬೇಕಿರುವ ಕಾರ್ಯ ಎಂದು ವಾಂಗ್ ಯಿ ಹೇಳಿರುವುದು ಗಮನ ಸೆಳೆದಿದೆ.

ಏಷ್ಯಾದ ಎರಡು ದೊಡ್ಡ ಆರ್ಥಿಕತೆಗಳು ಒಂದಾದರೆ, ಅಂತಾರಾಷ್ಟ್ರೀಯ ಸಂಬಂಧಗಳು ಮತ್ತು ಅಭಿವೃದ್ಧಿಯ ಪ್ರಜಾಪ್ರಭುತ್ವೀಕರಣ ಮತ್ತು 'ಜಾಗತಿಕ ದಕ್ಷಿಣದ ಬಲವರ್ಧನೆಯು ಉಜ್ವಲ ಭವಿಷ್ಯವನ್ನು ಹೊಂದಿರುತ್ತದೆ ಎಂದು ಚೀನಾದ ವಿದೇಶಾಂಗ ಸಚಿವ ಅಭಿಪ್ರಾಯಪಟ್ಟಿದ್ದಾರೆ.

ಇನ್ನು ಭಾರತ ಮತ್ತು ಚೀನಾದ ನಡುವೆ ವಿಕಸನಗೊಳ್ಳುತ್ತಿರುವ ಸಂಬಂಧದ ಬಗ್ಗೆ ಕೇಳಲಾದ ಪ್ರಶ್ನೆಗೆ ಕಳೆದ ವರ್ಷದಲ್ಲಿ ಉಭಯ ರಾಷ್ಟ್ರಗಳು ಈ ನಿಟ್ಟಿನಲ್ಲಿ ಸಕಾರಾತ್ಮಕ ಹೆಜ್ಜೆಗಳನ್ನು ಇರಿಸಿವೆ.. ಎಂದು ವಾಂಗ್ ಯಿ ಸೂಚ್ಯವಾಗಿ ಹೇಳಿದರು.

ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ಕಳೆದ ವರ್ಷ ಅಕ್ಟೋಬರ್‌ನಲ್ಲಿ ರಷ್ಯಾದ ಕಜಾನ್‌ನಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಗಡಿ ವಿವಾದದ ಪರಿಹಾರಕ್ಕೆ ಇಬ್ಬರೂ ನಾಯಕರು ದ್ವಿಪಕ್ಷೀಯ ರಾಜತಾಂತ್ರಿಕ ಮಾತುಕತೆಯ ಮಹತ್ವವನ್ನು ಪುನರುಚ್ಚಿಸಿದ್ದಾರೆ. ಭಿನ್ನಾಭಿಪ್ರಾಯಗಳು ನಮ್ಮ ದ್ವಿಪಕ್ಷೀಯ ಸಂಬಂಧದ ಮೇಲೆ ನಕಾರಾತ್ಮಕ ಪರಿಣಾಮ ಬೀರಕೂಡದು ಎಂಬುದು ಉಭಯ ನಾಯಕರ ಅಭಿಪ್ರಾಯವಾಗಿದೆ ಎಂದು ವಾಂಗ್ ಯಿ ಹೇಳಿದ್ದಾರೆ.

### ಯುಎಸ್-ಚೀನಾ ಸುಂಕ ವಿವಾದ

**ಚೀನಾದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲಿನ ಸುಂಕವನ್ನು, ಶೇ.10 ರಿಂದ ಶೇ.20ಕ್ಕೆ ಹೆಚ್ಚಿಸುವ ಆದೇಶಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹಿ ಹಾಕಿದ್ದಾರೆ. ಇದು ಚೀನಾವನ್ನು ಕೆರಳಿಸಿದ್ದು, ವಾಣಿಜ್ಯ ಯುದ್ಧವೂ ಸೇರಿದಂತೆ ಅಮೆರಿಕ ಬಯಸುವ ಯಾವುದೇ ಯುದ್ಧದಲ್ಲಿ ನಾವು ಅಂತಿಮ ಕ್ಷಣದವರೆಗೂ ಹೋರಾಡುತ್ತೇವೆ ಎಂದು ಖಾರವಾಗಿ ಪ್ರತಿಕ್ರಿಯೆ ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು.**

## ತಿರುಪತಿ ಅನ್ನ ಪ್ರಸಾದಕ್ಕೆ ಮಸಾಲೆ ವಡೆ ಸೇರ್ಪಡೆ

# ತಿಮ್ಮಪ್ಪನ ಭಕ್ತರಿಗೆ ದ.ಭಾರತದ ಖಾದ್ಯ





**ಅಮರಾವತಿ:** ತಿರುಪತಿಗೆ ಬರುವ ಭಕ್ತರಿಗೆ ನೀಡುವ ಅನ್ನ ಪ್ರಸಾದದಲ್ಲಿ ಈ ಮತ್ತೊಂದು ಹೊಸ ಖಾದ್ಯ ಸೇರ್ಪಡೆಗೊಂಡಿದೆ. ಪ್ರಸಾದದ ಮೆನುವಿನಲ್ಲಿ ಮಸಾಲೆ ವಡೆ ಸೇರಿಸಲಾಗಿದೆ.

ಹೊಸ ಖಾದ್ಯವನ್ನು ಗುರುವಾರ ಬೆಳಗ್ಗೆ ತಿರುಮಲದ ತಾರಿಗೊಂಡ ವೆಂಗಮಾಂಬ ಅನ್ನ ಪ್ರಸಾದ ಭವನದಲ್ಲಿ ಬಿಡುಗಡೆ ಮಾಡಲಾಯಿತು. ಭಕ್ತರಿಗೆ ಅನ್ನ ಪ್ರಸಾದದಲ್ಲಿ ಮಸಾಲ ವಡೆಯನ್ನೂ ಬಡಿಸುವ ಮೂಲಕ ಟಿಟಿಡಿ ಅಧ್ಯಕ್ಷ ಬಿ.ಆರ್. ನಾಯ್ಡು ಚಾಲನೆ ಕೊಟ್ಟರು. ಈ ವೇಳೆ ಕಾರ್ಯನಿರ್ವಾಹಕ ಅಧಿಕಾರಿ ಜೆ. ಶ್ಯಾಮಲಾ ರಾವ್ ಮತ್ತು ಹೆಚ್ಚುವರಿ ಕಾರ್ಯನಿರ್ವಾಹಕ ಅಧಿಕಾರಿ ಸಿ.ಎಚ್. ವೆಂಕಯ್ಯ ಚೌಧರಿ ಉಪಸ್ಥಿತರಿದ್ದರು.

ಟಿಟಿಡಿ ಅಧ್ಯಕ್ಷ ನಾಯ್ಡು ಅವರು ಅಧಿಕಾರ ವಹಿಸಿಕೊಂಡಾಗ, ಅನ್ನ ಪ್ರಸಾದ ಮೆನುವಿನಲ್ಲಿ ದಕ್ಷಿಣ ಭಾರತದ ಖಾದ್ಯವನ್ನು ಸೇರಿಸುವ ಆಲೋಚನೆ ಇದೆ ಎಂದು ಹೇಳಿದ್ದರು. ನಾನು ಈ ಆಲೋಚನೆಯನ್ನು ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರಿಗೆ ಪ್ರಸ್ತಾಪಿಸಿದಾಗ, ಅವರು ತುಂಬಾ ಬೆಂಬಲ ನೀಡಿದರು. ತಕ್ಷಣವೇ ಯೋಜನೆಗೆ ಅನುಮೋದನೆ ನೀಡಿದರು. ನಮ್ಮ ಪ್ರಸಾದ ಅರ್ಪಣೆಯ ಭಾಗವಾಗಿ ಮಸಾಲೆ ವಡೆಯನ್ನು ಪರಿಚಯಿಸುತ್ತಿರುವುದು ಸಂತಸ ತಂದಿದೆ ಎಂದಿದ್ದಾರೆ.

ದೇವಾಲಯವು ಭಕ್ತರಿಗೆ ಪೌಷ್ಟಿಕ, ರುಚಿಕರವಾದ ಮತ್ತು ವೈವಿಧ್ಯಮಯ ಆಹಾರ ಒದಗಿಸುವುದೇ ನಮ್ಮ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದ್ದಾರೆ.

- **ಮಸಾಲ ವಡೆ ತಯಾರಿಸಲು ಬೇಳೆ, ಹಸಿರು ಮೆಣಸಿನಕಾಯಿ, ಶುಂಠಿ, ಕರಿಬೇವು, ಕೊತ್ತಂಬರಿ ಸೊಪ್ಪು, ಪುದೀನ ಮತ್ತು ಸೋಂಪು ಪದಾರ್ಥಗಳನ್ನು ಬಳಸಲಾಗುತ್ತದೆ. ಇವುಗಳನ್ನು ಮಿಶ್ರಣ ಮಾಡಿ ರುಚಿಕರವಾಗಿ ವಡೆ ತಯಾರಿಸಲಾಗುತ್ತದೆ.**

## ನೇಣು ಬಿಗಿದುಕೊಂಡು ವ್ಯಕ್ತಿ ಆತ್ಮಹತ್ಯೆ

**ಮುಂಬೈ:** ತನ್ನ ಪತ್ನಿ ಮತ್ತು ಆಕೆಯ ಚಿಕ್ಕಮ್ಮನನ್ನು ದೂಷಿಸಿ ಡೆತ್ ನೋಟ್ ಬರೆದಿಟ್ಟು 41 ವರ್ಷದ ವ್ಯಕ್ತಿಯೊಬ್ಬ ಮುಂಬೈನ ಹೋಟೆಲ್ ಕೋಣೆಯೊಳಗೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ನಿಶಾಂತ್ ತ್ರಿಪಾಠಿ ಕಳೆದ ಶುಕ್ರವಾರ ಸಹಾರಾ ಹೋಟೆಲ್‌ನ ಕೋಣೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದು, ತಾನು ಕೆಲಸ ಮಾಡುತ್ತಿದ್ದ ಕಂಪನಿಯ ವೆಬ್‌ಸೈಟ್‌ನಲ್ಲಿ ಡೆತ್ ನೋಟ್ ಅನ್ನು ಅಪ್‌ಲೋಡ್ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಮೂರು ದಿನಗಳ ಹಿಂದೆ ಹೋಟೆಲ್‌ಗೆ ಭೇಟಿ ನೀಡಿ, ಅತಿಥಿಗಳು ಗೌಪ್ಯತೆಗಾಗಿ ಬಳಸುವ 'ಡೋಂಟ್ ಡಿಸ್ಟರ್ಬ್' ಫಲಕವನ್ನು ಹಾಕಿದ್ದ. ಆದರೆ, ದೀರ್ಘಕಾಲದವರೆಗೆ ಯಾವುದೇ ಪ್ರತಿಕ್ರಿಯೆ ಬಾರದಿದ್ದಾಗ, ಹೋಟೆಲ್ ಸಿಬ್ಬಂದಿ ಮಾಸ್ಟರ್ ಕೀ ಬಳಸಿ ಕೋಣೆಗೆ ತೆರಳಿದಾಗ ಘಟನೆ ಬೆಳಕಿಗೆ ಬಂದಿದೆ. ಕೂಡಲೇ ಪೊಲೀಸರಿಗೆ ಮಾಹಿತಿ ನೀಡಲಾಗಿದೆ.

## ರಾಜಿಯಾಗದ ಹೋರಾಟಕ್ಕೆ ಸ್ಟಾಲಿನ್ ಕರೆ

**ಚೆನ್ನೈ:** ಲೋಕಸಭಾ ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆ ಅನ್ಯಾಯಯುತವಾಗಿದ್ದು, ಈ ವಿಚಾರದಲ್ಲಿ ರಾಜಿಯಾಗದೆ ಹೋರಾಡಲು ತಮಿಳುನಾಡು ಜೊತೆಗೆ ಕೈ ಜೋಡಿಸಲು ಹಾಗೂ ಜಂಟಿ ಕ್ರಿಯಾ ಸಮಿತಿ ಭಾಗವಾಗಲು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಅವರು ಶುಕ್ರವಾರ ಕರ್ನಾಟಕ ಸೇರಿದಂತೆ ಏಳು ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಆಹ್ವಾನಿಸಿದ್ದಾರೆ. ಕೇರಳ, ಕರ್ನಾಟಕ, ತೆಲಂಗಾಣ, ಪಶ್ಚಿಮ ಬಂಗಾಳ, ಪಂಜಾಬ್ ಮತ್ತು ಒಡಿಶಾ ಮುಖ್ಯಮಂತ್ರಿಗಳು ಹಾಗೂ ಪಕ್ಷದ ಮುಖ್ಯಸ್ಥರಿಗೆ ಪತ್ರ ಬರೆದಿರುವ ಸ್ಟಾಲಿನ್, ಮಾರ್ಚ್ 22 ರಂದು ಚೆನ್ನೈನಲ್ಲಿ ಜಂಟಿ ಕ್ರಿಯಾ ಸಮಿತಿಯ ಉದ್ಘಾಟನಾ ಸಭೆ ನಡೆಯಲಿದ್ದು, ಒಗ್ಗಟ್ಟಿನಿಂದ ಮುಂದೆ ಸಾಗಲು ಅದರಲ್ಲಿ ಪಾಲ್ಗೊಳ್ಳುವಂತೆ ಒತ್ತಾಯಿಸಿದ್ದಾರೆ. ಜನಸಂಖ್ಯೆ ಆಧಾರದಲ್ಲಿ ಎರಡು ವಿಧಾನದಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆ ಮಾಡಲಾಗುತ್ತಿದೆ ಎಂದು ವರದಿಯಾಗಿದೆ.

# ಉತ್ತರ ಪ್ರದೇಶ, ರಾಜಸ್ತಾನಕ್ಕೂ ನಂದಿನಿ ಲಗ್ಗೆ

**ನವದೆಹಲಿ:** ಇತ್ತೀಚೆಗೆ ರಾಷ್ಟ್ರ ರಾಜಧಾನಿ ದೆಹಲಿ ಮಾರುಕಟ್ಟೆ ಪ್ರವೇಶಿಸಿದ್ದ ಕರ್ನಾಟಕದ ನಂದಿನಿ ಉತ್ಪನ್ನಗಳು ಇದೀಗ ಉತ್ತರ ಪ್ರದೇಶ, ರಾಜಸ್ತಾನ ಮಾರುಕಟ್ಟೆಗಳಿಗೂ ಲಗ್ಗೆ ಇಟ್ಟಿದೆ. ಈ ತಿಂಗಳಾಂತ್ಯದಲ್ಲಿ ಉತ್ತರ ಭಾರತದ ಮಾರುಕಟ್ಟೆಗೆ ನಂದಿನಿ ಉತ್ಪನ್ನಗಳು ಪ್ರವೇಶಿಸಲಿದೆ. ಇದು ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್) ಉತ್ತರ ಭಾರತದ ಮಾರುಕಟ್ಟೆಗೆ ವಿಸ್ತರಿಸುವ ಯೋಜನೆಯ ಭಾಗವಾಗಿದೆ. ಅಲ್ಲಿ ಅದರ ಬ್ರ್ಯಾಂಡ್ ನಂದಿನಿ, ಗುಜರಾತ್ ಸಹಕಾರಿ ಹಾಲು ಮಾರುಕಟ್ಟೆ ಒಕ್ಕೂಟದ ಅಮುಲ್ ಜೊತೆ ಸ್ಪರ್ಧಿಸುತ್ತದೆ.

ಈ ತಿಂಗಳ ಅಂತ್ಯದ ವೇಳೆಗೆ ನಂದಿನಿ ಉತ್ಪನ್ನಗಳು ಉತ್ತರ ಉತ್ತರ ಪ್ರದೇಶ ಮತ್ತು ರಾಜಸ್ತಾನದ ಜೈಪುರದಲ್ಲಿ ಲಭ್ಯವಿರುತ್ತವೆ ಎಂದು ಕೆಎಂಎಫ್ ಅಧಿಕಾರಿಗಳು ತಿಳಿಸಿದ್ದಾರೆ.

ಕೆಎಂಎಫ್ ನವೆಂಬರ್ 21, 2024 ರಂದು ರಾಷ್ಟ್ರ ರಾಜಧಾನಿಯಲ್ಲಿ ನಂದಿನಿ ಹಾಲು ಮತ್ತು ಮೊಸರನ್ನು ಬಿಡುಗಡೆ ಮಾಡಿತ್ತು. ಈಗ ದೆಹಲಿಯ ಗಡಿ ಪ್ರದೇಶಗಳಲ್ಲೂ ತನ್ನ ಅಸ್ತಿತ್ವವನ್ನು ವಿಸ್ತರಿಸುವತ್ತ ಗಮನಹರಿಸುತ್ತಿದೆ. ಕೆಎಂಎಫ್ ಈಗ ದೆಹಲಿಯ ಬಳಿಯ ಉತ್ತರ ಪ್ರದೇಶದ ಹತ್ರಾಸ್ ಜಿಲ್ಲೆಯಲ್ಲಿ ಹೊಸ ಹಾಲು ಪ್ಯಾಕೇಜಿಂಗ್ ಘಟಕವನ್ನು ಪ್ರಾರಂಭಿಸಿದೆ. ಈ ಬಗ್ಗೆ







ಮಾಹಿತಿ ನೀಡಿರುವ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ ಶಿವಸ್ವಾಮಿ, 'ಆಗ್ರಾ, ಮಥುರಾ ಮತ್ತು ಮೀರತ್ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಂದಿನಿ ಹಾಲನ್ನು ವಿತರಿಸಲು ಒಕ್ಕೂಟ ಯೋಜಿಸಿದೆ. ಮಾರ್ಚ್ 16 ರಿಂದ ಈ ಪ್ರದೇಶಗಳಲ್ಲಿ ಮಾರಾಟವನ್ನು ಪ್ರಾರಂಭಿಸಲು ಅಗತ್ಯವಿರುವ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ರಾಜಸ್ಥಾನದ ಜೈಪುರದಲ್ಲಿಯೂ ಮಾರಾಟವು ಈ ತಿಂಗಳೊಳಗೆ ಪ್ರಾರಂಭವಾಗಲಿದೆ ಎಂದು ಹೇಳಿದರು.

ಅಂದಹಾಗೆ ಭಾರತದ ಎರಡನೇ ಅತಿದೊಡ್ಡ ಹಾಲು ಸಹಕಾರಿ ಸಂಸ್ಥೆಯಾದ ಕೆಎಂಎಫ್, ತನ್ನ ಸದಸ್ಯ ಜಿಲ್ಲಾ ಹಾಲು ಒಕ್ಕೂಟಗಳ ಮೂಲಕ 26 ಲಕ್ಷಕ್ಕೂ ಹೆಚ್ಚು ಡೈರಿ ರೈತರಿಂದ ಹಾಲನ್ನು ಸಂಗ್ರಹಿಸಿ ಸಂಸ್ಕರಿಸುತ್ತದೆ. ಕಳೆದ ಐದು ದಶಕಗಳಿಂದ, ಇದು ನಂದಿನಿ ಬ್ರಾಂಡ್ ಅಡಿಯಲ್ಲಿ ಹಾಲು ಮತ್ತು ಡೈರಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದೆ.

**ಅಂತೆಯೇ ಕೆಎಂಎಫ್ ನಂದಿನಿಯ ಮಾರಾಟವನ್ನು ಕರ್ನಾಟಕಕ್ಕೆ ಮಾತ್ರ ಸೀಮಿತಗೊಳಿಸುತ್ತಿಲ್ಲ, ಬದಲಾಗಿ ಭಾರತ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ತನ್ನ ಜಾಲವನ್ನು ಸ್ಥಿರವಾಗಿ ವಿಸ್ತರಿಸುತ್ತಿದೆ. ಒಕ್ಕೂಟವು ಈಗಾಗಲೇ ದೆಹಲಿಯಲ್ಲಿ ನಂದಿನಿ ಸ್ಯಾಚೆಟ್ ಹಾಲು, ಮೊಸರು ಮತ್ತು ಮಜ್ಜಿಗೆಯನ್ನು ಪರಿಚಯಿಸಿದೆ ಮತ್ತು ಹತ್ತಿರದ ನಗರಗಳಿಗೆ ಮತ್ತಷ್ಟು ವಿಸ್ತರಿಸುವ ಕೆಲಸ ಮಾಡುತ್ತಿದೆ ಎಂದು ಶಿವಸ್ವಾಮಿ ಹೇಳಿದರು.**

## 2.37 ಲಕ್ಷ ರೋಗಿಗಳ ಕಣ್ಣು ಪರೀಕ್ಷೆ

### 1.5 ಲಕ್ಷಕ್ಕೂ ಹೆಚ್ಚು ಕನ್ನಡಕಗಳ ವಿತರಣೆ

**ಪ್ರಯಾಗ್‌ರಾಜ್:** ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆದ ಕುಂಭಮೇಳವು ಫೆಬ್ರವರಿ 26 ರಂದು ಮುಕ್ತಾಯಗೊಂಡಿತು. ಈ ದಿನದಂದು, ಜನವರಿ 12 ರಿಂದ ಫೆಬ್ರವರಿ 26 ರವರೆಗೆ ಪ್ರಯಾಗ್‌ರಾಜ್‌ನಲ್ಲಿ ನಡೆದ ನೇತ್ರ ಕುಂಭ 2025 ಕೂಡ ಅಂತ್ಯಗೊಂಡಿದೆ. ನೇತ್ರ ಕುಂಭದಲ್ಲಿ ಲಕ್ಷಾಂತರ ಜನರಿಗೆ ಕಣ್ಣಿನ ಉಚಿತ ತಪಾಸಣೆ, ಔಷಧಿಗಳು, ಕನ್ನಡಕ ವಿತರಣೆ ಮತ್ತು ಕಣ್ಣಿನ ಚಿಕಿತ್ಸೆಯನ್ನು ನಡೆಸಲಾಯಿತು. ದೇಶಾದ್ಯಂತದ ಸುಮಾರು 343 ನೇತ್ರಶಾಸ್ತ್ರಜ್ಞರು ಮತ್ತು 489 ನೇತ್ರಶಾಸ್ತ್ರಜ್ಞರು ನೇತ್ರ ಕುಂಭದಲ್ಲಿ ತಮ್ಮ ಸೇವೆ ಮಾಡಿದರು.

ಪ್ರಯಾಗ್‌ರಾಜ್‌ನಲ್ಲಿ ನಡೆದ 2025 ರ ಮಹಾಕುಂಭದಲ್ಲಿ 53 ದಿನಗಳ ಶಿಬಿರದಲ್ಲಿ, ನೇತ್ರ ಕುಂಭವು ಇತರ 52 ಸಂಸ್ಥೆಗಳ ಸಹಯೋಗದೊಂದಿಗೆ ಭಾರತ ಮತ್ತು ಪ್ರಪಂಚದಾದ್ಯಂತದ ಸುಮಾರು 2,37,964 ರೋಗಿಗಳನ್ನು ಪರೀಕ್ಷಿಸಿತು. ಶಿಬಿರದಲ್ಲಿ ಪರೀಕ್ಷಿಸಲ್ಪಟ್ಟ ಕೆಲವು ರೋಗಿಗಳು ಪ್ರಪಂಚದಾದ್ಯಂತ 17 ದೇಶಗಳಿಂದ ಬಂದವರು. ನೇತ್ರ ಕುಂಭದಲ್ಲಿ ಆರಂಭಿಕ ಪರೀಕ್ಷೆಯ ನಂತರ, ಸುಮಾರು 17,069 ರೋಗಿಗಳನ್ನು ದೇಶಾದ್ಯಂತ 216 ಕ್ಕೂ ಹೆಚ್ಚು ಆಸ್ಪತ್ರೆಗಳಿಗೆ ಉಲ್ಲೇಖಿಸಲಾಗಿದೆ. ಪ್ರಯಾಗ್‌ರಾಜ್‌ಗೆ ಭೇಟಿ ನೀಡಿದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಗುರುವಾರ ಮಹಾ ಕುಂಭದಲ್ಲಿ ನಡೆಯುತ್ತಿರುವ ನೇತ್ರ ಕುಂಭವನ್ನು ವೀಕ್ಷಿಸಿದರು ಮತ್ತು ಇಲ್ಲಿ ನಡೆಯುತ್ತಿರುವ ಸೇವಾ ಕಾರ್ಯಗಳನ್ನು ಶ್ಲಾಘಿಸಿದರು. ನೇತ್ರ ಕುಂಭದ ಭವ್ಯತೆ ಮತ್ತು ನಿರ್ವಹಣೆಯನ್ನು ಮುಖ್ಯಮಂತ್ರಿ ಶ್ಲಾಘಿಸಿದರು.

ವೈದ್ಯರು ಅವನಿಗೆ ಇಡೀ ವ್ಯವಸ್ಥೆಯ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಿದರು. ಮಹಾ ಕುಂಭ ಮೇಳದಲ್ಲಿ ನೇತ್ರ ಕುಂಭದಲ್ಲಿ 2.37 ಲಕ್ಷ ರೋಗಿಗಳನ್ನು ಪರೀಕ್ಷಿಸಲಾಗಿದೆ ಎಂದು ಮುಖ್ಯಮಂತ್ರಿಯವರಿಗೆ ತಿಳಿಸಲಾಯಿತು. ಈ ಸಂದರ್ಭದಲ್ಲಿ, ಸಿಎಂ ಯೋಗಿ ಅವರು ಈ ಕಾರ್ಯಕ್ರಮಕ್ಕಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಮತ್ತು ಇತರ ಸಂಸ್ಥೆಗಳನ್ನು ಅಭಿನಂದಿಸಿದರು.

## ಮುಂಬೈ ದಾಳಿಕೋರ ತಹವ್ವೂರ್ ಅರ್ಜಿ ವಜಾ

# ಶೀಘ್ರವೇ ಭಾರತಕ್ಕೆ ಹಸ್ತಾಂತರ

**ವಾಷಿಂಗ್ಟನ್:** 26/11ರ ಮುಂಬೈ ಭಯೋತ್ಪಾದಕ ದಾಳಿಯ ಆರೋಪಿ ತಹವ್ವೂರ್ ರಾಣಾ ತನ್ನನ್ನು ಭಾರತಕ್ಕೆ ಹಸ್ತಾಂತರಿಸುವ ಪ್ರಕ್ರಿಯೆಗೆ ತುರ್ತು ತಡೆ ನೀಡುವಂತೆ ಕೋರಿ ಸಲ್ಲಿಸಿದ ಅರ್ಜಿಯನ್ನು ಅಮೆರಿಕದ ಸುಪ್ರೀಂಕೋರ್ಟ್ ರಾಣಾ ಸಲ್ಲಿಸಿದ್ದ ಅರ್ಜಿಯಲ್ಲಿ ವಿವಿಧ ಆರೋಗ್ಯ ಸಮಸ್ಯೆಗಳನ್ನು ಉಲ್ಲೇಖಿಸಿ, ಭಾರತದಲ್ಲಿ ವಿಚಾರಣೆಗೆ ಒಳಗಾಗುವಷ್ಟು ಕಾಲ ತಾನು ಬದುಕುಳಿಯುವುದಿಲ್ಲ, ಶೀಘ್ರದಲ್ಲಿ ನಾನು ಸಾವನ್ನಪ್ಪಬಹುದು. ಅಲ್ಲದೇ ಪಾಕಿಸ್ತಾನಿ ಮುಸ್ಲಿಂ ಹಾಗೂ ಮಾಜಿ ಸೇನಾಧಿಕಾರಿಯಾಗಿರುವ ಹಿನ್ನೆಲೆ ಭಾರತದಲ್ಲಿ ಹಿಂಸೆಗೆ ಒಳಗಾಗಬಹುದು ಎಂದು ಉಲ್ಲೇಖಿಸಿದ್ದರು. ಇದನ್ನೂ ಆದರೆ ಈ ಅಂಶಗಳನ್ನು ಅಮೆರಿಕಾ ಸುಪ್ರೀಂಕೋರ್ಟ್ ಪರಿಗಣಿಸಿಲ್ಲ. ಇದರಿಂದಾಗಿ ತಹವ್ವೂರ್ ರಾಣಾಗೆ ಹಿನ್ನಡೆಯಾಗಿದೆ.



ಭಾರತಕ್ಕೆ ರಾಣಾ ಹಸ್ತಾಂತರಕ್ಕೆ ಇನ್ನಷ್ಟು ಶಕ್ತಿ ಬಂದಿದ್ದು, ಭಾರತದ ವಿದೇಶಾಂಗ ಇಲಾಖೆ ಅಧಿಕಾರಿಗಳು ಈಗಾಗಲೇ ಪ್ರಕ್ರಿಯೆ ಆರಂಭಿಸಿದ್ದಾರೆ.

ಕಳೆದ ತಿಂಗಳು ಪ್ರಧಾನಿ ಮೋದಿ ಅವರು ಅಮೆರಿಕಾಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ, ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅವನು ತುಂಬಾ ದುಷ್ಟ ಎಂದು ಕರೆದು ರಾಣಾ ಗಡಿಪಾರು ಮಾಡಲು ತಮ್ಮ ಆಡಳಿತ ಅನುಮೋದನೆ ನೀಡಿದೆ ಎಂದು ಘೋಷಿಸಿದರು.

## ವಾಯುಪಡೆಯ ಜಾಗ್ವಾರ್ ಫೈಟರ್ ಜೆಟ್ ಪತನ

**ಚಂಡೀಗಢ:** ಭಾರತೀಯ ವಾಯುಪಡೆಯ ಜಾಗ್ವಾರ್ ಫೈಟರ್ ಜೆಟ್ ಹರಿಯಾಣದ ಅಂಬಾಲದಲ್ಲಿ ಪತನಗೊಂಡಿದೆ. ಪೈಲಟ್ ಸುರಕ್ಷಿತವಾಗಿ ಎಜೆಕ್ಟ್ ಆಗಿದ್ದಾರೆ ಎಂದು ವಾಯು ಸೇನೆಯ ಅಧಿಕಾರಿಗಳು ತಿಳಿಸಿದ್ದಾರೆ. ತರಬೇತಿ ಹಾರಾಟದ ವೇಳೆ ವಿಮಾನದಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದೆ. ಇದರಿಂದ ಎಚ್ಚೆತ್ತ ಪೈಲಟ್ ಜನವಸತಿ ಪ್ರದೇಶದಿಂದ ವಿಮಾನವನ್ನು ದೂರ ಕೊಂಡೊಯ್ದಿದ್ದಾರೆ. ಬಳಿಕ ವಿಮಾನ ಪತನಗೊಂಡಿದ್ದು, ಪೈಲಟ್ ಸುರಕ್ಷಿತವಾಗಿ ಎಜೆಕ್ಟ್ ಆಗಿದ್ದಾರೆ. ತಾಂತ್ರಿಕ ದೋಷದಿಂದ ಈ ಅವಘಡ ಸಂಭವಿಸಿದೆ. ಪೈಲಟ್ ವಿಮಾನವನ್ನು ಸುರಕ್ಷಿತವಾಗಿ ಜನವಸತಿ ಇಲ್ಲದ ಕಡೆ ತೆಗೆದುಕೊಂಡು ಹೋಗಿ ಚಾಣಾಕ್ಷ್ಯತನ ಮೆರೆದಿದ್ದಾರೆ.

## ಭಾರತದ ಅಗಾಧ ಶಕ್ತಿ ಕಂಡು ಜಗತ್ತು ನಿಬ್ಬೆರಗಾಗಿದೆ: ಪ್ರಧಾನಿ ನರೇಂದ್ರ ಮೋದಿ


# ಅಭಿವೃದ್ಧಿಯ ದೊಡ್ಡ ಗುರಿಗಳೊಂದಿಗೆ ಭಾರತ ಮುನ್ನುಗ್ಗುತ್ತಿದೆ

**ಹೊಸದಿಲ್ಲಿ:** ಭಾರತದ ಆರ್ಥಿಕ ಪ್ರಗತಿ ಮತ್ತು ಜಾಗತಿಕ ವೇದಿಕೆಯಲ್ಲಿ ಭಾರತದ ಹೆಚ್ಚುತ್ತಿರುವ ಪ್ರಭಾವ ಇಡೀ ಜಗತ್ತನ್ನು ಮಂತ್ರಮುಗ್ಧಗೊಳಿಸಿದೆ.. ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ರಾಷ್ಟ್ರ ರಾಜಧಾನಿ ಹೊಸದಿಲ್ಲಿಯಲ್ಲಿ ನಡೆದ 'ರಿಪಬ್ಲಿಕ್ ಪ್ಲೀನರಿ ಸಮ್ಮಿಟ್ 2025'ನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಸೌರಶಕ್ತಿಯಂತಹ ಕ್ಷೇತ್ರಗಳಲ್ಲಿ ದೇಶವು ಸಾಧಿಸಿರುವ ಪ್ರಗತಿಯನ್ನು ಇಡೀ ಜಗತ್ತೇ ಕೊಂಡಾಡುತ್ತಿದೆ ಎಂದು ಹೇಳಿದರು.

1. **ಭಾರತ ದೊಡ್ಡ ಗುರಿಗಳನ್ನು ಸಾಧಿಸುವ ಸಾಮರ್ಥ್ಯ ಹೊಂದಿದೆ ಎಂದ ಪ್ರಧಾನಿ**
2. **ರಿಪಬ್ಲಿಕ್ ಪ್ಲೀನರ್ ಸಮ್ಮಿಟ್ 2025ರಲ್ಲಿ ಪ್ರಧಾನಿ ಮೋದಿ ಭಾಷಣ**
3. **ಭಾರತದ ಅಗಾಧ ಶಕ್ತಿ ಕಂಡು ಜಗತ್ತು ನಿಬ್ಬೆರಗಾಗಿದೆ ಎಂದ ಪ್ರಧಾನಿ ಮೋದಿ**

ಭಾರತವು ಈಗ ದೊಡ್ಡ ಗುರಿಗಳನ್ನು ಹೊಂದಿಸಿಕೊಳ್ಳುತ್ತಿದ್ದು, ದೊಡ್ಡ ಫಲಿತಾಂಶಗಳನ್ನು ಎದುರು ನೋಡುತ್ತಿದೆ. ಜಗತ್ತು ಈಗ ಇದು ಭಾರತದ ಶತಮಾನ ಎಂದು ಘೋಷಿಸುತ್ತಿದೆ. ಡಿಬಿಟಿ ವ್ಯವಸ್ಥೆಯ ಮೂಲಕ ಬಡವರ ಖಾತೆಗಳಿಗೆ ನೇರವಾಗಿ ಹಣ ವರ್ಗಾವಣೆಯಾಗುತ್ತಿರುವುದು, ಭಾರತದ ಡಿಜಿಟಲ್ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಾಗಿದೆ ಎಂದು ಪ್ರಧಾನಿ ಮೋದಿ ಸಂತಸ ವ್ಯಕ್ತಪಡಿಸಿದರು.

ಭಾರತದ ಯುವ ಸಮುದಾಯ ಇಂದು ಜಗತ್ತು ನಿಬ್ಬೆರಗಾಗುವಂತ ಸಾಧನೆಗಳನ್ನು ಮಾಡುತ್ತಿದೆ. ಯುವ ಸಮುದಾಯ ಇಂದು ರಾಜಕೀಯ ಕ್ಷೇತ್ರದಿಂದ ಹಿಡಿದು ಅಂತರಿಕ್ಷ ಕ್ಷೇತ್ರವನ್ನು ಆಳುತ್ತಿದೆ. ಭಾರತವು ಜಾಗತಿಕ ಬೆಳವಣಿಗೆಗೆ ಪ್ರೇರಕ ಶಕ್ತಿಯಾಗಿ ಹೊರಹೊಮ್ಮಲು ಸಾಧ್ಯವಾಗಿರುವುದು ಇದೇ ಯುವ ಸಮುದಾಯದ ಸಮರ್ಪಣಾ ಭಾವದಿಂದ ಎಂದು ಪ್ರಧಾನಿ ಮೋದಿ ಅಭಿಪ್ರಾಯಪಟ್ಟರು. ಕಳೆದ ದಶಕದಲ್ಲಿ, 42 ಲಕ್ಷ ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ನೇರ ಲಾಭ ವರ್ಗಾವಣೆ (ಡಿಬಿಟಿ) ವ್ಯವಸ್ಥೆಯ ಮೂಲಕ ಬಡವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ವರ್ಗಾಯಿಸಲಾಗಿದೆ. ದೆಹಲಿಯಿಂದ ಕಳುಹಿಸಲಾದ ಪ್ರತಿ ರೂಪಾಯಿಯೂ ಯಾವುದೇ ಮಧ್ಯವರ್ತಿಗಳಿಲ್ಲದೆ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮೆಯಾಗುತ್ತದೆ. ಇದು ಪ್ರತಿಯೊಬ್ಬ ಭಾರತೀಯ ಹೆಮ್ಮೆಪಡುವ ಸಂಗತಿ ಎಂದು ಪ್ರಧಾನಿ ಮೋದಿ ನುಡಿದರು.



ಹತ್ತು ವರ್ಷಗಳ ಹಿಂದೆ ಭಾರತದಲ್ಲಿ ಸೌರಶಕ್ತಿ ಸಾಮರ್ಥ್ಯ ಅತ್ಯಲ್ಪವಾಗಿತ್ತು. ಇಂದು ರಾಷ್ಟ್ರವು ಸೌರಶಕ್ತಿ ಸಾಮರ್ಥ್ಯದಲ್ಲಿ ವಿಶ್ವದ ಟಾಪ್ ಐದು ರಾಷ್ಟ್ರಗಳಲ್ಲಿ ಸೇರಿದೆ. ಅದೇ ರೀತಿ 2007ರಲ್ಲಿ ಭಾರತದ ವಾರ್ಷಿಕ ಜಿಡಿಪಿ ಒಂದು ಲಕ್ಷ ಕೋಟಿ ರೂಪಾಯಿಗಳಷ್ಟಿತ್ತು. ಇಂದು, ಅದೇ ಮಟ್ಟದ ಆರ್ಥಿಕ ಚಟುವಟಿಕೆಯನ್ನು ಕೇವಲ ಒಂದು ತ್ರೈಮಾಸಿಕ ಅವಧಿಯ ಸಾಧಿಸಲಾಗುತ್ತಿದೆ.

ಈ ಗಮನಾರ್ಹ ರೂಪಾಂತರವು ಇಂದಿನ ಭಾರತದಲ್ಲಿನ ಆರ್ಥಿಕ ಬೆಳವಣಿಗೆಯ ವೇಗವನ್ನು ಎತ್ತಿ ತೋರಿಸುತ್ತದೆ ಎಂದು ಪ್ರಧಾನಿ ಮೋದಿ ಮಾಹಿತಿ ನೀಡಿದರು. ಸ್ವಾತಂತ್ರ್ಯದ 65 ವರ್ಷಗಳ ನಂತರ, ಭಾರತವು ವಿಶ್ವದ 11ನೇ ಅತಿದೊಡ್ಡ ಆರ್ಥಿಕತೆಯಾಗಿತ್ತು. ಕೇವಲ ಒಂದು ದಶಕದಲ್ಲಿ, ನಾವು ಐದನೇ ಅತಿದೊಡ್ಡ ಆರ್ಥಿಕತೆಯಾಗಿದ್ದೇವೆ ಎಂದು ಪ್ರಧಾನಿ ಮೋದಿ ಹೇಳಿದರು.

**ಭಾರತದ ಆರ್ಥಿಕ ಮತ್ತು ತಾಂತ್ರಿ ಕ್ಷೇತ್ರದಲ್ಲಿನ ಗಮನಾರ್ಹ ಸಾಧನೆಗಳು, ಜಾಗತಿಕವಾಗಿ ಹೊಸ ಆಕಾಂಕ್ಷೆಗಳು ಮತ್ತು ನಿರೀಕ್ಷೆಗಳನ್ನು ಹುಟ್ಟುಹಾಕಿವೆ. ಭಾರತವು ಈಗ ಜಾಗತಿಕ ಬೆಳವಣಿಗೆಯನ್ನು ಮುನ್ನಡೆಸುವ ಪ್ರೇರಕ ಶಕ್ತಿಯಾಗಿ ಹೊರಹೊಮ್ಮಿದೆ ಎಂದು ಪ್ರಧಾನಿ ಮೋದಿ ಹೆಮ್ಮೆಯಿಂದ ನುಡಿದರು.**

### ಪ್ರಧಾನಿ ಮೋದಿ ಸಂತಸ

**ನಮ್ಮ ಸರ್ಕಾರವು ಅಂತರಿಕ್ಷ ಕ್ಷೇತ್ರವನ್ನು ಯುವ ನಾವೀನ್ಯತೆಗಾರರಿಗೆ ತೆರೆದಿಟ್ಟಿದೆ. ನಾವು ಈ ನಿರ್ಧಾರವನ್ನು ತೆಗೆದುಕೊಂಡಾಗ, ಅದಕ್ಕೆ ಹೆಚ್ಚಿನ ಗಮನ ಸಿಗಲಿಲ್ಲ. ಆದರೆ ಇಂದು ದೇಶದಲ್ಲಿ 250ಕ್ಕೂ ಹೆಚ್ಚು ಸ್ಪೇಸ್ ಸ್ಟಾರ್ಟ್‌ಅಪ್‌ಗಳಿವೆ. ಈ ಸ್ಟಾರ್ಟ್‌ಅಪ್‌ಗಳು ಈಗ ರಾಕೆಟ್‌ಗಳನ್ನು ತಯಾರಿಸುತ್ತಿವೆ. ಮ್ಯಾಪಿಂಗ್ ಕ್ಷೇತ್ರದಲ್ಲಿಯೂ ಇದೇ ರೀತಿಯ ಬದಲಾವಣೆ ಸಂಭವಿಸಿದೆ ಎಂದು ಪ್ರಧಾನಿ ಮೋದಿ ಸಂತಸ ವ್ಯಕ್ತಪಡಿಸಿದರು.**

# ಔಟ್ ಆದರೂ ನಗುತ್ತಲೇ ಹೊರಬಂದ ಹಾರ್ದಿಕ್ ಪಾಂಡ್ಯ

ಐಸಿಸಿ ಚಾಂಪಿಯನ್ಸ್ ಟ್ರೋಫಿ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಭರ್ಜರಿ ಗೆಲುವು ಸಾಧಿಸುವ ಮೂಲಕ ಭಾರತ ಫೈನಲ್‌ಗೆ ಪ್ರವೇಶಿಸಿದೆ. ಐಸಿಸಿ ಏಕದಿನ ಟೂರ್ನಿಯಲ್ಲಿ ಆಸ್ಟ್ರೇಲಿಯಾ ವಿರುದ್ಧ ಅತ್ಯಧಿಕ 265 ರನ್‌ಗಳ ಗುರಿಯನ್ನು ತಂಡವು ಬೆನ್ನಟ್ಟಿತು. ವಿರಾಟ್ ಕೊಹ್ಲಿ (84) ಮತ್ತು ಶ್ರೇಯಸ್ ಅಯ್ಯರ್ (45) ತಂಡಕ್ಕೆ ನೆರವಾದರೂ, ತಂಡವನ್ನು ಗೆಲುವಿನ ದಡ ಮುಟ್ಟಿಸುವ ಒತ್ತಡ ಹಾರ್ದಿಕ್ ಪಾಂಡ್ಯ ಮತ್ತು ಕೆಎಲ್ ರಾಹುಲ್ ಅವರ ಹೆಗಲ ಮೇಲಿತ್ತು. ಈ ವೇಳೆ ಮೂರು ಸಿಕ್ಸರ್ ಸಿಡಿಸುವ ಮೂಲಕ ಪಾಂಡ್ಯ ಭಾರತ ಗೆಲುವಿನ ದಡ ಸೇರಲು ಸಹಾಯ ಮಾಡಿದರು. ಕೆಎಲ್ ರಾಹುಲ್ 34 ಎಸೆತಗಳಲ್ಲಿ 42 ರನ್ ಗಳಿಸಿ ಅಜೇಯರಾಗಿ ಉಳಿದರು. ಆದರೆ, ಒಂದು ಬಾಲ್‌ಗೆ ಒಂದು ರನ್‌ಗಿಂತ ಹೆಚ್ಚಿನ ಅಗತ್ಯ ಇದ್ದದ್ದರಿಂದ ಡ್ರೆಸ್ಸಿಂಗ್ ರೂಂನಲ್ಲಿ ಆತಂಕ ಮನೆಮಾಡಿತ್ತು. ಹೀಗಿದ್ದರೂ ಔಟ್ ಆದ ಬಳಿಕ ಹಾರ್ದಿಕ್ ಪಾಂಡ್ಯ ನಗುತ್ತಲೇ ಮೈದಾನದಿಂದ ಹೊರಬಂದಿದ್ದರು.

**ಮೂರು ಭರ್ಜರಿ ಸಿಕ್ಸರ್**

ಆದರೆ, ಹಾರ್ದಿಕ್ ಪಾಂಡ್ಯ 24 ಎಸೆತಗಳಲ್ಲಿ ಮೂರು ಭರ್ಜರಿ ಸಿಕ್ಸರ್, ಒಂದು ಬೌಂಡರಿ ಸಹಿತ 28 ರನ್ ಗಳಿಸಿದರು. ಇದರಿಂದ ತಂಡದ ಮೇಲಿದ್ದ ಒತ್ತಡ ಕಡಿಮೆಯಾಗಿತ್ತು. ಭಾರತ ಗೆಲ್ಲಲು ಕೇವಲ ಆರು ರನ್‌ಗಳ ಅವಶ್ಯಕತೆಯಿದ್ದಾಗ ಔಟಾದರೂ ಪಾಂಡ್ಯ ನಗುತ್ತಲೇ ಡ್ರೆಸ್ಸಿಂಗ್ ರೂಂಗೆ ಪ್ರವೇಶಿಸಿದ್ದರು. ಇದಕ್ಕೆ ಕಾರಣ ಏನೆಂಬುದನ್ನು ಪಂದ್ಯದ ನಂತರ ಮಾತನಾಡಿದ ಪಾಂಡ್ಯ, ಸಹ ಆಟಗಾರ ಅಕ್ಷರ್ ಪಟೇಲ್ ಅವರೊಂದಿಗೆ ಹಂಚಿಕೊಂಡಿದ್ದಾರೆ. ನಾನು ನಗುತ್ತಿದ್ದೆ. ಅಂದರೆ, ನಾನು ಎರಡು ಸಿಕ್ಸರ್‌ಗಳನ್ನು ಹೊಡೆಯುವ ಬಗ್ಗೆ ಯೋಚಿಸಿರಲಿಲ್ಲ. ಅದು ಯಾವುದೇ ಸಮಯದಲ್ಲಿ ಬೇಕಾದರೂ ಸಂಭವಿಸುತ್ತದೆ ಎಂಬುದು ನನಗೆ ತಿಳಿದಿತ್ತು. ಆದರೆ, ಡ್ರೆಸ್ಸಿಂಗ್ ಕೋಣೆಯಲ್ಲಿ ಒತ್ತಡ ಹೆಚ್ಚುತ್ತಿದೆ ಎಂಬುದು ನನಗೆ ತಿಳಿದಿತ್ತು. ಆದರೆ, ಫಲಿತಾಂಶದ ಬಗ್ಗೆ ನನಗೆ ಖಾತರಿಯಿತ್ತು. ಹೀಗಾಗಿಯೇ ನಾನು ಒಳಗೊಳಗೆ ನಗುತ್ತಿದ್ದೆ' ಎಂದು ಪಾಂಡ್ಯ, ಭಾರತೀಯ ಕ್ರಿಕೆಟ್ ತಂಡವು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡ ವಿಡಿಯೋದಲ್ಲಿ ಹೇಳಿದ್ದಾರೆ. ನಂತರ ಅಕ್ಷರ್ ಪಟೇಲ್ ಡ್ರೆಸ್ಸಿಂಗ್ ರೂಂನೊಳಗಿನ ಆತಂಕ, ಅಲ್ಲಿದ್ದವರು ಏನನ್ನು ಯೋಚಿಸುತ್ತಿದ್ದರು ಎಂಬುದರ ಬಗ್ಗೆ ವಿವರಿಸಿದರು. ಒಳಗೆ ಏನಾಗುತ್ತದೆ ಎಂದು ನೀವು (ಪಾಂಡ್ಯ) ಯೋಚಿಸಿರಲಿಲ್ಲವೇ ಅಲ್ಲಿದ್ದವರು 'ಹೇ, ಎರಡು ರನ್, ಸಿಂಗಲ್ಸ್ ರನ್‌ಗೆ ಓಡು' ಎಂದು ಯೋಚಿಸುತ್ತಿದ್ದರು. ಆದರೆ, ನನಗೆ ಗೊತ್ತಿತ್ತು. ನನಗೆ ನಿಮ್ಮ ಮೇಲೆ ನಂಬಿಕೆ ಇತ್ತು. ನಾನು ನನ್ನ ಸುತ್ತಲಿನ ಪರಿಸರವನ್ನು ಗಮನಿಸುತ್ತಿದ್ದೆ' ಎಂದು ಅಕ್ಷರ್ ಪಾಂಡ್ಯಗೆ ಹೇಳಿದರು.


ಮಾರ್ಚ್ 9ರ ಭಾನುವಾರದಂದು ದುಬೈನ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿ 2025ರ ಫೈನಲ್‌ನಲ್ಲಿ ಭಾರತ ನ್ಯೂಜಿಲೆಂಡ್ ವಿರುದ್ಧ ಸೆಣಸಲಿದೆ. ಟೀಂ ಇಂಡಿಯಾ ಗೆದ್ದರೆ, ಅದು ಅವರಿಗೆ ದಾಖಲೆಯ ಮೂರನೇ ಪ್ರಶಸ್ತಿಯಾಗಲಿದೆ.




# ಭಾರತ ವಿರುದ್ಧದ ಫೈನಲ್‌ಗೂ ಮುನ್ನ ನ್ಯೂಜಿಲೆಂಡ್‌ಗೆ ಹಿನ್ನಡೆ

**ಪ್ರಮುಖ ಆಟಗಾರನಿಗೆ ಗಾಯ**

ಐಸಿಸಿ ಚಾಂಪಿಯನ್ಸ್ ಟ್ರೋಫಿ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಜಯ ಸಾಧಿಸಿ ಟೀಂ ಇಂಡಿಯಾ ಫೈನಲ್ ಪ್ರವೇಶಿಸಿದ್ದು, ಮಾರ್ಚ್ 9ರಂದು ಭಾನುವಾರ ದುಬೈನ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆಯುವ ಹೈ–ವೋಲ್ಟೇಜ್ ಹಣಾಹಣಿಯಲ್ಲಿ ಪ್ರಶಸ್ತಿಗಾಗಿ ನ್ಯೂಜಿಲೆಂಡ್ ವಿರುದ್ಧ ಸೆಣಸಲಿದೆ. ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಟೀಂ ಇಂಡಿಯಾ ನ್ಯೂಜಿಲೆಂಡ್ ತಂಡವನ್ನು ಸೋಲಿಸಿತ್ತು. ನ್ಯೂಜಿಲೆಂಡ್ ತಂಡದ ಪ್ರಮುಖ ಆಟಗಾರ ಮ್ಯಾಟ್ ಹೆನ್ರಿ ಗಾಯಗೊಂಡಿದ್ದು, ಭಾರತದ ವಿರುದ್ಧ ಚಾಂಪಿಯನ್ಸ್ ಟ್ರೋಫಿ ಫೈನಲ್ ಪಂದ್ಯದಲ್ಲಿ ಆಡುವುದು ಅನುಮಾನವಾಗಿದೆ. ಬಹುನಿರೀಕ್ಷಿತ ಪಂದ್ಯಕ್ಕೂ ಮುನ್ನ, ನ್ಯೂಜಿಲೆಂಡ್ ತಂಡಕ್ಕೆ ಭಾರಿ ಹಿನ್ನಡೆಯಾಗಿದೆ. ಪಾಕಿಸ್ತಾನದ ಲಾಹೋರ್‌ನಲ್ಲಿ ಬುಧವಾರ ದಕ್ಷಿಣ ಆಫ್ರಿಕಾ ವಿರುದ್ಧ ನಡೆದ ಸೆಮಿಫೈನಲ್‌ನಲ್ಲಿ ಫೀಲ್ಡಿಂಗ್ ವೇಳೆ ಹೆನ್ರಿ ಅವರ ಭುಜಕ್ಕೆ ಪೆಟ್ಟಾಗಿತ್ತು. ಅವರಿನ್ನು ಚೇತರಿಸಿಕೊಳ್ಳದ ಹಿನ್ನೆಲೆಯಲ್ಲಿ ಫೈನಲ್ ಪಂದ್ಯದಿಂದ ಹೊರಗುಳಿಯುವ ಸಾಧ್ಯತೆ ದಟ್ಟವಾಗಿದೆ. ಭಾರತ ವಿರುದ್ಧದ ಲೀಗ್ ಹಂತದ ಪಂದ್ಯದಲ್ಲಿ ಐದು ವಿಕೆಟ್ ಕಬಳಿಸಿದ್ದ ಹೆನ್ರಿ, ಟೂರ್ನಿಯಲ್ಲಿ 10 ವಿಕೆಟ್‌ಗಳನ್ನು ಪಡೆದಿದ್ದರು. ಫೈನಲ್ ಪಂದ್ಯಕ್ಕೆ ದಿನಗಣನೆ ಆರಂಭವಾಗಿದ್ದು, ಹೆನ್ರಿ ಅವರ ಅಲಭ್ಯತೆ ಕುರಿತು ನ್ಯೂಜಿಲೆಂಡ್ ತಂಡಕ್ಕೆ ಚಿಂತೆಯಾಗಿದೆ.



**ಹೆನ್ರಿ ಬದಲಿ ಆಟಗಾರ ಯಾರು?:** ಚಾಂಪಿಯನ್ಸ್ ಟ್ರೋಫಿ ಫೈನಲ್‌ನಿಂದ ಒಂದು ವೇಳೆ ಮ್ಯಾಟ್ ಹೆನ್ರಿ ಹೊರಗುಳಿದರೆ, ನ್ಯೂಜಿಲೆಂಡ್ ತಂಡದಲ್ಲಿ ನಾಥನ್ ಸ್ಮಿತ್ ಮತ್ತು ಜಾಕೋಬ್ ಡಫಿ ಬ್ಯಾಕಪ್‌ಗಳಾಗಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ ಜಾಕೋಬ್ ಡಫಿ ಅವರು ನಾಥನ್ ಸ್ಮಿತ್‌ಗಿಂತ ಉತ್ತಮ ದಾಖಲೆ ಹೊಂದಿದ್ದು, ತಂಡದಲ್ಲಿ ಯಾರಿಗೆ ಅವಕಾಶ ಸಿಗಬಹುದು ಎನ್ನುವ ಕುತೂಹಲವಿದೆ. ಹೊಸ ಬಾಲ್ ಇದ್ದಾಗ ನಾಥನ್ ಸ್ಮಿತ್ ಅಷ್ಟೇನು ಉತ್ತಮ ಪ್ರದರ್ಶನ ನೀಡಿಲ್ಲದ ಕಾರಣ ಮ್ಯಾಟ್ ಹೆನ್ರಿ ಫೈನಲ್‌ನಿಂದ ಹೊರಗುಳಿದರೆ ಡಫಿ ಅವರಿಗೆ ಸ್ಥಾನ ಸಿಗುವ ಸಾಧ್ಯತೆ ಇದೆ.

**ಭಾರತ ವಿರುದ್ಧ ನ್ಯೂಜಿಲೆಂಡ್ ಸಂಭಾವ್ಯ ಆಡುವ ಬಳಗ:** ರಚಿನ್ ರವೀಂದ್ರ, ಡೆವೊನ್ ಕಾನ್ವೆ, ಕೇನ್ ವಿಲಿಯಮ್ಸನ್, ಡೆರಿಲ್ ಮಿಚೆಲ್, ಟಾಮ್ ಲ್ಯಾಥಮ್ (ವಿಕೆಟ್ ಕೀಪರ್), ಗ್ಲೆನ್ ಫಿಲಿಪ್ಸ್, ಮೈಕೆಲ್ ಬ್ರೇಸ್‌ವೆಲ್, ಮಿಚೆಲ್ ಸ್ಯಾಂಟ್ನರ್, ಕೈಲ್ ಜೇಮಿಸನ್, ಜಾಕೋಬ್ ಡಫಿ, ವಿಲಿಯಂ ಒ'ರೂರ್ಕ್

# ಶಮಿ ಬೆಂಬಲಕ್ಕೆ ನಿಂತ ಶಮಾ



ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರ ಫಿಟ್ನೆಸ್ ಬಗ್ಗೆ ಟೀಕೆ ಸಿದ್ದ ಕಾಂಗ್ರೆಸ್ ನಾಯಕಿ ಶಮಾ ಮೊಹಮ್ಮದ್ ಇದೀಗ ವೇಗಿ ಮೊಹಮ್ಮದ್ ಶಮಿ ಬೆಂಬಲಕ್ಕೆ ನಿಂತಿದ್ದಾರೆ. ಐಸಿಸಿ ಚಾಂಪಿಯನ್ಸ್ ಟ್ರೋಫಿ 2025 ಟೂರ್ನಿ ನಡೆಯುತ್ತಿದ್ದು, ಈ ಸಮಯದಲ್ಲಿ 'ರೋಜಾ' ಮಾಡದಿರಲು ಮೊಹಮ್ಮದ್ ಶಮಿ ನಿರ್ಧರಿಸಿದ್ದು ಟೀಕೆಗೆ ಗುರಿಯಾಗಿದೆ. ಪವಿತ್ರ ರಂಜಾನ್ ಮಾಸ ದಲ್ಲಿ 34 ವರ್ಷದ ಆಟಗಾರ ದುಬೈ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಆಸ್ಟ್ರೇಲಿಯಾ ವಿರುದ್ಧದ ಸೆಮಿಫೈನಲ್ ಹಣಾಹಣಿಯ ವೇಳೆ ಎನರ್ಜಿ ಡ್ರಿಂಕ್ ಸೇವಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಅಖಿಲ ಭಾರತ ಮುಸ್ಲಿಂ ಜಮಾತ್ ಅಧ್ಯಕ್ಷ ಮೌಲಾನಾ ಶಹಾಬುದ್ದೀನ್ ರಜ್ವಿ ಬರೇಲ್ವಿ, ರಂಜಾನ್ ಸಮಯದಲ್ಲಿ 'ರೋಜಾ' ಆಚರಿಸದಿದ್ದಕ್ಕಾಗಿ ಶಮಿ ಅವರನ್ನು ಕ್ರಿಮಿನಲ್ ಎಂದು ಕರೆದಿದ್ದು, ವಿವಾದಕ್ಕೆ ಕಾರಣವಾಗಿದೆ. 'ಇಸ್ಲಾಂನಲ್ಲಿ, ರಂಜಾನ್ ಸಮಯದಲ್ಲಿ ಬಹಳ ಮುಖ್ಯವಾದ ವಿಷಯವಿದೆ. ನಾವು ಪ್ರಯಾಣಿಸುವಾಗ, ರೋಜಾ (ಉಪವಾಸ) ಮಾಡುವ ಅಗತ್ಯವಿಲ್ಲ. ಮೊಹಮ್ಮದ್ ಶಮಿ ಕೂಡ ಪ್ರಯಾಣಿಸುತ್ತಿದ್ದಾರೆ ಮತ್ತು ಅವರು ತಮ್ಮ ಸ್ಥಳದಲ್ಲಿ ಇಲ್ಲ. ಅವರು ತುಂಬಾ ಬಾಯಾರಿಕೆ ಉಂಟಾಗುವ ಕ್ರೀಡೆಯನ್ನು ಆಡುತ್ತಿದ್ದಾರೆ. ಕ್ರೀಡೆಯಲ್ಲಿ ಪಾಲ್ಗೊಂಡಿರುವಾಗ ನೀವು ಉಪವಾಸ ಮಾಡಬೇಕು ಎಂದು ಯಾರೂ ಒತ್ತಾಯಿಸುವುದಿಲ್ಲ. ಉಪವಾಸ ಮಾಡುವುದು ಇಸ್ಲಾಮಿಕ್ ಆಚರಣೆಗಳ ಭಾಗವಾಗಿದ್ದರೂ, ಯಾರಾದರೂ ಕ್ರೀಡೆಯಲ್ಲಿ ಭಾಗವಹಿಸುವವರಿಗೆ ಇದು ಕಡ್ಡಾಯವಲ್ಲ. ಇಸ್ಲಾಂ ಒಂದು ಪ್ರಾಯೋಗಿಕ ವೈಜ್ಞಾನಿಕ ಧರ್ಮವಾಗಿದ್ದು, ಅನಗತ್ಯ ನಿರ್ಬಂಧಗಳನ್ನು ವಿಧಿಸುವುದಿಲ್ಲ ಎಂದು ಶಮಾ ಸುದ್ದಿಸಂಸ್ಥೆ ಎಎನ್‌ಐಗೆ ತಿಳಿಸಿದ್ದಾರೆ. ರೋಜಾ ಮಾಡದೆ ಅವರು ಅಪರಾಧ ಮಾಡಿದ್ದಾರೆ. ಅವರು ಇದನ್ನು ಮಾಡಬಾರದು. ಶರಿಯತ್ ದೃಷ್ಟಿಯಲ್ಲಿ ಅವರು ಅಪರಾಧಿ. ಅವರು ದೇವರಿಗೆ ಉತ್ತರಿಸ ಬೇಕಾಗುತ್ತದೆ. 'ರೋಜಾ' ಕಡ್ಡಾಯ ಕರ್ತವ್ಯಗಳಲ್ಲಿ ಒಂದಾಗಿದೆ ಮತ್ತು ಅದನ್ನು ಪಾಲಿಸದ ಯಾರಾದರೂ ಅಪರಾಧಿ' ಎಂದು ಎಎನ್‌ಐ ಜತೆ ಮಾತನಾಡಿದ ಮೌಲಾನಾ ಬರೇಲ್ವಿ ಹೇಳಿದರು.



# ನಿವೃತ್ತಿ ಹಿಂಪಡೆದ ಸುನಿಲ್ ಛೆಟ್ರಿ ಭಾರತದ ಪರ ಮತ್ತೆ ಕಣಕ್ಕೆ

ಸುನಿಲ್ ಛೆಟ್ರಿ ತಮ್ಮ ನಿವೃತ್ತಿಯ ನಿರ್ಧಾರ ಹಿಂತೆಗೆದು ಕೊಂಡಿದ್ದು, ಭಾರತ ತಂಡದ ಈ ಸ್ಟಾರ್ ಫಾರ್ವರ್ಡ್ ಆಟಗಾರ ಮತ್ತೊಮ್ಮೆ ನಿಲಿ ಜೆರ್ಸಿಯಲ್ಲಿ ಆಡುವುದನ್ನು ಕಾಣಬಹುದಾಗಿದೆ. ಭಾರತದ ಫುಟ್ಬಾಲ್ ತಾರೆ ಸುನಿಲ್ ಛೆಟ್ರಿ ತಮ್ಮ ಅಭಿಮಾನಿಗಳಿಗೆ ಸಿಹಿ ಸುದ್ದಿ ನೀಡಿದ್ದು, ತಮ್ಮ ನಿವೃತ್ತಿ ಹಿಂಪಡೆದಿದ್ದಾರೆ. ಈ ಬಗ್ಗೆ ಭಾರತೀಯ ಫುಟ್ಬಾಲ್ ಅಸೋಸಿಯೇಷನ್ ಮಾಹಿತಿ ನೀಡಿದ್ದು, ಸುನಿಲ್ ಛೆಟ್ರಿ ತಮ್ಮ ನಿವೃತ್ತಿ ಹಿಂಪಡೆದಿದ್ದಾರೆ. ಶೀಘ್ರದಲ್ಲೇ ಭಾರತ ತಂಡದ ಪರ ಕಣಕ್ಕಿಳಿಯಲಿದ್ದಾರೆ ಎಂದು ಹೇಳಿದೆ. ಹೌದು.. ಸುನಿಲ್ ಛೆಟ್ರಿ ತಮ್ಮ ನಿವೃತ್ತಿಯ ನಿರ್ಧಾರ ಹಿಂತೆಗೆದುಕೊಂಡಿದ್ದು, ಭಾರತ ತಂಡದ ಈ ಸ್ಟಾರ್ ಫಾರ್ವರ್ಡ್ ಆಟಗಾರ ಮತ್ತೊಮ್ಮೆ ನಿಲಿ ಜೆರ್ಸಿಯಲ್ಲಿ ಆಡುವುದನ್ನು ಕಾಣಬಹುದಾಗಿದೆ. ಭಾರತ ತಂಡದ ಮುಂದಿನ ವೇಳಾಪಟ್ಟಿಯಾದ ಎಎಫ್‌ಸಿ ಏಷ್ಯನ್ ಕಪ್ ನಲ್ಲಿ ಆಡುವುದನ್ನು ಕಾಣಬಹುದಾಗಿದೆ. 40 ವರ್ಷ ವಯಸ್ಸಿನ ಸುನಿಲ್ ಛೆಟ್ರಿ ಕಳೆದ ವರ್ಷ ಜೂನ್‌ನಲ್ಲಿ ನಿವೃತ್ತಿ ಘೋಷಿಸಿದ್ದರು.




ಆದರೆ ಸುಮಾರು 8 ತಿಂಗಳ ನಂತರ, ಅವರು ತಮ್ಮ ನಿವೃತ್ತಿ ಹಿಂಪಡೆದಿದ್ದು, ಇದೀಗ ಮತ್ತೆ ತಂಡಕ್ಕೆ ಮರಳುತ್ತಿದ್ದಾರೆ. ಪ್ರಸ್ತುತ ಎಎಫ್‌ಸಿ ಏಷ್ಯನ್ ಕಪ್ ಅರ್ಹತಾ ಸುತ್ತಿನ ಪಂದ್ಯಗಳು ನಡೆಯುತ್ತಿವೆ. ಭಾರತ ತಂಡ ಮಾರ್ಚ್ 25 ರಂದು ಬಾಂಗ್ಲಾದೇಶ ವಿರುದ್ಧ ಕಣಕ್ಕೆ ಇಳಿಯಲಿದೆ. ಈ ಪಂದ್ಯದಲ್ಲಿ ಟೀಮ್ ಇಂಡಿಯಾದ ಸೂಪರ್ ಸ್ಟಾರ್ ಫುಟ್ಬಾಲ್ ಆಟಗಾರ ಸುನಿಲ್ ಛೆಟ್ರಿ ಅಂಗಳಕ್ಕೆ ಇಳಿಯಲಿದ್ದಾರೆ ಎಂದು ಹೇಳಲಾಗಿದೆ. ಸುನಿಲ್ ಛೆಟ್ರಿ ತಮ್ಮ ನಿವೃತ್ತಿಯಿಂದ ಹಿಂತಿರುಗುತ್ತಿರುವುದು ಏಕೆ ಎಂಬ ಕಾರಣ ಇನ್ನು ತಿಳಿದು ಬಂದಿಲ್ಲ. ಇವರು ಮತ್ತೆ ಅಂತಾರಾಷ್ಟ್ರೀಯ ಟೂರ್ನಿಗಳಲ್ಲಿ ಆಡಲಿದ್ದಾರೆ ಎಂಬುದನ್ನು ಭಾರತೀಯ ಫುಟ್ಬಾಲ್ ಸಂಸ್ಥೆ ತನ್ನ ಸಾಮಾಜಿಕ ಖಾತೆಯಲ್ಲಿ ಹಂಚಿಕೊಂಡಿದೆ. ಈ ವೇಳೆ ಮತ್ತೆ ಛೆಟ್ರಿ ಅಂಗಳಕ್ಕೆ ಮರಳಲಿದ್ದಾರೆ ಎಂಬ ಮಾಹಿತಿಯನ್ನು

**ಛೆಟ್ರಿ ದಾಖಲೆ**

**ಅಂದಹಾಗೆ ಸುನಿಲ್ ಚೆಟ್ರಿ ಅಂತಾರಾಷ್ಟ್ರೀಯ ಫುಟ್ಬಾಲ್‌ನಲ್ಲಿ ಅತಿ ಹೆಚ್ಚು ಗೋಲುಗಳನ್ನು ಬಾರಿಸಿದ ಪ್ರಮುಖ ಆಟಗಾರರಾಗಿದ್ದಾರೆ. ಚೆಟ್ರಿ ಖಾತೆಯಲ್ಲಿ ಸದ್ಯ 94 ಗೋಲುಗಳು ಇವೆ. ಕಳೆದ ವರ್ಷ ಫಿಫಾ ವಿಶ್ವಕಪ್ 2026 ಅರ್ಹತಾ ಸುತ್ತಿನ ಪಂದ್ಯದಲ್ಲಿ ಕುವೈತ್ ವಿರುದ್ಧ 0-0 ಡ್ರಾ ಸಾಧಿಸಿದ ಬಳಿಕ ಛೆಟ್ರಿ ನಿವೃತ್ತಿ ಘೋಷಿಸಿದ್ದರು.**

# ತಮಿಳಿಗೆ ದುನಿಯಾ ವಿಜಯ್ ಪಾದಾರ್ಪಣೆ



ನಟಿ ನಯನತಾರಾ ನಾಯಕಿಯಾಗಿ ನಟಿಸಿರುವ, ಸುಂದರ್ ಸಿ ನಿರ್ದೇಶನದ ಮುಂಬರುವ 'ಮೂಕುತಿ ಅಮ್ಮನ್ 2' ಚಿತ್ರದ ಮೂಲಕ ಕನ್ನಡದ ನಟ ದುನಿಯಾ ವಿಜಯ್ ತಮಿಳು ಚಿತ್ರರಂಗಕ್ಕೆ ಪದಾರ್ಪಣೆ ಮಾಡುತ್ತಿದ್ದಾರೆ. ತಮ್ಮ ನೆಚ್ಚಿನ ನಟ ರಜನಿಕಾಂತ್ 'ಅರುಣಾಚಲಂ' ಚಿತ್ರವನ್ನು ನಿರ್ದೇಶಿಸಿದ ಅದೇ ನಿರ್ದೇಶಕ ರೊಂದಿಗೆ ಕೆಲಸ ಮಾಡುತ್ತಿರುವುದು ಪದಗಳಿಗೆ ಮೀರಿದಷ್ಟು ರೋಮಾಂಚನವನ್ನುಂಟುಮಾಡಿದೆ ಎಂದು ನಟ ಹೇಳಿದ್ದಾರೆ. ಐಎಎನ್‌ಎಸ್ ಜೊತೆ ಮಾತನಾಡಿದ ದುನಿಯಾ ವಿಜಯ್, 'ಇದು ನನಗೆ ತುಂಬಾ ಭಾವನಾತ್ಮಕ ಕ್ಷಣ. ಅವರು ವೇದಿಕೆ ಮೇಲೆ ನನ್ನ ಬಗ್ಗೆ ಮಾತನಾಡಿದರು. ನಾನು ನಿರ್ದೇಶಕ ಸುಂದರ್ ಸಿ ಅವರನ್ನು ಪ್ರೀತಿಸುತ್ತೇನೆ. ಅವರು, ಚಿತ್ರತಂಡ ಮತ್ತು ತಮಿಳುನಾಡಿನ ಜನರಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ' ಎಂದು ಹೇಳಿದರು. ದುನಿಯಾ ವಿಜಯ್ ಚಿತ್ರದಲ್ಲಿ ಖಳನಾಯಕನ ಪಾತ್ರದಲ್ಲಿ ನಟಿಸುತ್ತಿದ್ದಾರೆ. 'ನಾನು ರಜನಿಕಾಂತ್ ಸರ್ ಅವರ ದೊಡ್ಡ ಅಭಿಮಾನಿ. ಅವರನ್ನು ಭೇಟಿಯಾಗಬೇಕೆಂದು ಬಯಸಿ 30 ವರ್ಷಗಳ ಹಿಂದೆ ಇಲ್ಲಿಗೆ ಬಂದಿದ್ದೆ. ನಾನು 15 ದಿನಗಳ ಕಾಲ ಅಲ್ಲೇ ಇದ್ದೆ ಆದರೆ, ಆಗ ಅವರನ್ನು ಭೇಟಿಯಾಗಲು ಸಾಧ್ಯವಾಗಲಿಲ್ಲ, ನಂತರ ನಾನು ಕರ್ನಾಟಕಕ್ಕೆ ಹಿಂತಿರುಗಿ ಅಲ್ಲಿ ನಟನಾದೆ. ಕೆಲವು ವರ್ಷಗಳ ನಂತರ, ನಾನು ರಜನಿಕಾಂತ್ ಸರ್ ಅವರನ್ನು ಭೇಟಿಯಾದೆ. ಅವರು ನನ್ನ ಚಿತ್ರಗಳನ್ನು ನೋಡಿದ್ದರು ಮತ್ತು ಮೆಚ್ಚುಗೆ ಸೂಚಿಸಿದ್ದರು' ಎಂದು ಹೇಳಿದರು.



'ನನಗೆ ಸುಂದರ್ ಸಿ ಸರ್ ಅಂದ್ರೆ ತುಂಬಾ ಇಷ್ಟ. 26 ವರ್ಷಗಳ ಹಿಂದೆ ಅವರು ನಿರ್ದೇಶಿಸಿದ್ದ ಸೂಪರ್ ಸ್ಟಾರ್ ರಜನಿಕಾಂತ್ ನಟಿಸಿದ ಅರುಣಾಚಲಂ ಸಿನಿಮಾ ಮಾಡಿದಾಗ ನಾನು ಅವರ ಅಭಿಮಾನಿ ಆದೆ. ಸೂಪರ್ ಸ್ಟಾರ್ ರಜನಿಕಾಂತ್ ಅವರನ್ನು ನಿರ್ದೇಶಿಸಿದ ನಿರ್ದೇಶಕರ ಚಿತ್ರದಲ್ಲಿ ನಟಿಸುತ್ತಿರುವುದು ನನಗೆ ತುಂಬಾ ಖುಷಿ ತಂದಿದೆ' ಎಂದರು. ಕನಿಷ್ಠ 100 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗುವ ಈ ಪ್ಯಾನ್–ಇಂಡಿಯಾ ಚಿತ್ರದಲ್ಲಿ ದುನಿಯಾ ವಿಜಯ್ ಅವರು ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. 'ಈ ತಿಂಗಳ ಮಧ್ಯಭಾಗದಿಂದ ನಾನು ಈ ಚಿತ್ರಕ್ಕಾಗಿ ಕೆಲಸ ಮಾಡುತ್ತೇನೆ. ಮುಂದಿನ ತಿಂಗಳು ಈ ಚಿತ್ರಕ್ಕಾಗಿ ನಾನು ಮತ್ತೆ ಇಲ್ಲಿಗೆ ಬರುತ್ತೇನೆ. ಈ ಚಿತ್ರದಲ್ಲಿನ ನನ್ನ ಪಾತ್ರಕ್ಕಾಗಿ ನಾನು ಸುಮಾರು 40 ದಿನಗಳ ಕಾಲ ಚಿತ್ರೀಕರಣ ಮಾಡುತ್ತೇನೆ' ಎಂದು ಹೇಳಿದ್ದಾರೆ.




# ಫ್ಯಾನ್ಸ್ ಜೊತೆ ಬರ್ತ್‌ಡೇ ಆಚರಿಸಿದ ರಾಧಿಕಾ ಪಂಡಿತ್

ಸ್ಯಾಂಡಲ್‌ವುಡ್ ನಟಿ ರಾಧಿಕಾ ಪಂಡಿತ್‌ಗೆ ಶುಕ್ರವಾರ 41ನೇ ವರ್ಷದ ಹುಟ್ಟುಹಬ್ಬದ ಸಂಭ್ರಮ. ಈ ಹಿನ್ನೆಲೆ ಅಭಿಮಾನಿಗಳೊಂದಿಗೆ ನಟಿ ಬರ್ತ್‌ಡೇ ಆಚರಿಸಿದ್ದಾರೆ. ಸದ್ಯ ಸಿನಿಮಾದಿಂದ ರಾಧಿಕಾ ಅಂತರ ಕಾಯ್ದುಕೊಂಡಿದ್ದರೂ ಕೂಡ ಅವರ ಮೇಲಿನ ಅಭಿಮಾನಿಗಳ ಕ್ರೇಜ್ ಕಮ್ಮಿಯಾಗಿಲ್ಲ ಎಂಬುದಕ್ಕೆ ಇದೇ ತಾಜಾ ಉದಾಹರಣೆ. ನೆಚ್ಚಿನ ನಟಿಗೆ ಶುಭಹಾರೈಸಲು ಬೆಂಗಳೂರಿನ ರಾಧಿಕಾ ನಿವಾಸದ ಬಳಿ ಶುಕ್ರವಾರ ಫ್ಯಾನ್ಸ್ ಜಮಾಯಿಸಿದ್ದರು. ಮನೆಯ ಬಳಿ ಬಂದ ಅಭಿಮಾನಿಗಳೊಂದಿಗೆ ನಟಿ ಕೇಕ್ ಕತ್ತರಿಸಿ ಸಂಭ್ರಮಿಸಿದ್ದಾರೆ. ಫ್ಯಾನ್ಸ್ ಜೊತೆ ಕ್ಯಾಮರಾಗೆ ಪೋಸ್ ನೀಡಿದ್ದಾರೆ. ಈ ವೇಳೆ, ನೀಲಿ ಬಣ್ಣದ ಡೆನಿಮ್ ಡ್ರೆಸ್‌ನಲ್ಲಿ ಮುದ್ದಾಗಿ ಕಾಣಿಸಿಕೊಂಡಿದ್ದಾರೆ. ರಾಧಿಕಾಗೆ ವಿಶ್ ಮಾಡೋದರ ಜೊತೆ ಅವರ ಬ್ಯೂಟಿಗೆ ಅನೇಕರು ಮೆಚ್ಚುಗೆ ಸೂಚಿಸಿದ್ದಾರೆ. ಇನ್ನೂ ಪತಿ ಯಶ್ ಸಿನಿಮಾ ಕೆರಿಯರ್‌ಗೆ ಸಾಥ್ ನೀಡುತ್ತಾ ಮಕ್ಕಳ ಆರೈಕೆಯಲ್ಲಿ ತೊಡಗಿಸಿಕೊಂಡಿರುವ ರಾಧಿಕಾ ಕಮ್ ಬ್ಯಾಕ್‌ಗೆ ಫ್ಯಾನ್ಸ್ ಕಾಯ್ತಿದ್ದಾರೆ. ಅದ್ಯಾವಾಗ ಸಿನಿಮಾ ಕುರಿತು ಸಿಹಿಸುದ್ದಿ ಸಿಗಲಿದೆ ಎಂಬುದು ಕಾದುನೋಡಬೇಕಿದೆ. ಇನ್ನೂ ರಾಧಿಕಾ ಕಡೆಯದಾಗಿ 2019ರಲ್ಲಿ 'ಆದಿ ಲಕ್ಷ್ಮಿ ಪುರಾಣ' ಚಿತ್ರದಲ್ಲಿ ನಟಿಸಿದ್ದರು. ನಿರೂಪ್ ಭಂಡಾರಿಗೆ ಜೋಡಿಯಾಗಿ ಕಾಣಿಸಿಕೊಂಡಿದ್ದರು.

# 'ಭಗವಂತ ಕೇಸರಿ' ನಿರ್ದೇಶಕನ ಸಿನಿಮಾಗೆ ಮೆಗಾಸ್ಟಾರ್ ಚಿರಂಜೀವಿ ಗ್ರೀನ್ ಸಿಗ್ನಲ್


**ಹೊಸ ಸಿನಿಮಾದ ಬಗ್ಗೆ ಬಿಗ್ ನ್ಯೂಸ್**

ಮೆಗಾಸ್ಟಾರ್ ಚಿರಂಜೀವಿ ನಟನೆಯ 'ವಿಶ್ವಂಭರ' ಸಿನಿಮಾ ರಿಲೀಸ್‌ಗೂ ಮುನ್ನವೇ ಹೊಸ ಸಿನಿಮಾದ ಬಗ್ಗೆ ಬಿಗ್ ನ್ಯೂಸ್ ಸಿಕ್ಕಿದೆ. ಭಗವಂತ ಕೇಸರಿ ಡೈರೆಕ್ಟರ್ ಅನಿಲ್ ರವಿ ಪುಡಿ ಜೊತೆ ಸಿನಿಮಾ ಮಾಡಲು ಚಿರಂಜೀವಿ ಕೈಜೋಡಿಸಿದ್ದಾರೆ. ಸಿನಿಮಾ ಸಮಾರಂಭವೊಂದರಲ್ಲಿ ಮುಂದಿನ ಸಿನಿಮಾ ಬಗ್ಗೆ ಚಿರಂಜೀವಿ ಮಾತನಾಡಿ, ಅನಿಲ್ ರವಿಪುಡಿ ಜೊತೆ ಸಿನಿಮಾ ಮಾಡುತ್ತಿರೋದಾಗಿ ಅಧಿಕೃತವಾಗಿ ತಿಳಿಸಿದ್ದಾರೆ. ವಿಭಿನ್ನ ಕಥೆಯಲ್ಲಿ ಅವರು ಕಾಣಿಸಿಕೊಳ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಚಿರಂ ಜೀವಿ ನಟಿಸುತ್ತಿರುವ ಸಿನಿಮಾಗಳು ಗಲ್ಲಾಪೆಟ್ಟಿಗೆಯಲ್ಲಿ ಮಕಾಡೆ ಮಲ ಗುತ್ತಿದೆ. ಹಾಗಂತ ಫ್ಯಾನ್ಸ್ ಗೆ ಅವರ ಮೇಲಿರುವ ಕ್ರೇಜ್, ಅವರಿಗಿರುವ ಬೇಡಿಕೆ ಕಮ್ಮಿಯಾಗಿಲ್ಲ. ಬಿಗ್ ಬಜೆಟ್ ಸಿನಿಮಾಗಳೇ ಅವರನ್ನು ಅರಸಿ ಬರುತ್ತಿವೆ. ಸದ್ಯ ಅವರು ಸ್ಟಾರ್ ನಿರ್ದೇಶಕ ಅನಿಲ್ ರವಿಪುಡಿ ಚಿತ್ರಕ್ಕೆ ಚಿರಂಜೀವಿ ಓಕೆ ಎಂದಿದ್ದಾರೆ. ಅಂದಹಾಗೆ, ಚಿರಂಜೀವಿ ನಟನೆಯ ಬಹುನಿರೀಕ್ಷಿತ 'ವಿಶ್ವಂ ಭರ' ಚಿತ್ರವು ಮೇ 9ರಂದು ರಿಲೀಸ್ ಆಗಲಿದೆ. ಸಿನಿಮಾದಲ್ಲಿ ತ್ರಿಷಾ ಕೃಷ್ಣನ್, ಮೀನಾಕ್ಷಿ, ಆಶಿಕಾ ರಂಗನಾಥ್, ರಾವ್ ರಮೇಶ್ ಸೇರಿದಂತೆ ಅನೇಕರು ನಟಿಸಿದ್ದಾರೆ. ಇನ್ನೂ ಈ ಸಿನಿಮಾದ ಜೊತೆ ನಾನಿ ನಿರ್ಮಾಣದ ಸಿನಿಮಾ ಕೂಡ ಚಿರಂಜೀವಿ ಒಪ್ಪಿಕೊಂಡಿದ್ದಾರೆ.



# ನಿಶ್ಚಿತಾರ್ಥದ ಸಂಭ್ರಮದಲ್ಲಿ ಬಿಗ್ ಬಾಸ್ ಖ್ಯಾತಿಯ ರಂಜಿತ್

ಬಿಗ್ ಬಾಸ್ ಕನ್ನಡ 11'ರ ಸ್ಪರ್ಧಿ ರಂಜಿತ್ ಕುಮಾರ್ ಅವರು ಬಹುಕಾಲದ ಗೆಳತಿ ಮಾನಸಾ ಗೌಡ ಜೊತೆ ಎಂಗೇಜ್‌ಮೆಂಟ್ ಮಾಡಿಕೊಂಡಿದ್ದಾರೆ. ಈ ಸಂಭ್ರಮಕ್ಕೆ 'ಬಿಗ್ ಬಾಸ್ ಕನ್ನಡ 11'ರ ಸ್ಪರ್ಧಿಗಳು ಸಾಕ್ಷಿಯಾಗಿದ್ದಾರೆ. ಹಲವು ವರ್ಷಗಳಿಂದ ಪ್ರೀತಿಸುತ್ತಿದ್ದ ಮಾನಸಾ ಜೊತೆ ರಂಜಿತ್ ಕುಮಾರ್ ನಿಶ್ಚಿತಾರ್ಥ ಮಾಡಿಕೊಂಡಿದ್ದಾರೆ. ಗುರುಹಿರಿಯರ ಸಮ್ಮುಖದಲ್ಲಿ ಈ ಕಾರ್ಯಕ್ರಮ ಜರುಗಿದೆ. ಎಂಗೇಜ್‌ಮೆಂಟ್‌ನಲ್ಲಿ ವೈಟ್ ಬಣ್ಣದ ಕಾಸ್ಟ್ಯೂಮ್‌ನಲ್ಲಿ ರಂಜಿತ್ ಕಾಣಿಸಿಕೊಂಡಿದ್ರೆ, ಮಾನಸಾ ಕ್ರೀಮ್ ಕಲರ್ ಉಡುಗೆಯಲ್ಲಿ ಮಿಂಚಿದ್ದಾರೆ. ರಂಜಿತ್ ಎಂಗೇಜ್‌ಮೆಂಟ್‌ನಲ್ಲಿ ಶಿಶಿರ್, ಭವ್ಯಾ, ಐಶ್ವರ್ಯಾ, ಮೋಕ್ಷಿತಾ ಪೈ, ಅನುಷಾ ರೈ ಭಾಗಿಯಾಗಿ ಶುಭಕೋರಿದ್ದಾರೆ. ಸದ್ಯದಲ್ಲೇ ಹೊಸ ಬಾಳಿಗೆ ಕಾಲಿಡಲಿರುವ ರಂಜಿತ್‌ಗೆ ಫ್ಯಾನ್ಸ್ ಕೂಡ ಶುಭಕೋರುತ್ತಿದ್ದಾರೆ.



# ನಿರಂಜನ್ ಸುಧೀಂದ್ರಗೆ ಮಹಾಂತೇಶ್ ಆ್ಯಕ್ಷನ್ ಕಟ್

ಸ್ಯಾಂಡಲ್‌ವುಡ್‌ನ ಭರವಸೆಯ ನಾಯಕ ನಟರಾಗುವ ನಿರೀಕ್ಷೆ ಹುಟ್ಟಿಸಿರುವ ಉಪೇಂದ್ರ ಅವರ ಸಹೋದರನ ಪುತ್ರ ನಿರಂಜನ್ ಸುಧೀಂದ್ರ ಹೊಸ ಸಿನಿಮಾ 'ಸ್ಪಾರ್ಕ್' ಮೂಲಕ ಬರುತ್ತಿದ್ದಾರೆ. ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನಲ್ಲಿರುವ ಶ್ರೀ ಪ್ರಸನ್ನ ವೀರಾಂಜನೇಯ ಸ್ವಾಮಿ ದೇಗುಲದಲ್ಲಿಂದು ಚಿತ್ರದ ಮುಹೂರ್ತ ನೆರವೇರಿದೆ. 'ಸ್ಪಾರ್ಕ್' ಚಿತ್ರಕ್ಕೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಸಹೋದರ, ಎಂಎಲ್‌ಸಿ ಆಗಿರುವ ಚನ್ನರಾಜ್ ಹಟ್ಟಿಹೊಳಿ ಕ್ಲ್ಯಾಪ್ ಮಾಡಿದರು. ಉದ್ಯಮಿ ಅಂಕಿತಾ ವಸಿಷ್ಠ ಕ್ಯಾಮೆರಾಗೆ ಚಾಲನೆ ಕೊಟ್ಟರು. ಡಾರ್ಲಿಂಗ್ ಕೃಷ್ಣ, ಮಿಲನಾ ನಾಗರಾಜ್ ಹಾಗೂ ನವೀನ್ ಶಂಕರ್ ವಿಶೇಷ ಅತಿಥಿಯಾಗಿ ಆಗಮಿಸಿ ಇಡೀ ಚಿತ್ರತಂಡಕ್ಕೆ ಶುಭಾಶಯ ತಿಳಿಸಿದರು.

ಬಳಿಕ ನಿರ್ದೇಶಕರಾದ ಮಹಾಂತೇಶ್ ಹಂದ್ರಾಳ್ ಮಾತನಾಡಿ, 'ಸ್ಪಾರ್ಕ್' ನನ್ನ ಮೊದಲ ಸಿನಿಮಾ. ಇದೇ ತಿಂಗಳಾಂತ್ಯಕ್ಕೆ ಶೂಟಿಂಗ್ ಹೋಗುತ್ತಿದ್ದೇವೆ. ಬಹುತೇಕ ಶೂಟಿಂಗ್ ಬೆಂಗಳೂರಿನಲ್ಲಿಯೇ ಇರುತ್ತದೆ ಎಂದರು. ನಟ ನಿರಂಜನ್ ಸುಧೀಂದ್ರ ಮಾತನಾಡಿ, ಈ ಸಿನಿಮಾಗಾಗಿ ಮಹಾಂತೇಶ್ ಒಂದು ಅದ್ಭುತ ಕಥೆ ಬರೆದಿದ್ದಾರೆ. ಸ್ಪಾರ್ಕ್ ಅಂದರೆ ಪ್ರೆಸ್. ಅವರಿಗೆ ಇರುವ 'ಸ್ಪಾರ್ಕ್' ಇನ್ಯಾರಿಗೂ ಇರುವುದಿಲ್ಲ. ಯಾವುದೇ ವಿಷಯದ ಬಗ್ಗೆ ಮೊದಲು ಕಿಡಿ ಹತ್ತಿಸುವವರು ಅವರೇ. ನಮ್ಮ ಕಥೆಯಲ್ಲಿ ಚಿಕ್ಕ ಕಿಡಿ ಇದೆ. ಅದನ್ನು ಸ್ಪಾರ್ಕ್ ಚಿತ್ರದ ಮೂಲಕ ಅದ್ಭುತವಾಗಿ ಹೇಳಲು ಹೊರಟ್ಟಿದ್ದಾರೆ. ಸಿನಿಮಾದಲ್ಲಿ ನಾನು ಅಭಿರಾಮ್ ಎಂಬ ಜರ್ನಲಿಸ್ಟ್ ಪಾತ್ರ ಮಾಡುತ್ತಿದ್ದೇನೆ. ಈ ಚಿತ್ರಕ್ಕೆ ಇಬ್ಬರು ನಿರ್ಮಾಪಕರು ಸಾಥ್ ಕೊಟ್ಟಿದ್ದಾರೆ. 'ಸ್ಪಾರ್ಕ್' ಸಿನಿಮಾದ ಭಾಗವಾಗುತ್ತಿರುವುದು ಖುಷಿ ಕೊಟ್ಟಿದೆ ಎಂದರು.ನಿರ್ಮಾಪಕಿ ಗರಿಮಾ ಮಾತನಾಡಿ, ನನ್ನ ಕನಸು ನನಸಾಗಿದೆ. ಬಹಳ ಖುಷಿಯಾಗುತ್ತಿದೆ. ನಾನು ಮ್ಯೂಸಿಕ್ ಆಲ್ಬಂ ಮಾಡಬೇಕು ಎಂದುಕೊಂಡಿದ್ದೇನೆ ಎಂದಾಗ ನನ್ನ ಕುಟುಂಬ ಸಿನಿಮಾ ಮಾಡೋಲ್ವಾ ಎಂದರು. ನನ್ನ ಕುಟುಂಬದ ಬೆಂಬಲದಿಂದ ನಾನು ಇವತ್ತು ಮೊದಲ ಚಿತ್ರ ಮಾಡುತ್ತಿದ್ದೇನೆ. ಒಂದೊಳ್ಳೆ ತಂಡದ ಜೊತೆ ಕೆಲಸ ಮಾಡುತ್ತಿರುವುದು ಖುಷಿ ಕೊಟ್ಟಿದೆ ಎಂದು ಸಂತಸ ಹಂಚಿಕೊಂಡರು. ಜೇಮ್ಸ್, ಭರಾಟೆ, ಕನಕ ಸೇರಿದಂತೆ 15ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಕೋ ಡೈರೆಕ್ಟರ್ ಆಗಿ ದುಡಿದಿರುವ ಡಿ.ಮಹಾಂತೇಶ್ ಹಂದ್ರಾಳ್ ಡೈರೆಕ್ಟರ್ ಕುರ್ಚಿ ಅಲಂಕರಿಸುತ್ತಿದ್ದಾರೆ. ಚೇತನ್ ಕುಮಾರ್, ಆರ್.ಚಂದ್ರು ಅವರ ಗರಡಿಯಲ್ಲಿ ನಿರ್ದೇಶನದ ಪಟುಗಳನ್ನು ಕಲಿತಿರುವ ಮಹಾಂತೇಶ್ ಈಗ ಪೂರ್ಣ ಪ್ರಮಾಣದ ನಿರ್ದೇಶಕರಾಗಿ ಮೊದಲ ಹೆಜ್ಜೆ ಇಡುತ್ತಿದ್ದಾರೆ. ಅವರ ಚೊಚ್ಚಲ ಪ್ರಯತ್ನದಲ್ಲಿ ನಾಯಕನಾಗಿ ನಿರಂಜನ್ ಸುಧೀಂದ್ರ ಅಭಿನಯಿಸುತ್ತಿದ್ದಾರೆ.ಡಿ.ಮಹಾಂತೇಶ್ ಹಂದ್ರಾಳ್ ಆಕ್ಷನ್ ಥ್ರಿಲ್ಲರ್ ಕಥೆಯನ್ನು ಎಣೆದಿದ್ದಾರೆ. ನೈಜ ಘಟನೆಯಿಂದ ಸ್ಫೂರ್ತಿ ಪಡೆದಿರುವ ಈ ಸಿನಿಮಾ ಮೂಲಕ ಕನ್ನಡ ಚಿತ್ರರಂಗಕ್ಕೆ ಹೊಸ ನಿರ್ಮಾಪಕರ ಆಗಮನವಾಗುತ್ತಿದೆ.




ಮಹಾಂತೇಶ್ ವಿಷನ್ ಗೆ ಡಾ.ಗರಿಮಾ ಅವಿನಾಶ್ ವಸಿಷ್ಠ ಸಾಥ್ ಕೊಡುತ್ತಿದ್ದಾರೆ. ಸಾಫ್ಟ್‌ವೇರ್ ಉದ್ಯೋಗಿಯಾಗಿರುವ ಅವಿನಾಶ್, ಗರಿಮಾ ಅವಿನಾಶ್ ಪ್ರೊಡಕ್ಷನ್ ಎಂಬ ನಿರ್ಮಾಣ ಸಂಸ್ಥೆ ಪ್ರಾರಂಭಿಸಿದ್ದಾರೆ. ಈ ನಿರ್ಮಾಣ ಸಂಸ್ಥೆ ಪ್ರಥಮ ಸಿನಿಮಾವನ್ನು ನಿರಂಜನ್ ಸುಧೀಂದ್ರಗೆ ಮಾಡುತ್ತಿದ್ದಾರೆ. ನಾಯಕಿಯಾಗಿ ರಚನಾ ಇಂದರ್ ಸಾಥ್ ಕೊಡುತ್ತಿದ್ದಾರೆ. ಇನ್ನು, ಅನುಭವಿ ತಾಂತ್ರಿಕ ವರ್ಗ ಚಿತ್ರದಲ್ಲಿದೆ. ಅಶ್ವಿನ್ ಕೆನಡಿ ಛಾಯಾಗ್ರಹಣ, ಸಚಿನ್ ಬಸ್ರೂರ್ ಸಂಗೀತ ನಿರ್ದೇಶನ, ಮಧು ಸಂಕಲನ ಈ ಚಿತ್ರಕ್ಕಿದೆ. ಈ ತಿಂಗಳಾಂತ್ಯಕ್ಕೆ ಚಿತ್ರತಂಡ ಶೂಟಿಂಗ್ ಅಖಾಡಕ್ಕೆ ಇಳಿಯಲಿದ್ದು, ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.


Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966